
ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

ಜುಲೈ 7, 2010 ರೂ. 12/-

'ದೇಶ' ವಿದೇನಹಾ
'ಕಾಲ' ವಿದೇನಹಾ


ಎರಡು ವರ್ಷದ ಸಾಧನೆ





ಬಲಿ!

ನೆಂಟರಿಗೇ
ಸೈಟು!



ರಗಾಕೋರ
ನೇಗಿ

BBMP



ರಸ್ತೆ ಅಗಲೀಕರಣ ಎಂಬ
ಜನದ್ರೋಹ

ರ್ವತೀಪುರದ ಮಾಫಿಯಾ: ಪಿಟ್ಟ ಇಟ್ಟ ಮುಹೂರ್ತ

ಅಂಬೇಡ್ಕರ್ V/s ಗಾಂಧಿ

ಭಾರತದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಮಾತನಾಡುವಾಗಲೆಲ್ಲಾ ನಮ್ಮೆಲ್ಲಾ ರಾಷ್ಟ್ರೀಯ ನಾಯಕರನ್ನು ಪರಸ್ಪರ ಯಾವುದೇ ವೈರುಧ್ಯಗಳಿಲ್ಲದ, ವಿರುದ್ಧ ದೃಷ್ಟಿಕೋನಗಳಿಲ್ಲದ ಒಂದೇ ಬಗೆಯ ನಾಯಕರೆಂಬಂತೆ ಚಿತ್ರಿಸುವುದು ಒಂದು ಅಪಾಯಕಾರಿ ಪರಿಪಾಠವಾಗಿ ಬಿಟ್ಟಿದೆ. ಇದು ಆಳುವ ವರ್ಗ ತಮ್ಮ ವರ್ತಮಾನದ ಅಗತ್ಯಕ್ಕೆ ತಕ್ಕಂತೆ ಇತಿಹಾಸವನ್ನೂ ಪುನರ್‌ರೂಪಿಸುವ ಕುತಂತ್ರದ ಭಾಗ. ಅಷ್ಟು ಮಾತ್ರವಲ್ಲ ಭಾರತದ ಕಾಂಗ್ರೆಸ್ ಮಾದರಿ ರಾಷ್ಟ್ರೀಯವಾದಿ ಇತಿಹಾಸವನ್ನೇ ಅಧಿಕೃತ ಇತಿಹಾಸವನ್ನಾಗಿ ಮಾಡುವ ಪ್ರಯತ್ನವಿದು. ಆದರೆ ನಮ್ಮ ರಾಷ್ಟ್ರೀಯ ಹೋರಾಟದಲ್ಲಿ ಹಲವು ಕವಲುಗಳಿದ್ದವು. ಗಾಂಧಿ ಮತ್ತು ಅವರು ಪ್ರತಿನಿಧಿಸಿದ ರಾಷ್ಟ್ರೀಯವಾದ ಅದರಲ್ಲಿ ಒಂದು ಧಾರೆ. ಬೇಕೆಂದರೆ ಪ್ರಮುಖ ಧಾರೆಯೆಂದೂ ಭಾವಿಸಬಹುದು.



ಗಾಂಧಿಯವರಿಗೆ ಬ್ರಿಟಿಷ್ ವಸಾಹತು ಶಾಹಿಯೆಂಬುದು ಭಾರತದ ಆರ್ಷೇಯ ನಾಗರಿಕತೆಯ ಮೇಲೆ ನಡೆಸಿದ ದಾಳಿಯಾಗಿತ್ತು. ಹೀಗಾಗಿ ಸಾಂಸ್ಕೃತಿಕವಾಗಿ ಭಾರತ ತನ್ನ ಅಂತಃಸತ್ವವನ್ನು ಉಳಿಸಿಕೊಳ್ಳುವುದೇ ಅವರ ಮಟ್ಟಿಗೆ 'ಸ್ವರಾಜ್'ನ ಪ್ರಮುಖ ಲಕ್ಷ್ಯವಾಗಿತ್ತು. ಅವರ ಮಟ್ಟಿಗೆ ಬ್ರಿಟಿಷ್ ವಸಾಹತುಶಾಹಿಯೆಂದರೆ ವಿನಾಶಕಾರಿ ಆಧುನಿಕತೆಯ ಪ್ರತೀಕವಾಗಿತ್ತು. ಅದಕ್ಕೆ ಪ್ರತಿಯಾಗಿ ಗಾಂಧಿಯವರಿಗೆ ಭಾರತವು ಅದರಲ್ಲೂ ಗ್ರಾಮ ಭಾರತವು ಒಂದು ಆದರ್ಶ ಸಾಮಾಜಿಕ ಸಂಘಟನೆಗೆ ಸಂಕೇತವಾಗಿತ್ತು. ನಂತರದಲ್ಲಿ ಅಂಬೇಡ್ಕರ್ ಜೊತೆಗಿನ ಮುಖಾಮುಖಿಯಿಂದಾಗಿ ಗಾಂಧಿಗೆ ಗ್ರಾಮಭಾರತದಲ್ಲಿನ ಜಾತಿ ವ್ಯವಸ್ಥೆಯ ಕರಾಳಮುಖವನ್ನು ನೋಡಲು ಸಾಧ್ಯವಾದದ್ದು ನಿಜವಾದರೂ ಅದು ಭಾರತದ ಸನಾತನ ಸಂಸ್ಕೃತಿ, ಹಿಂದೂ ಧರ್ಮಗಳ ಬಗ್ಗೆ ಅವರಿಗಿದ್ದ ನಂಬಿಕೆಗಳ ಬುಡವನ್ನೇನೂ ಅಲುಗಾಡಿಸಲಿಲ್ಲ.

ಅದಕ್ಕೆ ತದ್ವಿರುದ್ಧವಾದದ್ದು ಅಂಬೇಡ್ಕರ್‌ರ ರಾಷ್ಟ್ರೀಯವಾದ. ಬ್ರಿಟಿಷ್ ಸಾಮ್ರಾಜ್ಯಶಾಹಿಯಿಂದ ವಿಮುಕ್ತಿ ಪಡೆಯುವುದು ಅಂಬೇಡ್ಕರರಿಗೆ ಮುಖ್ಯವಾಗಿದ್ದರೂ ಅದರಷ್ಟೇ ಅವರಿಗೆ ಮುಖ್ಯವಾಗಿದ್ದದ್ದು ಆಂತರಿಕ ವಸಾಹತುಶಾಹಿಯಾದ ಬ್ರಾಹ್ಮಣಶಾಹಿ ಮತ್ತು ಜಾತಿ ವ್ಯವಸ್ಥೆಗಳಿಂದ ವಿಮುಕ್ತಿ ಪಡೆಯುವುದಾಗಿತ್ತು. ಪಾಶ್ಚಿಮಾತ್ಯ ಆಧುನಿಕತೆಯೆಂದರೆ ಸಾಮ್ರಾಜ್ಯಶಾಹಿ ದಮನ ಎಂಬ ಸಮೀಕರಣವನ್ನು ಅವರು ಒಪ್ಪಲಿಲ್ಲ. ಪಾಶ್ಚಿಮಾತ್ಯ ಆಧುನಿಕತೆಯ ವಿಕಾಸ ಕ್ರಮದಲ್ಲಿ ಅದು ಊಳಿಗಮಾನ್ಯ ವ್ಯವಸ್ಥೆಯನ್ನು ನಾಶ ಮಾಡುವ ಸೈದ್ಧಾಂತಿಕ ಮತ್ತು ರಾಜಕೀಯ ಪರಿಕರಗಳಿಗೂ ಜನ್ಮ ನೀಡಿದ್ದು ಅಂಬೇಡ್ಕರ್‌ಗೆ ಅತ್ಯಂತ ಪ್ರಮುಖವಾಗಿತ್ತು. ಭಾರತದ ಊಳಿಗಮಾನ್ಯ ವ್ಯವಸ್ಥೆಯ ಕ್ರೂರ ಸಾಮಾಜಿಕ ಉತ್ಪನ್ನವಾದ ಜಾತಿ ವ್ಯವಸ್ಥೆಯನ್ನು ಸಡಿಲಗೊಳಿಸಲು ಅವರು ಪ್ರಾಚೀನವಾದ ಬೌದ್ಧ ಚಿಂತನೆಗಳಷ್ಟೇ ಪಾಶ್ಚಿಮಾತ್ಯ ಉದಾರವಾದಿ ಚಿಂತನೆಗಳನ್ನು ಬಳಸಿಕೊಂಡರು.

ಇದಲ್ಲದೆ ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಗತ್ ಸಿಂಗ್ ಮತ್ತು ಕಮ್ಯುನಿಸ್ಟರ ವಸಹಾತುಶಾಹಿ ವಿರೋಧಿ ಧಾರೆ ಸ್ವಾತಂತ್ರ್ಯದ ಅರ್ಥವನ್ನು ರಾಜಕೀಯಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳದೆ ಸಾಮಾಜಿಕ ಅಥವಾ ಅದಕ್ಕಿಂತ ಹೆಚ್ಚಾಗಿ ಆರ್ಥಿಕ ಸಮಾನತೆಗಾಗಿನ ಸ್ವಾತಂತ್ರ್ಯವೆಂದು ವಿಸ್ತರಿಸಿ ಸ್ವಾತಂತ್ರ್ಯಕ್ಕೆ ಮರುವ್ಯಾಖ್ಯಾನ ಮಾಡಿದರು. ಆ ನಿಟ್ಟಿನಲ್ಲಿ ಏಕಕಾಲದಲ್ಲಿ ಬ್ರಿಟಿಷ ವಸಾಹತುಶಾಹಿಯ ವಿರುದ್ಧವೂ, ಅವರ ಸ್ಥಳೀಯ ದಲ್ಲಾಳಿಗಳ ವಿರುದ್ಧವೂ ಹೋರಾಟಗಳನ್ನು ಕಟ್ಟುತ್ತಿದ್ದರು.

ಈ ವಿಭಿನ್ನ ವಸಾಹತುಶಾಹಿ ವಿರೋಧಿ ಧಾರೆಗಳು ಕೊಡುವ ಬಿಂದುಗಳಿದ್ದಂತೆ ಅವುಗಳ ನಡುವೆ ಸತತ ಸಂಘರ್ಷಗಳೂ ಇದ್ದವು. ಆ ಸಂಘರ್ಷ ಈ ಕಾಲಕ್ಕೂ ಅತಿ ಮುಖ್ಯ. ಏಕೆಂದರೆ ಅಂದು ಸ್ವಾತಂತ್ರ್ಯದ ವ್ಯಾಖ್ಯಾನಗಳ ಕುರಿತಾಗಿ ಇದ್ದ ಸಂಘರ್ಷವೇ ಇಂದು ಅಭಿವೃದ್ಧಿ ಮತ್ತು ಆಧುನಿಕತೆಯ ಕುರಿತಾದ ಸಂಘರ್ಷವಾಗಿ ರೂಪಾಂತರಗೊಂಡಿದೆ.

ಸ್ವಾತಂತ್ರ್ಯಾನಂತರದಲ್ಲಿ ಆಧುನಿಕತೆಯ ಹೆಸರಿನಲ್ಲಿ ಹಾಗೂ 'ನೆಹರೂ ಸಮಾಜವಾದದ' ಹೆಸರಿನಲ್ಲಿ ಭಾರತ ಅನುಸರಿಸಿದ್ದು ರೂಪದಲ್ಲಿ ಮಾತ್ರ ಸಮಾಜವಾದಿ ಚಹರೆಗಳನ್ನುಳ್ಳ ಆದರೆ ಸಾರಾಂಶದಲ್ಲಿ ಬಂಡವಾಳಶಾಹಿಯೇ ಆಗಿದ್ದ ಅಭಿವೃದ್ಧಿ ಮಾದರಿಯನ್ನು. ಆನಂತರ ಜಾಗತೀಕರಣದ ಹೆಸರಿನಲ್ಲಿ ಭಾರತದ ಜನತೆಯ ಮೇಲೆ ಜಗತ್ತಿನ ಬಂಡವಾಳಿಗರು ನಡೆಸಿರುವ ದಾಳಿಗೆ 'ನೆಹರೂ ಸಮಾಜವಾದಿ' ಮಾದರಿಯಲ್ಲೇ ಬೀಜಗಳಿತ್ತು. ನಂತರದಲ್ಲಿ ಪರ್ಯಾಯವನ್ನು ಕಾಣಿಸಬಹುದಾಗಿದ್ದ ಕಮ್ಯುನಿಸ್ಟರೂ ಸಹ ಆಧುನಿಕತೆಯ ವರ್ಗ ಸ್ವರೂಪವನ್ನು ಪ್ರಶ್ನಿಸುವುದನ್ನು ಕೈಬಿಟ್ಟರು. ಈ ಕುರುಡಿನಲ್ಲಿ ಕೆಲವು ಸ್ಥಾವರವಾದೀ ಕಮ್ಯುನಿಸ್ಟರೂ ಸಹ ಪರ್ಯಾಯ ಸಮಾಜವಾದಿ ಆಧುನಿಕತೆಯನ್ನು ಕಟ್ಟದೆ ಬಂಡವಾಳಶಾಹಿ ಅಭಿವೃದ್ಧಿಗೇ ಮಾನವೀಯ ಮುಖ ತೊಡಿಸಲು ಪ್ರಯತ್ನಿಸಿದರು. ಆದರೆ ಜಾಗತೀಕರಣ ಎಂತಹ ಕ್ರೂರ ಬಂಡವಾಳಶಾಹಿ ಆಕ್ರಮಣವಾಗಿದೆಯೆಂದರೆ ಈ ಕಾಲಘಟ್ಟದಲ್ಲಿ ಆ ಬಗೆಯ ಮಾನವೀಯ ಮುಖವಾಡವನ್ನೂ ಅದು ಸಹಿಸಿಕೊಳ್ಳುತ್ತಿಲ್ಲ. ಹೀಗಾಗಿಯೇ ಪರ್ಯಾಯ ಸಮಾಜವಾದಿ ಆಧುನಿಕತೆಯನ್ನು ಕಟ್ಟದೆ 'ಮಾನವೀಯ ಮುಖವಾಡದ' ಬಂಡವಾಳಶಾಹಿಯನ್ನೇ ಕಟ್ಟಿದ ಬಂಗಾಳ ಮತ್ತು ಕೇರಳಗಳಲ್ಲಿ ಸಹ ದೇಶದ ಇತರ ಭಾಗಗಳಲ್ಲಿ ಇರುವಂಥ ನರಕವನ್ನೇ ಸೃಷ್ಟಿಸಿಕೊಂಡಿರುವುದನ್ನು ನೋಡುತ್ತಲೇ ಇದ್ದೇವೆ.

ಆದರೆ ಆಧುನಿಕತೆಯೆಂದರೇ ಯಂತ್ರ ನಾಗರಿಕತೆ ಎಂದು ವಿರೋಧಿಸುತ್ತಾ ಸನಾತನವಾದದ್ದನ್ನು ಎತ್ತಿ ಹಿಡಿಯುತ್ತಾ ಬಂದ ಗಾಂಧಿ ಮತ್ತು ಗಾಂಧೀವಾದಿಗಳಿಗೆ ಗ್ರಾಮಭಾರತದ ಊಳಿಗಮಾನ್ಯ ಕ್ರೌರ್ಯ ಕೊನೆಗೂ ಸಮಗ್ರವಾಗಿ ಅರ್ಥವಾಗಲೇ ಇಲ್ಲ. ಊಳಿಗಮಾನ್ಯ ವ್ಯವಸ್ಥೆಯ ವಿಕೃತ ಉತ್ಪನ್ನವಾದ ಜಾತಿ ವ್ಯವಸ್ಥೆಯ ಜೊತೆ ಗಾಂಧಿ ಮತ್ತು ಗಾಂಧೀವಾದಿಗಳು ಅನುಸಂಧಾನ ಮಾಡಿಕೊಂಡಿರುವ ಬಗೆಯಲ್ಲೇ ಅದರ ಮಿತಿ ಎದ್ದುಕಾಣುತ್ತದೆ. ಎರಡು ಪ್ರಪಂಚ ಯುದ್ಧಗಳು, ಕ್ರಾಂತಿಯ ನಂತರದ ಎರಡು ಮೂರು ದಶಕಗಳಲ್ಲೇ ಮತ್ತೆ ಬಂಡವಾಳಶಾಹಿ ದಾರಿಯನ್ನೇ ಹಿಡಿದ ರಷ್ಯಾ ಮತ್ತು ಚೀನಾಗಳು ಹಾಗೂ ಇತ್ತೀಚೆಗೆ ಜಾಗತೀಕರಣದ ಕಾಲಘಟ್ಟದಲ್ಲಿ ನಿರ್ಗತೀಕರಣವಾಗುತ್ತಿರುವ ಬಡವರ ಬದುಕು. ಎಲ್ಲವೂ ಆಧುನಿಕತೆಗೆ ಎಂಥಾ ಕ್ರೌರ್ಯ ಸಾಧ್ಯ ಎಂಬುದನ್ನು ಸಾಬೀತು ಮಾಡಿದೆ, ನಿಜ. ಆದರೆ ಊಳಿಗಮಾನ್ಯ ಕ್ರೌರ್ಯ ಮತ್ತು ಜಾತಿ ವ್ಯವಸ್ಥೆಯ ಕ್ರೌರ್ಯ ಇವುಗಳ ನಿವಾರಣೆಗೆ ಗಾಂಧಿ ಪ್ರಣೀತ ನಾಗರಿಕತೆಯಲ್ಲಿ ಇದ್ದ ಪರಿಹಾರಗಳೇನು?


ವಾಸ್ತವವಾಗಿ ಸಮಾಜವಾದಿ ಪ್ರಯತ್ನಗಳನ್ನೂ ಸಹ ಸುಲಭವಾಗಿ ಬಂಡವಾಳಶಾಹಿ ನಾಗರಿಕತೆಯ ಭಾಗ ಎಂದು ವರ್ಗೀಕರಿಸುವ ಗಾಂಧೀವಾದಿಗಳು ಈ ಪ್ರಶ್ನೆಗಳು ಮುಖಾಮುಖಿಯಾದಾಗ ಮಾತ್ರ ಕಷ್ಟಕ್ಕೆ ಬೀಳುತ್ತಾರೆ. ಸಾಕ್ಷಾತ್ ಗಾಂಧಿ ಸಹ "ಹಿಂದ್ ಸ್ವರಾಜ್"ನಲ್ಲಾಗಲೀ, ನಂತರದ ತಮ್ಮ ರಾಜಕೀಯ ಚಿಂತನೆಗಳಲ್ಲಾಗಲೀ ಇದಕ್ಕೆ ಯಾವುದೇ ಉತ್ತರವನ್ನು ನೀಡಲಾಗಿಲ್ಲ. ಅಂಬೇಡ್ಕರ್ ಜೊತೆಗೆ ನಡೆದ ಮುಖಾಮುಖಿಯಲ್ಲಿ ಅವರು ಅಂತಿಮ ದಿನಗಳಲ್ಲಿ ಅಸ್ಪೃಶ್ಯತೆ ವಿರೋಧದ ಜೊತೆಜೊತೆಗೆ ಅಂತರ್ಜಾತಿ ಮದುವೆಯನ್ನು ಎತ್ತಿಹಿಡಿಯುವವರೆಗೆ ಬಂದಿದ್ದರೆಂದು ಹೇಳಲಾಗುತ್ತದೆ. ಆದರೆ ಜಾತಿ ವ್ಯವಸ್ಥೆಯೇ ಒಂದು ಕ್ರೌರ್ಯವೆಂದು ಕೊನೆಗೂ ಗಾಂಧಿ ಹೇಳಲಾಗಲಿಲ್ಲ. ಜಾತಿವಿನಾಶಕ್ಕೆ ಮತ್ತು ಅದಕ್ಕೆ ಕಾರಣವಾಗಿರುವ ಹಿಂದೂ ಧರ್ಮದಿಂದ ಹೊರಬರಲಾಗಲಿಲ್ಲ. ಇದಕ್ಕೆ ಮೂಲ ಕಾರಣ ಗಾಂಧಿಯವರು ಅಪ್ಪಿಕೊಂಡದ್ದು ಭಾರತೀಯ ಸನಾತನ ಪರಂಪರೆಯ ಭಾಗವಾಗಿಯೇ ಇರುವ ಬುದ್ಧನನ್ನೂ ಅಲ್ಲ, ಚಾರ್ವಾಕ ಇತ್ಯಾದಿ



ಚಾರ್ವಾಕ

▸ ಶಿವಸುಂದರ್

ವಿಮರ್ಶಾ ಜನಪರಂಪರೆಗಳನ್ನಲ್ಲ. ಭಾರತೀಯ ಪರಂಪರೆಯಲ್ಲಿ ಅವರು ಅಪ್ಪಿಕೊಂಡಿದ್ದು ಯಾವ ಊಳಿಗಮಾನ್ಯ ಸಂಸ್ಕೃತಿಯಿಂದ ಜಾತಿ ವ್ಯವಸ್ಥೆ ಸೃಷ್ಟಿಯಾಯಿತೋ ಅದರ ಸಿದ್ಧಾಂತಗಳನ್ನು, ಅದರ ಪ್ರವರ್ತಕರನ್ನು. ಆದರೆ ನಿತ್ಯ ಸತ್ಯವಾದ ಜಾತಿ ಕ್ರೌರ್ಯವನ್ನು ನಿರಾಕರಿಸಲಾಗದಂತೆ ಎಚ್ಚೆತ್ತ ದಲಿತ ಪ್ರಜ್ಞೆ ಅಂಬೇಡ್ಕರ ರೂಪದಲ್ಲಿ ದೇಶದ ಮುಂದಿಟ್ಟಾಗ ಗಾಂಧಿ ಪ್ರಣೀತ ಸನಾತನ ಪ್ರಜ್ಞೆಯೊಳಗೂ ಒಂದಷ್ಟು ತಳಮಳ ಉಂಟಾದದ್ದು ಸತ್ಯ. ಆದರೆ ಅದು ನೀಗಿಕೊಂಡ ಬಗೆ ಮಾತ್ರ ಜಾತಿ ವಿನಾಶದ ಕಡೆಗಿರಲಿಲ್ಲ.



ಗಾಂಧಿಯನ್ನಾಗಲೀ ಅಥವಾ ಇಂದಿನ ಗಾಂಧೀವಾದಿಗಳನ್ನಾಗಲೀ ಜಾತಿ ಕ್ರೌರ್ಯದ ಪ್ರತಿಪಾದಕರ ಪಟ್ಟಿಗೆ ಸೇರಿಸುವ ತಪ್ಪನ್ನು ಕೆಲವು ಅತ್ಯುತ್ಸಾಹಿ ಪ್ರಗತಿಪರರು ಮಾಡುತ್ತಾರೆ. ಅವರು ಖಂಡಿತಾ ಜಾತಿ ಕ್ರೌರ್ಯದ ಸಮರ್ಥಕರಲ್ಲ. ಆದರೆ ಅದೇ ಸಮಯದಲ್ಲಿ ಅವರು ಜಾತಿ ವ್ಯವಸ್ಥೆಯೆಂಬುದೇ ಕ್ರೌರ್ಯವೆಂದೂ ಒಪ್ಪಲಿಲ್ಲ! ಅವರ ಪ್ರಕಾರ ಜಾತಿ ವ್ಯವಸ್ಥೆ ಒಂದು ಉತ್ತಮ ಸಾಮಾಜಿಕ ಸಂಘಟನೆ. ಆದರೆ ಇತಿಹಾಸದಲ್ಲಿ ಕೆಲವು ಅಸ್ಪೃಶ್ಯತೆಯಂತ ವಿಕೃತಿಗಳು ಅದರೊಡನೆ ಸೇರಿಕೊಂಡು ಅದರ ಮೂಲ ಸ್ವರೂಪದ ಅಂದಗೆಡಿಸಿವೆ. ಇದು ಅವರ ನಿಲುವು. ಸಮಾಜದಲ್ಲಿ ಪ್ರಾಣಿಗಿಂತಲೂ ಕೀಳಾಗಿ ಬದುಕುತ್ತಿರುವವರನ್ನು ಕಂಡಾಗ ಅವರಲ್ಲಿ ಮಾನವೀಯ ಅನುಕಂಪ ಮಿಡಿಯುತ್ತದೆ. ಆದರೆ ಅದಕ್ಕೆ ಕಾರಣವಾದ ಜಾತಿ ವ್ಯವಸ್ಥೆಯ ಶ್ರೇಣೀಕರಣದ ಬಗ್ಗೆ ಮಾತ್ರ ಅವರಿಗೆ ಯಾವುದೇ ತಕರಾರಿರುವುದಿಲ್ಲ.

ಹೀಗಾಗಿ ಮೂಲದಲ್ಲಿ ಯಾವುದೇ ಬದಲಾವಣೆಯನ್ನು ತರದ ಆದರೆ ವರ್ತನೆಯಲ್ಲಿ ಇನ್ನಷ್ಟು ಮಾನವೀಯಗೊಳಿಸಬಹುದಾದ ಕ್ರಮಗಳಿಗಷ್ಟೇ ಅವರು ಮುಂದಾಗುತ್ತಾರೆ. ಗಾಂಧಿ ಪ್ರಾರಂಭಿಸಿದ ವಿಧಾಯಕ ಕಾರ್ಯಕ್ರಮಗಳು, ದೇವಸ್ಥಾನ ಪ್ರವೇಶಗಳು, ಎಲ್ಲವೂ ಈ ಬಗೆಯ ಹರಿಜನೋದ್ಧಾರದ ಕಲ್ಪನೆಯಲ್ಲೇ ಜೀವ ತಳೆದವು. ಇವು ಜಾತಿ ಶೋಷಣೆ ಮಾಡುವವರಲ್ಲಿ ಪಾಪಪ್ರಜ್ಞೆ ಅಥವಾ ತಪ್ಪಿತಸ್ಥ ಮನೋಭಾವಕ್ಕಿಂತಲೂ "ಅಯ್ಯೋ ಪಾಪ", ಅಥವಾ ಕರುಣೆಯ ಮನೋಭಾವವನ್ನಷ್ಟೆ ಹುಟ್ಟುಹಾಕುತ್ತವೆ.

ಕ್ರೌರ್ಯವೇ ತುಂಬಿರುವ ಜಗತ್ತಿನಲ್ಲಿ ಕರುಣೆಯೆಂಬುದು ಜೀವರಸವೇ! ಹಾಗೆಯೇ ಬದುಕೇ ಬಿಕ್ಕಟ್ಟಿನಲ್ಲಿದ್ದಾಗ ಅಲ್ಪಸ್ವಲ್ಪ ಸುಧಾರಣೆಯೂ ತಂಗಾಳಿಯೇ! ಆದರೆ ಇತಿಹಾಸದಲ್ಲಿ ಈ ಸುಧಾರಣೆಗಳ ಮತ್ತು ಸುಧಾರಣವಾದ ಮಿತಿ ಎದುರಾಗುವುದು ಶೋಷಿತರು ಎಚ್ಚೆತ್ತು ಆಮೂಲಾಗ್ರ ಬದಲಾವಣೆಯ ಅಜೆಂಡಾವನ್ನು ಮುನ್ನೆಲೆಗೆ ತಂದಾಗ. ಆಗ ಕರುಣೆಯೇ ಕ್ರೌರ್ಯವಾಗುತ್ತದೆ.

ಕರುಣೆ, ಅನುಕಂಪದ ಭಾವನೆಗಳಿಗೆ ಕೊಡುವವರು ಮತ್ತು ಪಡೆದುಕೊಳ್ಳುವವರು ಎಂಬ ವರ್ಗಗಳು ಬೇಕು. ಎತ್ತರದಲ್ಲಿ ನಿಂತು ಕರುಣಾಕರರು ಸಾಮಾನ್ಯವಾಗಿ ಕೆಳಗೆ ಬಿದ್ದವನನ್ನು ಎತ್ತುವ ಮಾದರಿಯಲ್ಲಿ "ಉದ್ಧಾರ"ದ, "ಹರಿಜನೋದ್ಧಾರ"ದ ಮಾತುಗಳನ್ನಾಡುತ್ತಾರೆ. ಕರುಣೆಗೆ "ಗುರಿಯಾದವರು" ಅದನ್ನು ಅನುಭವಿಸಿ ಋಣದ ಭಾವನೆಯಲ್ಲಿ ಬದುಕುತ್ತಾರೆ. ಇದರ ಹಿಂದಿನ ಮನೋಭಾವ ಎದುರಿಗಿರುವ ಮನುಷ್ಯನನ್ನು ಸಹಜೀವಿಯೆಂದು ಪರಿಗಣಿಸುವುದಿಲ್ಲ. ಆದ್ದರಿಂದಲೇ ಕಳೆದ ಬಾರಿ 'ಲಂಕೇಶ್' ಸಂಚಿಕೆಯಲ್ಲಿ ಆನಂದ್ ತೇಲ್‌ತುಂಬ್ಡೆಯವರ ಲೇಖನದಲ್ಲಿ ಉದಾಹರಿಸಿದಂತೆ ಸಾಕ್ಷಾತ್ ಗಾಂಧಿ ಸಹ ತಾನು ದಲಿತರನ್ನು ಪ್ರತಿನಿಧಿಸುತ್ತಿದ್ದೇನೆಂದು ಹೇಳುತ್ತಿದ್ದರೂ ಅವರನ್ನು ತಮ್ಮ 'ಹರಿಜನ' ಪತ್ರಿಕೆಯಲ್ಲಿ "ಸಂಸ್ಕೃತಿ ಹೀನ" ಮತ್ತು "ದಡ್ಡ" ಎಂಬ ಪದಗಳಿಂದ ಸಂಬೋಧಿಸಲು ಯಾವುದೇ ಮುಜುಗರ ಪಡುತ್ತಿರಲಿಲ್ಲ. ಅದೇ ಲೇಖನದಲ್ಲಿ ನರಹಂತಕ ಹಿಂದೂತ್ವವಾದಿಗಳ ದಂಡನಾಯಕ ನರೇಂದ್ರ ಮೋದಿ ಸಹ ದಲಿತರನ್ನು ಬುದ್ಧಿಮಾಂದ್ಯ ಮಕ್ಕಳಿಗೆ ಹೋಲಿಸಿ ಮಾತಾಡಿದ್ದನ್ನು ಉಲ್ಲೇಖ ಮಾಡಲಾಗಿದೆ.

ಹೀಗೆ ನೈತಿಕವಾಗಿ ಮತ್ತು ಸಾಮಾಜಿಕವಾಗಿ ಮೇಲೆ ನಿಂತು ತೋರುವ ಕರುಣೆ ಅದನ್ನು ಪಡೆದವರಿಂದ ಸದಾ ಋಣೀ ಭಾವವನ್ನು ನಿರೀಕ್ಷಿಸುತ್ತದೆ. ಆದ್ದರಿಂದಲೇ ಇತ್ತೀಚೆಗೆ ಪ್ರಜಾವಾಣಿಯ 'ಸಂಗತ' ಅಂಕಣದಲ್ಲಿ ಹಿರಿಯರಾದ ಪಾಟೀಲ ಪುಟ್ಟಪ್ಪನವರು "ಮಹಾತ್ಮ ಗಾಂಧಿಯವರು ಮಣ್ಣಾಗಿದ್ದ ಜನರನ್ನು ಮನುಷ್ಯರನ್ನಾಗಿ ಮಾಡಿದರು. ಈ ಮಾತನ್ನು ಭಾರತೀಯರೆಲ್ಲರೂ, ಅದರಲ್ಲೂ ಅಸ್ಪೃಶ್ಯರೆನ್ನುವ ಅಸಹ್ಯ ಅವಹೇಳನಕ್ಕೆ ಗುರಿಯಾಗಿರುವ ಜನರು ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ" ಎಂಬ ಜಾತಿ ದುರಭಿಮಾನದ ಠೇಂಕಾರದ ಮಾತುಗಳನ್ನಾಡಿದ್ದಾರೆ.

ಜಾತಿ ನಿರ್ಮೂಲನೆಯ ಬಗ್ಗೆ ಗಾಂಧಿ ಮಾರ್ಗಕ್ಕಿಂತ ಅಂಬೇಡ್ಕರ್ ಮಾರ್ಗ ತುಳಿತಕೊಳಗಾದವರಿಗೆ ಆಪ್ಯಾಯವಾಗುವುದು ಈ ಕಾರಣಕ್ಕಾಗಿಯೇ! ಗಾಂಧಿ ಮಾರ್ಗವು ಮೇಲ್ಜಾತಿಗಳಲ್ಲಿ ಅಸ್ಪೃಶ್ಯರ ಬಗ್ಗೆ ಹೆಚ್ಚೆಂದರೆ ಅನುಕಂಪವನ್ನು ಮೂಡಿಸುತ್ತದೆ. ಕರುಣೆಯಿಂದ ಪಡೆದುಕೊಳ್ಳುವುದು ಹಂಗಿನ ಮನೋಭಾವವನ್ನು ಹುಟ್ಟಿಸುತ್ತದೆಯೇ ವಿನಃ ಸಮಾನತೆಯ ಮೌಲ್ಯವನ್ನಲ್ಲ. ಹಂಗಿನಲ್ಲಿರುವವರು ಋಣದ ಭಾಷೆಯಲ್ಲಿ ಮಾತನಾಡದೆ ಹಕ್ಕಿನ ಭಾಷೆಯಲ್ಲಿ ಮಾತನಾಡಿದರೆ "ಕರುಣಾವಂತ"ರಾದ "ಪಾಪು"ವಿಗೂ ಸಿಟ್ಟುಬರುತ್ತದೆ!

ಆದರೆ ಜಾತಿ ಅಪಮಾನವನ್ನು ಖುದ್ದು ಅನುಭವಿಸಿದ್ದ ಅಂಬೇಡ್ಕರರು ಜಾತಿ ವ್ಯವಸ್ಥೆಯೇ ಒಂದು ಸಂಘಟಿತ ಕ್ರೌರ್ಯವೆಂದು ಭಾವಿಸಿದ್ದರು. ಹೀಗಾಗಿ ಅವರ ಗುರಿ ಸುಧಾರಣೆಯಲ್ಲ, ಜಾತಿ ವಿನಾಶ. ಅದು ಮೇಲ್ಜಾತಿಯ ಅನುಕಂಪದಿಂದ ಘಟಿಸಬೇಕಾದ್ದಲ್ಲ, ಸಮಾನತೆಯ ನೆಲೆಯಲ್ಲಿ ಮತ್ತು ಪ್ರಜಾತಾಂತ್ರಿಕ ರಾಜಕಾರಣದಲ್ಲಿ ಸಂಭವಿಸಬೇಕಿದದ್ದು. ಸಮಾನತೆಯಿಲ್ಲದ ಸ್ವಾತಂತ್ರ್ಯ ಉಳ್ಳವರಿಗೆ, ಸಂಪನ್ನರಿಗೆ ಮಾತ್ರ ಅನುಕೂಲಕಾರಿ ಎಂಬುದು ಅವರ ಸ್ಪಷ್ಟ ತಿಳಿವಳಿಕೆ.

ಹೀಗಾಗಿ ಅಂಬೇಡ್ಕರ್ ಎತ್ತಿದ ಪ್ರಶ್ನೆಗಳು ಗಾಂಧಿ ಚಿಂತನೆಯ ಆರ್ಷೇಯತೆಯಲ್ಲಿರುವ ಮಿತಿಯನ್ನು ಎತ್ತಿತೋರಿಸುತ್ತದೆ. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯೆಂಬ ಸಮಾಜವಾದಿ ಆಧುನಿಕತೆಯ ಮೌಲ್ಯಗಳು ಸಾಕಾರವಾದಾಗ ಮಾತ್ರ ಜಾತಿ ವಿನಾಶವಾಗುತ್ತದೆ. ಆದರೆ ಗಾಂಧೀವಾದ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ನೈತಿಕ ನೆಲೆಯಲ್ಲಿ ಅಮೂರ್ತ ರೂಪದಲ್ಲಿ ಒಪ್ಪಿಕೊಳ್ಳುತ್ತದೆಯೇ ವಿನಃ ಒಂದು ರಾಜಕೀಯ ಅಜೆಂಡಾವಾಗಿಯಲ್ಲ. ಹೀಗಾಗಿ ಜಾತಿ ವಿನಾಶಕ್ಕೂ ಬೇಕಿರುವುದು ಒಂದು ಸಮಾಜವಾದಿ ಆಧುನಿಕತೆ. ಅದಕ್ಕೆ ಪ್ರೇರಣೆ ಮತ್ತು ಸಾಂಸ್ಕೃತಿಕ ಪರಿಕರಗಳನ್ನು ನೀಡಬಹುದಾದದ್ದು ನಮ್ಮ ಪರಂಪರೆಯಲ್ಲಿರುವ ಬುದ್ಧ ಕಾಯಕ ಜೀವಿಗಳ ಪರಂಪರೆ.

ಹೀಗಾಗಿ ಗಾಂಧಿ ಮತ್ತು ಅಂಬೇಡ್ಕರರ ನಡುವೆ ಇತಿಹಾಸ ಮತ್ತು ಭವಿಷ್ಯದ ನಡುವೆ ಇರುವಷ್ಟೇ ವ್ಯತ್ಯಾಸವಿತ್ತು. ಸಂಘರ್ಷವಿತ್ತು ಎಂಬುದನ್ನು ಮರೆಮಾಚಬಾರದು.

ನೋ ಕಾಮೆಂಟ್ಸ್

"ಬಿಜೆಪಿಯ ಮೂಲಕಾರ್ಯಕರ್ತರು ತಮಗೆ ಅಧಿಕಾರ ಸಿಗದಿದ್ದರೂ ಪರವಾಗಿಲ್ಲ, ಪಕ್ಷದಲ್ಲಿ ಏಕತೆ ಇರಬೇಕು ಎಂದು ಬಯಸುತ್ತಿದ್ದರೆ, ಅನ್ಯಪಕ್ಷದಿಂದ ಬಂದು ಅಧಿಕಾರ ಪಡೆದವರು ಇನ್ನೂ ಹೆಚ್ಚಿನ ಅಧಿಕಾರ ಮತ್ತು ಸ್ಥಾನ ಬೇಕು ಎಂದು ಬಯಸುತ್ತಿದ್ದಾರೆ. ಅಧಿಕಾರ ಸಿಗದಿದ್ದರೂ ಪರವಾಗಿಲ್ಲ ಪಕ್ಷಕ್ಕಾಗಿ ದುಡಿಯುತ್ತೇನೆ ಎಂಬ ಕಾರ್ಯಕರ್ತರು ಬಿಜೆಪಿಗೆ ಈಗ ಅತ್ಯಗತ್ಯವಾಗಿದ್ದಾರೆ."

- ಈಶ್ವರಪ್ಪ

"ಕಳೆದ 6 ವರ್ಷಗಳಲ್ಲಿ ಉನ್ನತಾಧಿಕಾರ ಸಮಿತಿಯು 477 ಯೋಜನೆಗಳಿಗೆ ಅನುಮತಿ ನೀಡಿದೆ. ಅದರಲ್ಲಿ ಈವರೆಗೆ 58 ಯೋಜನೆಗಳು ಮಾತ್ರ ಅನುಷ್ಠಾನಕ್ಕೆ ಬಂದಿವೆ."

- ಮುರುಗೇಶ್ ನಿರಾಣಿ

"ಫ್ರಾನ್ಸ್‌ನ ಬುದ್ಧಿಜೀವಿಗಳು ನೋಮ್ ಚಾಮ್‌ಸ್ಕಿಯನ್ನು ವಿರೋಧಿಸಲು ಒಂದು ಕಾರಣವಿದೆ. ಫ್ರಾನ್ಸ್‌ನ ಬುದ್ಧಿಜೀವಿಗಳ ಚಿಂತನಾ ಲಹರಿ ಫ್ಯಾಕ್ಟ್ಸ (ಸತ್ಯಾಂಶ)ಗಳನ್ನು ಆಧರಿಸಿರುವುದಿಲ್ಲ. ಮತ್ತು ಅವರ ಬರಹದ ಮುಕ್ಕಾಲು ಪಾಲು ಸಾಮಾನ್ಯರಿಗೆ ಅರ್ಥವಾಗದ ಕ್ಲಿಷ್ಟ ಭಾಷೆಯಲ್ಲಿರುತ್ತದೆ. ಆದರೆ ಇದಕ್ಕೆ ತದ್ವಿರುದ್ಧವಾಗಿ ನೋಮ್ ಚಾಮ್‌ಸ್ಕಿಯವರ ಪ್ರತಿಯೊಂದು ವಾಕ್ಯವೂ ಫ್ಯಾಕ್ಟ್ ಗಳನ್ನು ಆಧರಿಸಿರುತ್ತದೆ ಮತ್ತು ಅವರ ಬರಹಗಳೆಲ್ಲವೂ ಸಾಮಾನ್ಯರಿಗೆ ಅರ್ಥವಾಗಿ ಬಿಡುತ್ತದೆ!"

- ದಯಾನಾ ಜಾನ್‌ಸ್ಟನ್, ಫ್ರೆಂಚ್ ಲೇಖಕಿ

60 ವರ್ಷದ ನಂತರ?

"ವರ್ಷಕ್ಕೆ 80 ಮಿಲಿಯನ್ ಟನ್ ಅದಿರು ಗಣಿಗಾರಿಕೆ ನಡೆದರೂ ಮುಂದಿನ 60 ವರ್ಷಗಳ ಕಾಲ ಕರ್ನಾಟಕ ರಾಜ್ಯದಲ್ಲಿ ಗಣಿಗಾರಿಕೆ ನಡೆಸಬಹುದು."

- ಮುರುಗೇಶ್ ನಿರಾಣಿ

ಇದನ್ನೇ ರಾಮಜನ್ಮಭೂಮಿ ಚಳವಳಿಗಾರರಿಗೂ ಹೇಳಬಲ್ಲಿರಾ!

"ದೇವಾಲಯಗಳನ್ನು ವೈಭವಯುತವಾಗಿ ಮತ್ತು ಅದ್ಭುತವಾಗಿ ನಿರ್ಮಿಸುವುದರಿಂದ ಪ್ರಯೋಜನವಾಗುವುದಿಲ್ಲ. ದೇವಸ್ಥಾನಕ್ಕೆ ಬರಬೇಕಾದ ಜನರು ದೂರ ಉಳಿದಿದ್ದಾರೆ. ತುಳಿತಕ್ಕೆ ಒಳಗಾದ ಜನರೂ ಸಹ ದೇವಾಲಯಕ್ಕೆ ಬಂದು ದರ್ಶನ ಮಾಡುವ ವ್ಯವಸ್ಥೆ ಇರಬೇಕು."

-ಅಶೋಕ್, ಸಚಿವ

ಲೋಕಾಯುಕ್ತ ಮತ್ತು ಯಡ್ಡಿಯ ಶೂನ್ಯ 'ಸಾಧನೆ'



ಕಂಡಹಾಗೆ


ಗೌರಿ ಲಂಕೇಶ್
editorlankesh@gmail.com

ರಾಜ್ಯದ ಜನರಿಗೆ ಕಿಂಚಿತ್ತೂ ನೆರವಾಗದಿದ್ದರೂ ಕಾರದ ಗದ್ದುಗೆಯಲ್ಲಿ ಎರಡು ವರ್ಷಗಳನ್ನು ಕಳೆದಿದ್ದನ್ನೇ ಧನೆ" ಎಂದು ಆಚರಿಸಲು ಮುಖ್ಯಮಂತ್ರಿ ಯಡಿಯೂರ ಬಿಜೆಪಿ ಸರ್ಕಾರ ಸಜ್ಜಾಗಿದೆ. ಈ 'ಸಾಧನೆ'ಗೆಂದೇ ಾಗಲೇ ಪತ್ರಿಕೆ ಮತ್ತು ಮಾಧ್ಯಮಗಳಲ್ಲಿ ಜಾಹೀರಾತು ಗೆ ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ನ್ನ ಜೂನ್ 24 ರಂದು ಅರಮನೆ ಮೈದಾನದಲ್ಲಿ ಯುವ 'ಉಘೇ ಉಘೇ' ಕಾರ್ಯಕ್ರಮಕ್ಕೂ ಹಲವಾರು ಟಿ ರೂಪಾಯಿಗಳನ್ನು ವ್ಯಯಮಾಡಲಾಗುತ್ತಿದೆ.

ನೆನಪಿರಲಿ, ಈ ಕೋಟ್ಯಂತರ ರೂಪಾಯಿಗಳಲ್ಲಿ ಒಂದು ಪೈಸೆಯೂ ಯಡ್ಡಿಯೂರಪ್ಪನ ಕಿಸೆಯಿಂದ ಬರುತ್ತಿಲ್ಲ, ಜೆಪಿಯ ತಿಜೋರಿಯಿಂದ ಬರುತ್ತಿಲ್ಲ. ಬದಲಾಗಿ ನಮ್ಮೆಲ್ಲರ ಣದಲ್ಲಿ ಈ 'ಸಾಧನಾ ಸಮಾವೇಶ'ವನ್ನು ಕರಿಸಲಾಗುತ್ತಿದೆ. ಜನ ಉತ್ಸಾಹದಿಂದ ಮತ ಾಯಿಸುವುದು, ಪ್ರಾಮಾಣಿಕವಾಗಿ ತೆರಿಗೆ ಕಟ್ಟುವುದು ಾವುದಾದರೊಂದು ಪಕ್ಷ ಸಮರ್ಥ ಆಡಳಿತ ನೀಡಲಿ ದು, ಜನರಿಗೆ ಎಲ್ಲಾ ಸವಲತ್ತುಗಳನ್ನು ನೀಡದಿದ್ದರೂ ಷ್ಟ ತಮ್ಮ ಬವಣೆಯನ್ನು ಕಡಿಮೆ ಮಾಡಲಿ ಎಂದು. ರೆ ಯಾವುದೇ ಕಾರಣಕ್ಕೂ ಜನ ಮತ ಚಲಾಯಿಸುವುದು, ್ಮ ಬೆವರಿನ ದುಡಿಮೆಯಿಂದ ತೆರಿಗೆ ಕಟ್ಟುವುದು ಥ ಟೊಳ್ಳು "ಸಾಧನೆ ಸಮಾವೇಶ"ಗಳಿಗಲ್ಲ ಎಂಬ ಚಿತ್ತು ಪ್ರಜ್ಞೆಯೂ ಯಡಿಯೂರಪ್ಪನಿಗೆ ಇರುವಂತಿಲ್ಲ.

ಆದರೆ, ಕಾರ್ಮೋಡಕ್ಕೂ ಬೆಳ್ಳಿಯ ಅಂಚಿರುತ್ತದೆ ಎಂಬಂತೆ ಡಿಯೂರಪ್ಪನ "ಸಾಧನಾ ಸಮಾವೇಶ"ಕ್ಕೆ ಒಂದು ದಿನ ುವಾಗಲೇ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಗಡೆಯವರು ಯಡಿಯೂರಪ್ಪನ ಸರ್ಕಾರಕ್ಕೆ "ಥೂ" ದು ಉಗಿದು ರಾಜೀನಾಮೆಯನ್ನು ಎಸೆದಿದ್ದಾರೆ. ಅವರ ಜೀನಾಮೆ ಕೇವಲ ಒಂದು ಹುದ್ದೆಗೆ ಸಂಬಂಧಿಸಿದ್ದೇ ದ್ದರೂ ಯಡಿಯೂರಪ್ಪನ ಸರ್ಕಾರದ ಅಯೋಗ್ಯತೆಯನ್ನು ಜಾಹೀರುಗೊಳಿಸಿದೆ. ಇಲ್ಲಿಯತನಕ ಯಾವ ಲೋಕಾ ುಕ್ತರೂ ಯಾವ ಸರ್ಕಾರದ ಅವಧಿಯಲ್ಲೂ ರಾಜೀನಾಮೆ ಡಿರಲಿಲ್ಲ. ಆದರೆ ಅಂತಹ "ಸಾಧನೆ"ಯನ್ನು ಯಡಿ ೂರಪ್ಪ ಅತಿ ಯಶಸ್ವಿಯಾಗಿ ಮಾಡಿದ್ದಾರೆಂದರೆ ಇವರ ್ಕಾರ ಅದೆಷ್ಟು ಕಚಡಾ ಸರ್ಕಾರ ಆಗಿದೆ ಎಂದು ರ್ಥವಾಗುತ್ತದೆ.

ನ್ಯಾ. ಸಂತೋಷ್ ಹೆಗಡೆಗಿಂತ ಮುಂಚೆ ೋಕಾಯುಕ್ತರಾಗಿದ್ದ ನ್ಯಾ. ವೆಂಕಟಾಚಲ ಅವರು "ರೇಡ್‌ಗಳ ೇಡ್ ಶೋ" ಪರಂಪರೆಯನ್ನು ಪ್ರಾರಂಭಿಸಿದ್ದರು. ಪ್ರಚಾರ ಯುವ ಉದ್ದೇಶದಿಂದ ಅವರು ನಡೆಸಿದ ಇಂತಹ ಡ್"ಗಳು ಮಾಧ್ಯಮಗಳಿಗೆ ಒಂದು "ಶೋ" ಆಗಿತ್ತೇ ರತು ಅದರಿಂದ ಏನೇನೂ ಪ್ರಯೋಜನವಾಗಿರಲಿಲ್ಲ. ರೂ ನ್ಯಾ. ವೆಂಕಟಾಚಲ ಅವರು ಇಂತಹ ಟೊಳ್ಳು ರ್ಯಾಚರಣೆಗಳಿಂದ "ಭ್ರಷ್ಟಾಚಾರದ ವಿರುದ್ಧ ೋರಾಡುತ್ತಿರುವ ಯೋಧ" ಎಂಬ ಇಮೇಜ್ ಅನ್ನು ದಿದ್ದರು. ಆದರೆ ನ್ಯಾ. ವೆಂಕಟಾಚಲ ಅವರು ನಿಜ ಗಲೂ ಭ್ರಷ್ಟಾಚಾರದ ವಿರೋಧಿ ಆಗಿರಲಿಲ್ಲ, ಬದಲಾಗಿ ಾರ ಪಡೆಯಲೆಂದೇ ಇಂತಹ "ರೇಡ್"ಗಳಲ್ಲಿ ಓರ್ವ ಲೀಸ್ ಇನ್ಸ್‌ಪೆಕ್ಟರ್ ಲೆವೆಲ್‌ಗೆ ಇಳಿದು ಭಾಗವಹಿಸು ರು. ಆ ಕಾರಣಕ್ಕೇ ಅವರು ಲೋಕಾಯುಕ್ತ ಸ್ಥಾನದಿಂದ ತ್ತಿ ಪಡೆದ ನಂತರ ಭಾರತೀಯ ಜನತಾ ಪಕ್ಷವನ್ನು ಚುನಾವಣೆಯಲ್ಲಿ ಸ್ಪರ್ಧಿಸುವ ಇಂಗಿತ ಪ್ರದರ್ಶಿಸಿದ್ದರು. ಕ್ಕಿಂತ ಆಘಾತಕಾರಿಯಾದ ಸಂಗತಿ ಯಾವುದೆಂದರೆ ಬಿಜೆಪಿ ಶಾಸಕ ಸಂಪಂಗಿಯನ್ನು ಲಂಚ ಸ್ವೀಕರಿಸುತ್ತಿರುವಾಗ ನ್ಯಾ. ಸಂತೋಷ ಹೆಗಡೆಯವರ ತಂಡ ಹಿಡಿದು ಹಾಕಿದ್ದ ಮರುದಿನವೇ ಬಿಜೆಪಿಯನ್ನು ಸೇರಿದ ನ್ಯಾ. ವೆಂಕಟಾಚಲರು ತಮ್ಮ ಆ ನಿರ್ಧಾರಕ್ಕೆ ನೀಡಿದ್ದ ಕಾರಣ "ಬಿಜೆಪಿ ಭ್ರಷ್ಟಾಚಾರದ ವಿರುದ್ಧ ಹೋರಾಡುವ ಪಕ್ಷವಾಗಿದೆ" ಎಂಬುದು! ಇದಕ್ಕಿಂತ ಹಾಸ್ಯಾಸ್ಪದ ಧೋರಣೆ, ಅವಕಾಶವಾದಿತನ ಮತ್ತು ಪ್ರಚಾರದ ಹುಚ್ಚು ಇನ್ನೊಂದಿದ್ದೀತೆ?!



ಅದೆಲ್ಲ ಇರಲಿ, ಈಗ ಯಡಿಯೂರಪ್ಪನ ಸರ್ಕಾರದ ದುಷ್ಟತನವನ್ನು, ಕಳ್ಳತನವನ್ನು, ಭ್ರಷ್ಟಾಚಾರವನ್ನು ನ್ಯಾ. ಸಂತೋಷ್ ಹೆಗಡೆ ಬಯಲಿಗೆಳೆದು ಎಲ್ಲರೂ ಈ ಸರ್ಕಾರಕ್ಕೆ ಕ್ಯಾಕರಿಸಿ ಉಗಿಯುವಂತೆ ಮಾಡಿದ್ದಾರೆ. ನ್ಯಾ. ಸಂತೋಷ್ ಹೆಗಡೆ ತರಹದ ನೇರ, ನಿಷ್ಠುರ ಮತ್ತು ಪ್ರಾಮಾಣಿಕ ಲೋಕಾಯುಕ್ತರನ್ನು ನಮ್ಮರಾಜ್ಯ ಕಳೆದುಕೊಳ್ಳುತ್ತಿರುವುದು ಒಂದು ದುರಂತವಾದರೂ ಅವರ ರಾಜೀನಾಮೆಯಿಂದ ಯಡಿಯೂರಪ್ಪನ ಸರ್ಕಾರದ ಸೋಗಲಾಡಿತನ ಬಯಲಾಗಿದ್ದು ಸ್ವಾಗತಾರ್ಹವೇ.

*****

ರಾಜೀನಾಮೆ ನೀಡಿದ ನಂತರ ನ್ಯಾ. ಸಂತೋಷ್ ಹೆಗಡೆಯವರು ನಡೆಸಿದ ಪತ್ರಿಕಾಗೋಷ್ಠಿಯನ್ನು ನೋಡುತ್ತಿದ್ದಾಗ ನನಗೆ ತೀವ್ರವಾಗಿ ತಾಕಿದ್ದು ಅವರ ಹೃದಯದಲ್ಲಿ ಮಡುಗಟ್ಟಿದ್ದ ನೋವು ಮತ್ತು ಬಡ-ಅಸಹಾಯಕರ ಜನರ ಬಗ್ಗೆ ಅವರಿಗಿರುವ ಅಪಾರ ಕಾಳಜಿ.

ಸ್ವಾಭಿಮಾನ, ಕರ್ತವ್ಯಪ್ರಜ್ಞೆ ಮತ್ತು ಕಷ್ಟದಲ್ಲಿರುವವರಿಗೆ ನೆರವಾಗುವ ಮನೋಭಾವವನ್ನು ಹೊಂದಿರುವ ನ್ಯಾ. ಹೆಗಡೆಯವರು ಕೊನೆಗೂ ಅಸಹಾಯಕರಾಗಿ ರಾಜೀನಾಮೆ ಸಲ್ಲಿಸುತ್ತಾರೆಂದರೆ ಯಡಿಯೂರಪ್ಪನ ಸರ್ಕಾರ ಅವರಿಗೆ ಅದೆಷ್ಟು ಅವಮಾನ ಮಾಡಿದೆ, ಕರ್ತವ್ಯವನ್ನು ಪಾಲಿಸದಂತೆ ತೊಡರುಗಳನ್ನು ಒಡ್ಡಿದೆ, ಯಾರಿಗೂ ನೆರವಾಗದಂತೆ-ಏನನ್ನೂ ಮಾಡದಂತೆ ಹೇಗೆ ನೋಡಿಕೊಂಡಿದೆ ಎಂದು ಅರ್ಥವಾಗುತ್ತದೆ.

ಹಾಗೆ ನೋಡಿದರೆ ನ್ಯಾ. ಹೆಗಡೆಯವರು ರಾಜೀನಾಮೆ ಸಲ್ಲಿಸುವ ಸೂಚನೆಗಳು ಹಲವು ಬಾರಿ ಗೋಚರಿಸಿದ್ದವು. ಕಳೆದ ವರ್ಷವೇ ಸಂದರ್ಶನವೊಂದರಲ್ಲಿ ನ್ಯಾ. ಹೆಗಡೆ ಅವರು "ರಾಜ್ಯ ಸರ್ಕಾರದ ವಿರುದ್ಧ ನನಗಿರುವ ದೊಡ್ಡ ಅಸಮಾಧಾನ ಯಾವುದೆಂದರೆ ದೊಡ್ಡ ಅಪರಾಧಗಳನ್ನು ಎಸಗಿರುವವರ ವಿರುದ್ಧವೂ ಯಾವುದೇ ಕ್ರಮ ತೆಗೆದುಕೊಳ್ಳದಿರುವುದು. ಇನ್ನು ಹಿರಿಯ ಅಧಿಕಾರಿಗಳ ವಿರುದ್ಧವೂ ನಾವು ಕಾನೂನು ಕ್ರಮ ಜರುಗಿಸಲು ಸರ್ಕಾರ ಅನುಮತಿಯನ್ನು ನಿರಾಕರಿಸುತ್ತದೆ" ಎಂದು ದೂರಿದ್ದರು.

ಹಾಗೆಯೇ ಇನ್ನೊಂದು ಸಂದರ್ಶನದಲ್ಲಿ "ಲೋಕಾಯುಕ್ತ ಪೊಲೀಸರ ವಿರುದ್ಧವೇ ಜಾತಿನಿಂದನೆ ಕೇಸ್‌ಗಳನ್ನು ಅಥವಾ ಮಾನನಷ್ಟ ಮೊಕದ್ದಮೆಗಳನ್ನು ಹೂಡುವ ಮೂಲಕ ನಮ್ಮ ತಂಡಕ್ಕೆ ಟಾರ್ಚರ್ ನೀಡಲಾಗುತ್ತಿದೆ" ಎಂದು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದರು. ಲೋಕಾಯುಕ್ತದ ಅಧಿಕಾರಿಗಳು ತಮ್ಮ ಕರ್ತವ್ಯ ಪಾಲಿಸಿದ್ದಕ್ಕೆ ಇಂತಹ ಮಾನಸಿಕ ಹಿಂಸೆಗೆ ಗುರಿಯಾಗುವುದು ಒಂದೆಡೆಯಾದರೆ, ಇಂತಹ ದೂರುಗಳು ಅವರ ಸೇವಾ ಕಡತಗಳಲ್ಲೂ ಸೇರಿಕೊಂಡು ಅವರ ವೃತ್ತಿಜೀವನಕ್ಕೆ ಅಡ್ಡಗೋಡೆಯಾಗುವ ಆತಂಕ ಇನ್ನೊಂದೆಡೆ. ಅದಕ್ಕಿಂತ ಮಿಗಿಲಾಗಿ "ಇಂತಹ ದೂರುಗಳನ್ನು ದಾಖಲಿಸುವ ಹಿಂದೆ ಲೋಕಾಯುಕ್ತ ಸಂಸ್ಥೆಯನ್ನೇ ನಿಷ್ಕ್ರಿಯಗೊಳಿಸುವ ಸಂಚೂ ಇದೆ. ಯಾಕೆಂದರೆ ಲೋಕಾಯುಕ್ತರ ವಿರುದ್ಧವೇ ದೂರು ದಾಖಲಿಸಬಹುದು ಎಂದಾದರೆ ಎಲ್ಲರೂ ಇಂತಹ ದೂರುಗಳನ್ನು ದಾಖಲಿಸಲಾರಂಭಿಸುತ್ತಾರೆ" ಎಂದೂ ನ್ಯಾ. ಹೆಗಡೆ ಹೇಳಿದ್ದರು.



ಇಂತಹ ಸೂಕ್ಷ್ಮ ಪ್ರಜ್ಞೆಯ ನ್ಯಾ. ಹೆಗಡೆಗೆ ಯಡಿಯೂರಪ್ಪನ ಸರ್ಕಾರ ನೆರವನ್ನು ನೀಡುವ ಬದಲಾಗಿ ನರಕವನ್ನೇ ಸೃಷ್ಟಿಸಿತು. ಬಿಜೆಪಿಯದು ಎಂತಹ ಲಜ್ಜೆಗೇಡಿ ಸರ್ಕಾರವೆಂದರೆ ಒಂದು ಪತ್ರಿಕೆಯಲ್ಲಿ "ನ್ಯಾ. ಹೆಗಡೆಯವರ ರಾಜೀನಾಮೆಯಿಂದ ಬೇಜಾರಾಗಿಲ್ಲ, ಆದರೆ ಅವರು ಈ ಸಂದರ್ಭದಲ್ಲಿ ('ಸಾಧನಾ ಸಮಾವೇಶ') ನೀಡಿದ್ದು ಬೇಜಾರಾಗಿದೆ" ಎಂದು ಬಿಜೆಪಿಯ ನಾಯಕನೊಬ್ಬ ಪ್ರತಿಕ್ರಿಯಿಸಿದ್ದು ಈ ಲಜ್ಜೆಗೇಡಿತನಕ್ಕೆ ಸಾಕ್ಷಿಯಾಗಿದೆ.

*****

'ಸಾಧನಾ ಸಮಾವೇಶ'ದ ಅಂಗವಾಗಿ ಮಾಧ್ಯಮಗಳಿಗೆ ಕೋಟ್ಯಂತರ ರೂಪಾಯಿಗಳ ಜಾಹೀರಾತುಗಳಲ್ಲದೆ ಯಡಿಯೂರಪ್ಪ ಸಂದರ್ಶನಗಳನ್ನೂ ನೀಡಿದ್ದಾರೆ. ಆ ಸಂದರ್ಶನಗಳಲ್ಲಿ (ಇವುಗಳನ್ನು ಜಾಹೀರಾತಿಗೆ ಬದಲಾಗಿ ಪತ್ರಿಕೆಗಳು ನೀಡಿದ 'ಗೌರವ ಕಾಣಿಕೆ' ಎಂದು ಪರಿಗಣಿಸಬಹುದಲ್ಲವೇ?!) ತನ್ನ ಸರ್ಕಾರ ಕರ್ನಾಟಕ ಕಂಡಿರುವ ಅತಿ ಶ್ರೇಷ್ಠ ಸರ್ಕಾರವೆಂದೂ, ತಾವು ಜನರಿಗೆ ನೀಡಿದ್ದ ಎಲ್ಲಾ ಭರವಸೆಗಳನ್ನು ಈಡೇರಿಸಿದ್ದೇವೆಂದು ಯಡಿಯೂರಪ್ಪ ತಮ್ಮ ಪುಂಗಿಯನ್ನು ತಾವೇ ಊದಿಕೊಂಡಿದ್ದಾರೆ.

ಅಂತಹ ಒಂದು ಸಂದರ್ಶನದಲ್ಲಿ ತಮ್ಮ ಪ್ರಮುಖ ಸಾಧನೆ 'ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶ' ಎಂದೂ ಹೇಳಿದ್ದಾರೆ. ಅಲ್ಲ, "ನಮ್ಮ ರಾಜ್ಯದ ಭೂಮಿ, ನೀರು ಮತ್ತು ಇತರೆ ಸವಲತ್ತುಗಳನ್ನು ಪುಕ್ಕಟ್ಟೆಯಾಗಿ ನೀಡುತ್ತೇವೆ, ಇಲ್ಲಿಗೆ ಬಂದು ಇಲ್ಲಿನ ಜನರನ್ನು ಒಕ್ಕಲೆಬ್ಬಿಸಿ ಇಲ್ಲಿನ ನಿಸರ್ಗ ಸಂಪತ್ತನ್ನು ಲೂಟಿ ಮಾಡಿ" ಎಂದು ಮುಕ್ತವಾದ ಆಹ್ವಾನವನ್ನು ಕೊಟ್ಟರೆ ಹಣ ಹೊಂದಿರುವ ಯಾವನಾದರೂ ಬಂದು ನಮ್ಮ ರಾಜ್ಯದ ಸಂಪನ್ಮೂಲಗಳ ಮೇಲೆ ಅತ್ಯಾಚಾರವನ್ನು, ಜನರ ಮೇಲೆ ಅನಾಚಾರವನ್ನೂ ನಡೆಸಲು ಸಜ್ಜಾಗುತ್ತಾನೆ. ಇದು ಯಡಿಯೂರಪ್ಪನ 'ಸಾಧನೆ' ಅಲ್ಲ, ಬದಲಾಗಿ ಅದು ಆತ ಮತ್ತು ಆತನ ಬಿಜೆಪಿ ಸರ್ಕಾರದ ಸೋಗಲಾಡಿತನ.

ಇಷ್ಟನ್ನೂ ಅರ್ಥ ಮಾಡಿಕೊಳ್ಳದ ಯಡಿಯೂರಪ್ಪನನ್ನು ಹುಚ್ಚ ಎಂದು ಕರೆಯಬೇಕೋ, ಪೆದ್ದ ಎಂದು ಕರೆಯಬೇಕೋ ಅಥವಾ ಕನ್ನಡ ನಾಡಿಗೆ ತಗುಲಿಕೊಂಡಿರುವ ಶನಿ ಎನ್ನಬೇಕೋ.....?

ಾಡಿನ ಖ್ಯಾತ ಬರಹಗಾರರು, ಚಿಂತಕರು, ಹೋರಾಟಗಾರರು, ಪ್ರಗತಿಪರರು ಭಾಗವಹಿಸಲಿದ್ದಾರೆ. ಎಲ್ಲರೂ ಬನ್ನಿ, ಬಿಜೆಪಿಯ ರೈತ ವಿರೋಧಿ, ಪ್ರಜಾಪ್ರಭುತ್ವ ವಿರೋಧಿ ಕಾಯ್ದೆಯನ್ನು ವಿರೋಧಿಸಿ

ಜಾನುವಾರು ಹತ್ಯೆ ನಿಷೇಧ ಕಾಯ್ದೆ ವಿರೋಧಿ ಜನಾಂದೋಲನ

ಬೃಹತ್ ಸಮಾವೇಶ

ಸ್ವಾಗತ : ವೀರಸಂಗಯ್ಯ, ಕರ್ನಾಟಕ ರಾಜ್ಯ ರೈತ ಸಂಘ
ನಿರೂಪಣೆ : ಎಂ.ವೆಂಕಟಸ್ವಾಮಿ, ಸಮತಾ ಸೈನಿಕ ದಳ
ಉದ್ಘಾಟನೆ : ಯು.ಆರ್.ಅನಂತಮೂರ್ತಿ, ಖ್ಯಾತ ಸಾಹಿತಿ
ಅಧ್ಯಕ್ಷತೆ : ಎ.ಕೆ.ಸುಬ್ಬಯ್ಯ, ವಕೀಲರು, ಮಾಜಿ ಶಾಸನ ಸಭಾ ಸದಸ್ಯರು

ಜೂನ್ 28
ಸೋಮವಾರ,
ಶಿವಾಜಿನಗರ ಮೈದಾನ
ಬೆಂಗಳೂರು.


'ಲಂಕೇಶ್' ಟೀಮ್‌ಗೆ ಮಾಧ್ಯಮ ಅಕಾಡೆಮಿ ಪ್ರಶಸ್ತಿ

2009ನೇ ವರ್ಷದ ಮಾಧ್ಯಮ ಅಕಾಡೆಮಿಯ ಪ್ರಶಸ್ತಿಗೆ ಲಂಕೇಶ್ ವಾರಪತ್ರಿಕೆಯ ನಮ್ಮ ಕ್ಯಾಪ್ಟನ್ ಗೌರಿ ಲಂಕೇಶ್ ಆಯ್ಕೆಯಾಗಿದ್ದಾರೆ. ಇದು ನಮ್ಮ ಇಡೀ ತಂಡದ ಹಾಗೂ ನಾಡಿನ ಓದುಗರೆಲ್ಲರ ಅಗಾಧ ಸಾಮಾಜಿಕ ಕಾಳಜಿಗಳಿಗೆ ಮಾಧ್ಯಮ ಸ್ನೇಹಿತರಿಂದ ಸಿಕ್ಕಿರುವ ಒಂದು ಪುಟ್ಟ ಮಾನ್ಯತೆ ಎಂದು ಭಾವಿಸುತ್ತೇವೆ.

ಧನ್ಯವಾದ
-ಲಂಕೇಶ್ ಬಳಗ

ಮಾಜಿ ಕೌನ್ಸಿಲರ್ ಗೋವಿಂದರಾಜು ಕೊಲೆಯತ್ನದ ಹಿಂದೆ


ನಿಗೂಢ ನಾರಿಯೋ ಬಿಲ್ಡರುಗಳ ಮಾರಿಯೋ


ಆಸ್ಪತ್ರೆಯಲ್ಲಿ ಗೋವಿಂದರಾಜು

ಇದು ಪಾಲಿಕೆ ಚುನಾವಣೆಯ ಜಿದ್ದಾ ಅಥವಾ ಅದರ ಸೋಗಿನಲ್ಲಿ ಯಾರೋ ಪೂರೈಸಿಕೊಂಡ ಹಳೇ ದುಷ್ಮನಿಯಾ?

ಶ್ರೀರಾಂಪುರದ ಇನ್ಸ್‌ಪೆಕ್ಟರ್ ಉಪಾಧ್ಯಕ್ಷರಿಗೆ ದಿಕ್ಕೇ ತೋಚುತ್ತಿಲ್ಲ. ಅಷ್ಟಕ್ಕೂ ಅದೊಂದು ಕೊಲೆ ಯತ್ನವಾ ಅಥವಾ ಸಣ್ಣಗೊಂದು ಪೆಟ್ಟುಕೊಟ್ಟು ಯಾವುದೋ ನಿಗೂಢ ಉದ್ದೇಶವೊಂದಕ್ಕೆ ಬಗ್ಗಿಸುವ ಕಸರತ್ತಾ? ಶ್ರೀರಾಂಪುರದ ಮಾಜಿ ಕೌನ್ಸಿಲರ್ ಎಲ್.ಗೋವಿಂದರಾಜು ಇಂಥ ಧುರಿತದಲ್ಲೂ ಹೇಳಿಕೊಳ್ಳಲಾಗದೆ ಬಚ್ಚಿಡುತ್ತಿರುವ ಸತ್ಯವಾದರೂ ಎಂಥಾದ್ದು? ಬಹುಶಃ ಮತ್ತೊಬ್ಬ ಕೌನ್ಸಿಲರ್ ಟಿ.ಮಲ್ಲೇಶ್‌ರನ್ನು ರಾಜಕೀಯವಾಗಿ ಮುಗಿಸಲು ಖದೀಮ ಬಿಲ್ಡರುಗಳು ಈ ರೀತಿಯ ಟ್ರಿಕ್ಸ್ ಮಾಡುತ್ತಿದ್ದಾರಾ?

ಎತ್ತಿಂದೆತ್ತ ನೋಡಿದರೂ ಶ್ರೀರಾಂಪುರದ ಮಾಜಿ ಕೌನ್ಸಿಲರ್ ಗೋವಿಂದರಾಜು ಮೇಲೆ ನಡೆದ ಕೊಲೆಯತ್ನಕ್ಕೆ ಕಾರಣಗಳು ಸಿಗುತ್ತಿಲ್ಲ. ಎಲ್.ಗೋವಿಂದರಾಜು ಬೆಂಗಳೂರು ಕಂಡ ಸಜ್ಜನ ಕೌನ್ಸಿಲರ್‌ಗಳ ಪೈಕಿ ಒಬ್ಬರೆಂಬ ಬಗ್ಗೆ ಎರಡು ಮಾತಿಲ್ಲ. ಒಂದಲ್ಲ ಎರಡು ಬಾರಿ ಶ್ರೀರಾಂಪುರದಿಂದ ಪಾಲಿಕೆಗೆ ಗೆದ್ದುಬಂದ ಗೋವಿಂದರಾಜು ಪಟೇಲ್ ಸರ್ಕಾರವಿದ್ದಾಗಲೇ ಮೇಯರ್ ಆದ. ಆ ಹೊತ್ತಿಗಾಗಲೇ ಪಾಲಿಕೆಯ ವಿವಿಧ ಸ್ಥಾಯಿ ಸಮಿತಿಗಳಲ್ಲಿ ಅಧ್ಯಕ್ಷರಾಗಿದ್ದ ಗೋವಿಂದರಾಜು ಮೊನ್ನೆ ನಡೆದ ಪಾಲಿಕೆ ಚುನಾವಣೆಯಲ್ಲಿ ಗಾಂಧಿನಗರದ ಸುಭಾಶ್‌ನಗರ ವಾರ್ಡ್‌ಗೆ ಕಾಂಗ್ರೆಸ್ ಅಭ್ಯರ್ಥಿಯಾಗಬೇಕಿತ್ತು.


ಕೌನ್ಸಿಲರ್ ಮಲ್ಲೇಶ್

ಕಾಂಗ್ರೆಸ್ ಟಿಕೆಟ್ ಕೊಡಿಸಿ ಗೋವಿಂದರಾಜುವನ್ನು ಗೆಲ್ಲಿಸಿ ಕೌನ್ಸಿಲರ್ ಮಾಡಲು ಶಾಸಕ ದಿನೇಶ್ ಗುಂಡೂರಾವ್ ಇನ್ನಿಲ್ಲದಂತೆ ಒತ್ತಡ ತಂದರಾದರೂ ಅಂತಿಮ ಟಿ.ಮಲ್ಲೇಶ್ ಎಂಬ ಪೌರಕಾರ್ಮಿಕರ ನಾಯಕನಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿತ್ತು. ಅದು ಕಾಂಗ್ರೆಸ್ ನಾಯಕ ಬಿ.ಕೆ.ಹರಿಪ್ರಸಾದ್ ಮತ್ತು ಬಿ.ಕೆ.ಶಿವರಾಮ್ ಮಲ್ಲೇಶ್ ಬೆನ್ನಿಗೆ ನಿಂತಿದ್ದರ ಫಲವಾಗಿತ್ತು. ಹಾಗಂತ ಗೋಮಿಂದರಾಜು ಸುಮ್ಮನಾಗಲಿಲ್ಲ. ಪಕ್ಷೇತರರಾಗಿ ನಿಂತರು. ಇನ್ನೇನು ಗೋವಿಂದರಾಜು ಗೆದ್ದೇಬಿಟ್ಟರು ಎನ್ನುವಾಗಲೇ 282 ಮತಗಳ ಅತ್ಯಲ್ಪ ಅಂತರದಿಂದ ಮಲ್ಲೇಶ್ ಗೆದ್ದಾಗಿತ್ತು.

ಅಧಿಕೃತ ಕಾಂಗ್ರೆಸ್ ಅಭ್ಯರ್ಥಿಯಾಗಿ ಮಲ್ಲೇಶ್ ಇದ್ದರೂ ಶಾಸಕ ದಿನೇಶ್ ಗುಂಡೂರಾವ್ ಮಾತ್ರ ಪಕ್ಷೇತರ ಗೋವಿಂದರಾಜುವನ್ನೇ ಬೆಂಬಲಿಸಿದ್ದರು!

ಹಾಗೆ ಕೂದಲೆಳೆಯಿಂದ ಕೌನ್ಸಿಲರ್‌ಗಿರಿ ವಂಚಿತನಾಗಿ ಸೋತು ಹೈರಾಣಾಗಿರುವ ಗೋವಿಂದರಾಜುವನ್ನು ಮುಗಿಸಿದರೆ ಯಾರಿಗಾದರೂ ಏನು ಲಾಭವಿದ್ದೀತು?

ಕೊಲೆಯತ್ನ ನಡೆದದ್ದು 2010ರ ಜೂನ್ 21ರ ಸೋಮವಾರ ಬೆಳಗ್ಗೆ 7-55ಕ್ಕೆ. ಮಲ್ಲೇಶ್ವರದ ಹಳ್ಳಿಮನೆ ಹೋಟೆಲ್ ಎದುರು ತಮ್ಮ ಮೂರ್ನಾಲ್ಕು ಮಂದಿ ಚೇಲಾಗಳ ಜೊತೆ ಕಾಫಿ ಕುಡಿಯುತ್ತಾ ಕುಳಿತಿದ್ದ ಗೋವಿಂದರಾಜು ದಿನಪತ್ರಿಕೆಯೊಂದರಲ್ಲಿ ತಲ್ಲೀನರಾಗಿರುವಾಗಲೇ ನಾಲ್ಕೈದು ಮಂದಿ ತಂಡ ದಾಳಿ ನಡೆಸಿದೆ. ನುಗ್ಗಿ ಬಂದವನೊಬ್ಬ ಚಾಕು ತೆಗೆದು ಗೋವಿಂದರಾಜು ಕೆನ್ನೆ ಕುಯ್ದಿದ್ದಾನೆ. ಮತ್ತೊಬ್ಬ ಭುಜಕ್ಕೆ ತಿವಿದಿದ್ದಾನೆ. ಇನ್ನೊಬ್ಬ ಮುಖಕ್ಕೆ ಇರಿದಿದ್ದಾನೆ. ಗೋವಿಂದರಾಜು ಕೂಗಿಕೊಂಡು ಒದ್ದಾಡುತ್ತಿದ್ದಂತೆ ದುಷ್ಕರ್ಮಿಗಳ ಆಟೋ ಹತ್ತಿಕೊಂಡು ಕಣ್ಮರೆಯಾಗಿದ್ದಾರೆ. ಆ ಹೊತ್ತಿಗೆ ಅಲ್ಲೇ ಇದ್ದ ಮತ್ತೊಬ್ಬ ಮಾಜಿ ಕೌನ್ಸಿಲರ್ ಕೃಷ್ಣಕುಮಾರ್ ಉರ್ಫ್ ಕಿಟ್ಟಿ ಗೋವಿಂದರಾಜು ರಕ್ಷಣೆಗೆ ಬಂದರಾದರೂ ದುಷ್ಕರ್ಮಿಗಳನ್ನು ಹಿಡಿಯಲಾಗಿಲ್ಲ. ಪರಾರಿಯಾದ ಆಟೋರಿಕ್ಷಾದ ನಂಬರ್ ಕೂಡಾ ಯಾರೂ ಗಮನಿಸಿಲ್ಲ. ದಾಳಿಗೆ ಬಂದವರು ತೆಲುಗು ಮಾತನಾಡುತ್ತಿದ್ದರಂತೆ. ಆಂಧ್ರದ ಕಡೆಯವರಂತೆ ಕಾಣುತ್ತಿದ್ದರಂತೆ. ಯಾರಿಗೂ ಅರ್ಥವಾಗದ್ದೆಂದರೆ ಗೋವಿಂದರಾಜು ತರಹದ ನಿರುಪದ್ರವಿಯ ಮೇಲೆ ದಾಳಿ ನಡೆದದ್ದೇಕೆ?


ಸದ್ಯ ಮಲ್ಲಿಗೆ ಆಸ್ಪತ್ರೆಯಲ್ಲಿ ಮಲಗಿರುವ ಗೋವಿಂದರಾಜುವೇ "ನನಗ್ಯಾರೂ ಶತ್ರುಗಳಿಲ್ಲ, ಏಕೆ ನನ್ನ ಮೇಲೆ ಅಟ್ಯಾಕ್ ನಡೆಯಿತೆಂಬುದೇ ಗೊತ್ತಾಗುತ್ತಿಲ್ಲ..." ಎಂದು ಮಲ್ಲೇಶ್ವರದ ಪೊಲೀಸರ ಮುಂದೆ ಕೈ ಚೆಲ್ಲುತ್ತಿದ್ದಾರೆ. ಗೋವಿಂದರಾಜು ಕೊಲೆಗೆ ಯತ್ನಿಸಿ ಯಾರಿಗೇನು ಲಾಭ? ಎಂಬುದಕ್ಕೆ ಉತ್ತರವಿಲ್ಲ. ಬಹುಶಃ ಅದು ಶ್ರೀರಾಂಪುರದ ಪಾಲಿಕೆ ಪಾಲಿಟಿಕ್ಸ್!

ಮಲ್ಲೇಶ್ ವಿರುದ್ಧ ಅತ್ಯಲ್ಪ ಅಂತರದಿಂದ ಸೋತ ಗೋವಿಂದರಾಜು ಮೇಲೆ ಹಲ್ಲೆ ನಡೆಸಲು ಯಾರಿಗೂ ಕಾರಣಗಳಿಲ್ಲ. ಆದರೆ ಗೆದ್ದಿರುವ ಮಲ್ಲೇಶ್ ಮೇಲೆ ಕತ್ತಿ ಮಸೆಯುತ್ತಿರುವವರ ಸಂಖ್ಯೆಯೇ ದೊಡ್ಡದಿದೆ. ಮೊನ್ನೆಯಷ್ಟೇ ಪಾಲಿಕೆ ಸಭೆಯಲ್ಲಿ ಮಲ್ಲೇಶ್ವರದ ಮಂತ್ರಿ ಟೌನ್‌ಶಿಪ್ ವಿರುದ್ಧ ಮಲ್ಲೇಶ್ ಪ್ರತಿಭಟಿಸಿದ್ದು ದೊಡ್ಡ ವಿವಾದವಾಯ್ತು. ಜೊತೆಗೆ ಕೃಷ್ಣಾ ಫ್ಲೋರ್‌ಮಿಲ್ ಪಕ್ಕದಲ್ಲಿ ಪಾಂಡುರಂಗಶೆಟ್ಟಿ ಎಂಬ ಖದೀಮ ಆಕ್ರಮಿಸಿಕೊಂಡಿದ್ದ ಒಂದೆಕರೆ ಹತ್ತುಗುಂಟೆ ಪಾಲಿಕೆ ಆಸ್ತಿಯ ವಶಕ್ಕಾಗಿ ಮಲ್ಲೇಶ್ ಕ್ರಮಕ್ಕೆಗೊಂಡಿದ್ದೂ ಸುದ್ದಿಯಾಗಿದೆ. ಮಲ್ಲೇಶ್ ಎದುರಾಳಿ ಗೋವಿಂದರಾಜು ಮೇಲೆ ಅಟ್ಯಾಕ್ ಮಾಡಿ ಅದನ್ನು ಕೌನ್ಸಿಲರ್ ಮಲ್ಲೇಶ್ ತಲೆಗೆ ಕಟ್ಟುವುದು ಖದೀಮ ಬಿಲ್ಡರುಗಳ ಹುನ್ನಾರವೆಂದೇ ಶ್ರೀರಾಂಪುರದಲ್ಲಿ ಗುಲ್ಲೆದ್ದಿದೆ.

ಇಡೀ ಮಲ್ಲೇಶ್ವರಕ್ಕೆ ಕಂಟಕದಂತೆ ತಲೆಎತ್ತುತ್ತಿರುವ ಮಂತ್ರಿ ಟೌನ್‌ಶಿಪ್ ಕರ್ಮಕಾಂಡದಲ್ಲಿ ಹಿಂದಿದ್ದ ಪಾಲಿಕೆ ಕಮಿಷನರ್‌ಗಳು, ಇಂಜಿನಿಯರುಗಳೆಲ್ಲ ಬೇಕಾಬಿಟ್ಟಿ ರೊಕ್ಕ ಬಾಚಿದ್ದಾರೆ. ಅದೂ ಎಂಥಾ ಹಗಲುದರೋಡೆಯೆಂದರೆ; ಶೇಷಾದ್ರಿಪುರದ ಪ್ಲಾಟ್‌ಫಾರಂ ರಸ್ತೆಯ ಅಗಲೀಕರಣಕ್ಕೆಂದು ಎಲ್ಲಿ ಮಂತ್ರಿ ಟೌನ್‌ಶಿಪ್‌ನ ಹತ್ತು ಅಡಿ ಜಾಗವನ್ನು ಬಿಟ್ಟುಕೊಡಬೇಕಾಗುತ್ತದೋ ಎಂದು ರಸ್ತೆಯ ನಕಾಶೆಯನ್ನೇ ಪಾಲಿಕೆ ಖದೀಮರು ತಿದ್ದಿದ್ದಾರೆ. ಇದರ ವಿರುದ್ಧ ಮೊನ್ನೆ ಪಾಲಿಕೆ ಸಭೆಯಲ್ಲೇ ಮಲ್ಲೇಶ್ ಪ್ರತಿಭಟಿಸಿದರೆ, ಮಲ್ಲೇಶ್‌ರನ್ನೇ ಸಸ್ಪೆಂಡ್ ಮಾಡಿಸುವಷ್ಟು ರೊಕ್ಕವನ್ನು ಮಂತ್ರಿ ಧೂರ್ತರು ಸುರಿದಿದ್ದಾರೆ.

ಮಂತ್ರಿ ಬಿಲ್ಡರ್ಸ್ ಒಡ್ಡಿದ ಐವತ್ತು ಲಕ್ಷದ ಲಂಚದ ಆಮಿಷವನ್ನು ಮಲ್ಲೇಶ್ ಧಿಕ್ಕರಿಸಿದ್ದಾರೆ. ಪಾಲಿಕೆ ಕೌನ್ಸಿಲರ್ ಓರ್ವನಿಗೆ 50 ಲಕ್ಷ ಲಂಚ ಕೊಡಬಲ್ಲ ಮಂತ್ರಿ ಡೆವಲಪರ್ಸ್ ಧಣಿಗಳಿಗೆ ಯಾರೋ ಪುಡಿರೌಡಿಗಳಿಗೆ 5 ಲಕ್ಷ ಕೊಡುವುದು ಯಾವ ಮಹಾ?


ಗೆದ್ದು ಬಂದ ಮಲ್ಲೇಶ್ ಮಂತ್ರಿ ಡೆವಲಪರ್ಸ್ ಹುತ್ತಕ್ಕಷ್ಟೇ ಕೈಹಾಕಿಲ್ಲ, ಕೃಷ್ಣಾ ಫ್ಲೋರ್‌ಮಿಲ್ ಪಕ್ಕದಲ್ಲಿ ಪಾಂಡುರಂಗಶೆಟ್ಟಿ ಎಂಬ ಹಳೇ ನೆಲಗಳ್ಳ ಆಕ್ರಮಿಸಿಕೊಂಡಿರುವ ಒಂದೆಕರೆ ಹತ್ತುಗುಂಟೆಯ ಪಾಲಿಕೆ ಆಸ್ತಿಯ ಜಪ್ತಿಗಾಗಿಯೂ ಕ್ರಮಕೈಗೊಂಡಿದ್ದಾರೆ. ಸದ್ಯ ಅದು 30 ಕೋಟಿಯ ಆಸ್ತಿ. 2003ಕ್ಕೆ ಅದರ ಗುತ್ತಿಗೆ ಅವಧಿ ಮುಗಿದಿದೆ. ಅದನ್ನೇನಾದರೂ ಮತ್ತೆ ಪಾಲಿಕೆ ವಶಪಡಿಸಿಕೊಂಡಿತೆಂದರೆ ತಿಂಗಳಾಂಪ್ರತಿ ಪಾಂಡುರಂಗಶೆಟ್ಟಿ ವಸೂಲು ಮಾಡುತ್ತಿರುವ ಐದು ಲಕ್ಷದಷ್ಟು ಬಾಡಿಗೆ ಕೈತಪ್ಪುತ್ತದೆ. ಈ ಒಂದೆಕರೆ ಜಾಗದಲ್ಲಿ ಪಾಲಿಕೆ ಆಸ್ಪತ್ರೆ ಕಟ್ಟಿಸುವುದು ಮಲ್ಲೇಶ್ ಉದ್ದೇಶ. ಅದರ ವಿರುದ್ಧ ಪಾಂಡುರಂಗಶೆಟ್ಟಿ ಮಲ್ಲೇಶ್‌ಗೆ ಇಪ್ಪತ್ತು ಲಕ್ಷದ ಆಫರ್ ಕೊಟ್ಟಿದ್ದ. ಯಾವತ್ತು ಮಲ್ಲೇಶ್ ಅದನ್ನು ಧಿಕ್ಕರಿಸಿದರೋ ಶೆಟ್ಟಿ ಎಮ್ಮೆಲ್ಲೆ ದಿನೇಶ್‌ರಿಂದ ಹೇಳಿಸಲೆತ್ನಿಸಿದ. ಅದಕ್ಕೂ ಜಗ್ಗದೇ ಹೋದಾಗ ಲೋಕಲ್ ರೌಡಿ ಜೇಮ್ಸ್ ಎಂಬಾತನಿಗೆ ದೀಲುಕೊಟ್ಟ.


ದಿನೇಶ್ ಗುಂಡೂರಾವ್

ಮಲ್ಲೇಶರನ್ನು ಮೆತ್ತಗಾಗಿಸಲು ಜೇಮ್ಸ್ ಗೋವಿಂದರಾಜು ಮೇಲೆ ಅಟ್ಯಾಕ್ ಮಾಡಿಸುವ ಷಡ್ಯಂತ್ರಕ್ಕೆ ಕೈಯಿಟ್ಟನಾ?

ಅಥವಾ ಗೋವಿಂದರಾಜುವೇ ತನಗರಿವಿಲ್ಲದಂತೆ ಅಪಾಯವನ್ನು ಮೇಲೆಳೆದುಕೊಂಡರಾ? ಏಕೆಂದರೆ ಗೋವಿಂದರಾಜು ಬೆಂಬಲಿಗರಿಗೂ ಗೆದ್ದ ಮಲ್ಲೇಶ್ ಬೆಂಬಲಿಗರಿಗೂ ಪಾಲಿಕೆ ಚುನಾವಣೆಯಲ್ಲಿ ಘರ್ಷಣೆಗಳಾಗಿವೆ. ಗೆದ್ದ ನಂತರ ಮಲ್ಲೇಶರನ್ನು ತಮ್ಮ ಕಚೇರಿಗೆ ಕರೆಸಿದ ಶಾಸಕ ದಿನೇಶ್ ಎದುರಿಗೆ ಗೋವಿಂದರಾಜುವನ್ನು ಕೂರಿಸಿಕೊಂಡು ಕೌನ್ಸಿಲರ್‌ಗಿರಿಯನ್ನು ಇಬ್ಬರೂ ಹಂಚಿಕೊಂಡು ಹೋಗಿ ಎಂದು ತಾಕೀತು ಮಾಡಿದ್ದಾರೆ. ಮಲ್ಲೇಶ್ ಅದಕ್ಕೂ ಸಮ್ಮತಿಸಿದ್ದಾರೆ. ಈ ಮಧ್ಯೆಯೇ ಶ್ರೀರಾಂಪುರದಲ್ಲಿ ಸೈಕಲ್ ರವಿ ಶಿಷ್ಯ ಮತ್ತು ಹಳೇ ರೌಡಿ ಪೂಣೆಕಣ್ಣಾ ಎಂಬಾತನ ಕೊಲೆಯಾಗಿದೆ. ಪೂಣೆಕಣ್ಣನನ್ನು ಕೊಂದಿದ್ದು ಸುನೀಲನ ಶಿಷ್ಯರಂತೆ. ಆದರೆ ಪ್ರತೀಕಾರಕ್ಕೆ ಬಿದ್ದ ಪೂಣೆಕಣ್ಣನ ಹುಡುಗರು ಅದೇ ಶ್ರೀರಾಂಪುರದ ಹಳೇ ರೌಡಿಗಳಾದ ಲೋಗ-ಗಂಗಾರ ಮನೆಗೆ ಬೆಂಕಿಯಿಟ್ಟರು. ಹೀಗೆ ಬೆಂಕಿ ಯಿಟ್ಟವರ ಪೈಕಿ ಒಂದಿಬ್ಬರು ಗೋವಿಂದರಾಜು ಬೆಂಬಲಿಗರಂತೆ. ಗೋವಿಂದರಾಜುವೇ ಛೂಬಿಟ್ಟು ಬೆಂಕಿ ಇಕ್ಕಿಸಿದ್ದಾರೆಂಬ ಸುದ್ದಿ ಹಬ್ಬಿದೆ. ಇದರಿಂದ ಕೆರಳಿದ ಲೋಗ-ಗಂಗಾರ ಹುಡುಗರು ಗೋವಿಂದರಾಜುವಿಗೆ ಬುದ್ಧಿಕಲಿಸಲು ಕೈಯಿಟ್ಟರೇ?

ಇದಲ್ಲದೇ ಇನ್ನೂ ಒಂದು ಸಾಧ್ಯತೆಯಿದೆ. ಅದು ಇಲ್ಲಿಗೆ 2 ವರ್ಷದ ಹಿಂದೆ ಕೊಲೆಯಾದ ನಂಜುಂಡನ ಹತ್ಯೆಯ ರಿವೇಂಜ್. ಕಾಂಗ್ರೆಸ್ ಕಾರ್ಯಕರ್ತನಾಗಿದ್ದ ನಂಜುಂಡ ಪಾಲಿಕೆಯ ಕಂಟ್ರಾಕ್ಟ್ ಕೂಡಾ ಮಾಡಿಸುತ್ತಿದ್ದ. ಗೋವಿಂದರಾಜು ಕೌನ್ಸಿಲರ್ ಆಗಿದ್ದಾಗ ಪ್ರತಿ ಕಾಮಗಾರಿಗೂ ಕ್ಯಾತೆ ತೆಗೆದು ಹಾವಳಿಯಿಡುತ್ತಿದ್ದ ನಂಜುಂಡನ ವಿರುದ್ಧ ಗೋವಿಂದರಾಜುಗೆ ಸಿಟ್ಟಿತ್ತು. ಅದೊಮ್ಮೆ ನಂಜುಂಡನ ಚಿಕ್ಕಪ್ಪನ ಮಗನೇ ಆಟೋದಲ್ಲಿ ಕೂತಿದ್ದಂತೆ ನಂಜುಂಡನನ್ನು ಇರಿದು ಕೊಂದುಬಿಟ್ಟ.


ಎಲ್. ಗೋವಿಂದರಾಜು

▶▶ 7

ಹಳೇ ಕ್ರಿಮಿನಲ್ ಜೇಮ್ಸ್‌ನ ತಲೆಗಾರಿಕೆ?

ನನ್ನ ಬೆಂಬಲಿಗರಿಗೂ ಗೋವಿಂದರಾಜು ಶಿಷ್ಯರಿಗೂ ಘರ್ಷಣೆಗಳಾಗಿರೋದು ನಿಜ. ಅದೇನಿದ್ದರೂ ಚುನಾವಣೆಯ ಮಟ್ಟಿಗೆ ಮಾತ್ರ. ನಾನು ಗೆದ್ದ ನಂತರ ಶಾಸಕರೇ ಕರೆಸಿ ಇಬ್ಬರಿಗೂ ರಾಜಿ ಮಾಡಿಸಿದ್ದಾರೆ. ಇಬ್ಬರೂ ಪರಸ್ಪರ ಬೆಂಬಲಿಸಿಕೊಂಡೇ ಕೆಲಸ ಮಾಡಬೇಕು ಎಂದು ಎಮ್ಮೆಲ್ಲೇ ಸಾಹೇಬರು ಹೇಳಿದ್ದಕ್ಕೆ ನಾನು ಒಪ್ಪಿಕೊಂಡೂ ಆಗಿದೆ. ಹಾಗಿದ್ದ ಮೇಲೆ ನಾನ್ಯಾಕೆ ಅವರ ಮೇಲೆ ರೌಡಿಗಳನ್ನು ಛೂ ಬಿಡಲಿ? ಗೆದ್ದಿದ್ದಕ್ಕೆ ನನ್ನ ಮೇಲೆ ಅವರಿಗೆ ಜಿದ್ದಿರಬೇಕೇ ಹೊರತು ಸೋತ ಮನುಷ್ಯನ ಮೇಲೆ ಜಿದ್ದು ಸಾಧಿಸಿ ನನಗೆ ಬರುವ ಲಾಭವಾದರೂ ಏನು?

ಇದು ಸುಭಾಶ್ ನಗರದ ಕೌನ್ಸಿಲರ್ ಮಲ್ಲೇಶ್ ಬಾಯಿಂದ ಬಂದ ಮಾತು. ಹಾಗಾದರೆ ಗೋವಿಂದರಾಜು ಮೇಲೆ ಹಗೆಯಿರಬಲ್ಲ ಬೇರೆ ಯಾರಾದರೂ ಪಾತಕಿಗಳು ಇರಲು ಸಾಧ್ಯವಾ? ಎಂದು ಲೆಕ್ಕ ಹಾಕಿದರೆ ಅನೇಕ ಪಾತಕಿಗಳ ಹೆಸರು ಕೇಳಿಬರುತ್ತದೆ. ಈ ಪೈಕಿ ಮೊದಲ ಹೆಸರೇ ಕೇಬಲ್ ಖಳ್ಯಾ ಅಲಿಯಾಸ್ ವೆಂಕಟೇಶ್ ಎಂಬಾತನದು. ಈತ ಮೇಲುನೋಟಕ್ಕೆ ಗೋವಿಂದರಾಜು ಬೆಂಬಲಿಗನಂತೆ ಪೋಜು ಕೊಡುತ್ತಾನೆ. ಆದರೆ ಮಲ್ಲೇಶ್ ಮೇಲೆ ಈತನಿಗೆ ಜಿದ್ದಿದೆ. ಗೋವಿಂದರಾಜು ಮತ್ತು ಮಲ್ಲೇಶ್ ಮಧ್ಯೆ ಎಲೆಕ್ಷನ್ ಸಂಬಂಧಿ ಜಿದ್ದಾಜಿದ್ದಿಯಿದ್ದುದನ್ನು ನೋಡಿ ಈತನೇ ಹುಡುಗರನ್ನು ಬಿಟ್ಟು ಹಲ್ಲೆ ಮಾಡಿಸಿ ಅದನ್ನು ಮಲ್ಲೇಶ್ ತಲೆಗೆ ಕಟ್ಟಲು ತಂತ್ರ ರೂಪಿಸಿದ್ದಾನೆಂಬುದು ಒಂದು ಗುಮಾನಿ. ಹಾಗೇ ಗುಮಾನಿಯಿರುವ ಮತ್ತೊಬ್ಬ ವ್ಯಕ್ತಿಯೆಂದರೆ ಆತ ಹನುಮಂತಪ್ಪ ಕಾಲೋನಿಯ ಜೇಮ್ಸ್. ಈತ ಹಳೇ ರೌಡಿ. ಗೋವಿಂದರಾಜು ಕೌನ್ಸಿಲರ್ ಆಗಿದ್ದಷ್ಟೂ ಕಾಲ ಅವರ ಜೊತೆಗಿದ್ದು ಎಲ್ಲೆಲ್ಲಿ ಪಾಲಿಕೆ ಖಾಲಿ ಜಾಗ ಇತ್ತೋ ಅಲ್ಲೆಲ್ಲ ಅಂಬೇಡ್ಕರ್ ಸಂಘ ಎಂದು ಬೋರ್ಡ್ ಬರೆಸಿ ಹಾಕಿ ಸೈಟು ಹೊಡೆಯುವುದು ಈತನ ಹಳೇ ಚಾಳಿ. ವಯಸ್ಸು ನಲವತ್ತಾಗಿದೆಯಾದರೂ ಸದಾಕಾಲ ತನ್ನ ಸುತ್ತ ಡಜನ್ನುಗಟ್ಟಲೇ ಪಡ್ಡೆ ಹುಡುಗರನ್ನು ಜಮಾಯಿಸಿಕೊಂಡಿರುತ್ತಾನೆ.

ಈಗ ಗೋವಿಂದರಾಜು ಮೇಲೆ ದಾಳಿ ನಡೆಸಿದ ಹುಡುಗರ ಚಹರೆಗೂ ಈತನ ಗ್ಯಾಂಗಿನ ಪಡ್ಡೆಗಳಿಗೂ ಹೋಲಿಕೆಯಿದೆ. ಕಳೆದ ಪಾಲಿಕೆ ಚುನಾವಣೆಯಲ್ಲಿ ಗೋವಿಂದರಾಜು ಜೊತೆಗಿದ್ದೇ ಸಿಕ್ಕಾಪಟ್ಟೆ ದುಡ್ಡು ಬಾಚಿದ ಜೇಮ್ಸ್ ಕಾಂಗ್ರೆಸ್, ಬಿಜೆಪಿಯವರಿಂದಲೂ ರೊಕ್ಕ ತಿಂದಿದ್ದ. ಜೊತೆಗಿದ್ದೇ ದೋಖಾ ಮಾಡಿದ ಜೇಮ್ಸ್ ವಿರುದ್ಧ ಗೋವಿಂದರಾಜುಗೆ ಸಿಟ್ಟಿತ್ತು, ಕರೆದು ರೇಗಿದ್ದರು. ಮಲ್ಲೇಶ್ ಗೆದ್ದ ನಂತರ ಜೇಮ್ಸ್ ಮತ್ತೊಂದು ವರಸೆಗೆ ಕೈಯಿಟ್ಟ.

ಅದು ಪಾಲಿಕೆ ಕಾಂಟ್ರಾಕ್ಟ್‌ನ ಕಮಿಷನ್. ಎಮ್ಮೆಲ್ಲೆ ನಿನಗೆ 3 ಕೋಟಿಯ ಟೆಂಡರ್ ಕೊಟ್ಟ ಮೇಲೆ ಅದರಲ್ಲಿ ನನಗೆ ಕಮಿಷನ್ ಕೊಡದಿದ್ದರೆ ಹೇಗೆ? ನನ್ನ ಸಪೋರ್ಟ್‌ನಿಂದಲೇ ನೀನು ಎರಡು ಬಾರಿ ಕೌನ್ಸಿಲರ್ ಆಗಿದ್ದು. ಐದು ಲಕ್ಷ ಮಡಗು ಮತ್ತೆ.....? ಎಂದು ಜೇಮ್ಸ್ ಧಮಕಿ ಹಾಕಿದ್ದ. ಇದಕ್ಕೆ ಗೋವಿಂದರಾಜು ಸೊಪ್ಪು ಹಾಕಿಲ್ಲ. ತಲೆ ಓಡಿಸಿದ ಜೇಮ್ಸ್ ಒಂದೇ ಕಲ್ಲಿನಿಂದ ಎರಡು ಹಕ್ಕಿ ಹೊಡೆಯಲು ಸ್ಕೆಚ್ ಹಾಕಿರಬೇಕು. ತಾನೇ ನೇರವಾಗಿ ಮಲ್ಲೇಶ್ ವಿರುದ್ಧ ಬೀಳುವುದಕ್ಕಿಂತ ಗೋವಿಂದರಾಜು ಮೇಲೆ ಹಲ್ಲೆ ನಡೆಸಿ ಅದನ್ನು ಮಲ್ಲೇಶ್ ತಲೆಗೆ ಕಟ್ಟಿಬಿಟ್ಟರೆ? ಕಡುವೈರಿ ಮಲ್ಲೇಶ್ ಜೈಲು ಪಾಲಾದಂತಾಯ್ತು, ಮಲ್ಲೇಶ್ ಮೇಲಿನ ಭೀತಿಯಿಂದ ಗೋವಿಂದರಾಜು ತನ್ನನ್ನು ಜೊತೆ ಹಾಕಿಕೊಂಡು ಕೇಳಿದಾಗೆಲ್ಲ ರೊಕ್ಕ ಬಿಚ್ಚುತ್ತಾನೆಂಬ ಉಪಾಯವೂ ಇರಬಹುದೇ? ಪಾಲಿಕೆ ಆಸ್ತಿ ಕಬಳಿಸಿದ ಪಾಂಡುರಂಗ ಶೆಟ್ಟಿಗೂ ಜೇಮ್ಸ್ ಪರಮಾಪ್ತ.

ಹಳೇ ಪಾತಕಿ ಜೇಮ್ಸ್ ಇಂಥ ನರಿಬುದ್ಧಿಯಲ್ಲಿ ನಿಸ್ಸೀಮ!

ಬೆಂಗಳೂರು: ರಸ್ತೆ ಅಗಲೀಕರಣ ಬಿಬಿಎಂಪಿ ಮನೆಮುರುಕುತನ...

ದಿನೇದಿನೇ ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಹೊಸ ಮೂಲಭೂತ ಸೌಕರ್ಯಗಳ ಅಗತ್ಯ ಇದ್ದೇ ಇದೆ. ಆದರೆ ಸಾವಿರಾರು ಕುಟುಂಬಗಳನ್ನು ಬೀದಿಗೆ ತಳ್ಳುವ, ಯಾವ ಉಪಯೋಗವಾಗದ ಯೋಜನೆಗಳು ಮಾತ್ರ ಕಾರ್ಪೋರೇಟರ್‌ಗಳ ಅದರಲ್ಲೂ ಅಧಿಕಾರಿಗಳ ಜೇಬು ತುಂಬಲಷ್ಟೇ ಜಾರಿಯಾಗುತ್ತಿವೆ. ಅಂತಹ ಯೋಜನೆಗಳ ಪೈಕಿ ಈಗ ವಿವಾದಕ್ಕೆ ಈಡಾಗಿರುವುದು 281 ರಸ್ತೆಗಳ ಅಗಲೀಕರಣ ಎಂಬ ಮನೆಮುರುಕುತನ.






ಒಟ್ಟಿನಲ್ಲಿ ಪ್ರಾಜೆಕ್ಟ್‌ಗಳು ನಡೆಯುತ್ತಿರಬೇಕು. ಅದು ಏತಕ್ಕೂ ಅಗತ್ಯವೋ, ಇಲ್ಲವೋ ಇದ್ಯಾವುದೂ ಮುಖ್ಯವಲ್ಲ. ಇಲ್ಲೊಂದು ಕಡೆ ಅಂಡರ್‌ಪಾಸ್, ಇಲ್ಲೊಂದು ಕಡೆ ಫ್ಲೈಓವರ್, ಮತ್ತೊಂದೆಡೆ ರಸ್ತೆ ಅಗಲೀಕರಣ-ಹೀಗೆ ಎಲ್ಲ ಮಾರ್ಗಗಳಲ್ಲೂ ಭರ್ಜರಿ ಕಾಮಗಾರಿಗಳು ಚಾಲ್ತಿಯಲ್ಲಿರಬೇಕು. ಆಗಲೇ ಅಲ್ಲವೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಪೋರೇಟರುಗಳು, ಅಧಿಕಾರಿಗಳು, ಬೆಂಗಳೂರಿನ ಶಾಸಕರು, ಉಸ್ತುವಾರಿ ಸಚಿವರ ಟ್ರೆಜರಿಗಳು ತುಂಬಿತುಳುಕುವುದು?

ಹೌದು, ದಿನೇದಿನೇ ಬೆಳೆಯುತ್ತಿರುವ ಬೆಂಗಳೂರಿನಲ್ಲಿ ಹೊಸ ಮೂಲಭೂತ ಸೌಕರ್ಯಗಳ ಅಗತ್ಯ ಇದ್ದೇ ಇದೆ. ಆದರೆ ಸಾವಿರಾರು ಕುಟುಂಬಗಳನ್ನು ಬೀದಿಗೆ ತಳ್ಳುವ, ಯಾವ ಉಪಯೋಗವಾಗದ ಯೋಜನೆಗಳು ಮಾತ್ರ ಕಾರ್ಪೋರೇಟರ್‌ಗಳ ಅದರಲ್ಲೂ ಅಧಿಕಾರಿಗಳ ಜೇಬು ತುಂಬಲಷ್ಟೇ ಜಾರಿಯಾಗುತ್ತಿವೆ.

ಅಂತಹ ಯೋಜನೆಗಳ ಪೈಕಿ ಈಗ ವಿವಾದಕ್ಕೆ ಈಡಾಗಿರುವುದು 281 ರಸ್ತೆಗಳ ಅಗಲೀಕರಣ ಎಂಬ ಮನೆಮುರುಕುತನ. ಹೌದು ಇದು ಪಕ್ಕಾ ಮನೆಮುರುಕುತನವೇ. ಈ ಇಡೀ ಯೋಜನೆ ಜಾರಿಯಾದರೆ ಮೈಸೂರು ಸರ್ಕಲ್ (ಸಿರ್ಸಿ ಸರ್ಕಲ್)ನಿಂದ ಬನ್ನೇರುಘಟ್ಟದವರೆಗಿನ ಸುಮಾರು 38 ಸಾವಿರ ಕುಟುಂಬಗಳು ಬೀದಿಗೆ ಬೀಳಲಿವೆ. ಅದರೆ ಲಕ್ಷಾಂತರ ಜನ ದಿಕ್ಕಾ ಪಾಲಾಗಲಿದ್ದಾರೆ. ಇಂತಹ ಒಂದು ವಿವೇಚನಾರಹಿತ ಯೋಜನೆಯ ಸಪೋರ್ಟಿಗೆ ಕಂದಾಯ ಸಚಿವ, ಬೆಂಗಳೂರು ಉಸ್ತುವಾರಿ ಸಚಿವರೊಬ್ಬರಾದ ಆರ್.ಅಶೋಕ್ ಎಂಬ ಭೀಕರ ಭೂಗಳ್ಳ ನಿಂತಿದ್ದಾನೆ. ಇವನೊಂದಿಗೆ ತಾಳ ಹಾಕುತ್ತಿರುವವರು ಭೋಟಾ ಚೋರ್ ಮೇಯರ್ ನಟರಾಜ್ ಮತ್ತು ಪಾಲಿಕೆಯ ಭ್ರಷ್ಟ ಇಂಜಿನಿಯರ್‌ಗಳು.

ಈಗಾಗಲೇ ಚಾಮರಾಜಪೇಟೆಯಲ್ಲಿ ಈ ಯೋಜನೆಯ ವಿರುದ್ಧ ಭಾರೀ ಪ್ರತಿರೋಧ ವ್ಯಕ್ತವಾಗಿದೆ. ವರ್ತಕರು, ನಿವಾಸಿಗಳು ಬೀದಿಗಿಳಿದು ಪ್ರತಿಭಟನೆ ಮಾಡಿದ್ದಾರೆ. ಮುಂದಿನ ಪ್ರತಿಭಟನೆಗಳ ರೂಪುರೇಷೆ ತಯಾರಿಸುತ್ತಿದ್ದಾರೆ ಆದರೆ 'ಅಭಿವೃದ್ಧಿ' ಎಂಬ ಚೆಂದದ ಗೊಂಬೆಯನ್ನು ತೋರಿಸುತ್ತಿರುವ ಆಡಳಿತವರ್ಗ ಮಾತ್ರ ಯೋಜನೆ ಜಾರಿ ಮಾಡಲೇಬೇಕು, ಅದರಲ್ಲಿ ಯಕ್ಕಾಮಕ್ಕಾ ತಿನ್ನಲೇಬೇಕೆಂದು ನಿರ್ಧರಿಸಿಬಿಟ್ಟಿದೆ.

ಸದ್ಯ ಈ ಯೋಜನೆಯ ಮೊದಲ ಹಂತದಲ್ಲಿ ಚಾಮರಾಜಪೇಟೆಯ ಮೂರು ರಸ್ತೆಗಳ ಅಗಲೀಕರಣ ಮಾಡಲಿದ್ದಾರೆ. 3ನೇ ಅಡ್ಡರಸ್ತೆ, 9ನೇ ಅಡ್ಡರಸ್ತೆ ಮತ್ತು 5ನೇ ಮುಖ್ಯರಸ್ತೆಗಳಲ್ಲಿನ ಸುಮಾರು ಒಂದೂವರೆ ಸಾವಿರ ಅಂಗಡಿಗಳು, ಐನೂರು ಮನೆಗಳು ಈ ಯೋಜನೆಗೆ ಬಲಿಯಾಗಲಿವೆ. ಈ ರಸ್ತೆಗಳಲ್ಲಿ ವಾಹನ ಸಂಚಾರದ ದಟ್ಟಣೆ ಕಡಿಮೆ ಮಾಡಲು ಈ ವಿಸ್ತರಣೆ ಎಂದು ಪಾಲಿಕೆ ಬೊಂಬಡಾ ಬಜಾಯಿಸುತ್ತಿದೆ. ಮೂರನೇ ಕ್ರಾಸ್‌ನ ರಾಯಲ್ ಸರ್ಕಲ್‌ನಿಂದ ಜ್ಞಾನೋದಯ ಸ್ಕೂಲ್‌ವರೆಗೆ ಈಗ ಎಂಬತ್ತು ಅಡಿ ರಸ್ತೆ ಇದ್ದು ಅದನ್ನು ನೂರು ಅಡಿವರೆಗೆ ವಿಸ್ತರಿಸಿಬಿಟ್ಟರೆ ವಾಹನ ಸಂಚಾರ ಸುಗಮ ಎಂದು ಭಾರೀ ಸಂಶೋಧನಾ ವರದಿಯನ್ನು ಪಾಲಿಕೆಯ ಭ್ರಷ್ಟ ಇಂಜಿನಿಯರ್‌ಗಳು ಸಿದ್ಧಪಡಿಸಿದ್ದಾರೆ! ಈ ಘನಂಧಾರಿ ಕೆಲಸಕ್ಕಾಗಿ ರಸ್ತೆಯ ಇಬ್ಬದಿಯ ನೂರಾರು ಅಂಗಡಿಗಳು, ಮನೆಗಳು ಅರ್ಧಕ್ಕರ್ಧ ಸಪಾಟಾಗಲಿವೆ. "ಉಳಿದರ್ಧದಲ್ಲಿ ನೀವು ಮಹಡಿ ಕಟ್ಟಿಕೊಳ್ಳಲು ನಮ್ಮ ಅಭ್ಯಂತರವಿಲ್ಲ, ತಗೊಳ್ಳಿ ಟಿಡಿಆರ್ (ಅಭಿವೃದ್ಧಿ ಹಸ್ತಾಂತರ ಹಕ್ಕು)" ಎಂದು ಹಕ್ಕುಪತ್ರ ನೀಡುತ್ತಿದ್ದಾರೆ ಪಾಲಿಕೆಯ ಕಳ್ಳ ಖದೀಮರು. ಅಂದರೆ ಇಲ್ಲಿ ಮನೆ, ಅಂಗಡಿ ಕಳಕೊಂಡವರಿಗೆ ಪರಿಹಾರವೇ ಇಲ್ಲ, ಬದಲಿಗೆ ಒಡೆಯಲ್ಪಟ್ಟ ಕಟ್ಟಡದಲ್ಲಿ ಅಳಿದುಳಿದ 20x20 ಜಾಗದಲ್ಲೋ 10x20 ಜಾಗದಲ್ಲೋ ಅವರು



ಮಹಡಿ ಕಟ್ಟಿಕೊಳ್ಳಲು ಕಳ್ಳ ಪಾಲಿಕೆ ಧಾರಾಳವಾಗಿ ಅನುಮತಿ ನೀಡುತ್ತದಂತೆ!

ಇನ್ನು ಒಂಭತ್ತನೇ ಅಡ್ಡರಸ್ತೆಯದೂ ಇದೇ ಕತೆ. ಇಲ್ಲಿ ಸಿರ್ಸಿ ವೃತ್ತದಿಂದ ಐದನೇ ಮುಖ್ಯರಸ್ತೆಯವರೆಗೆ ರಸ್ತೆ ಅಗಲೀಕರಣವಂತೆ. ಇಲ್ಲಿ ನೂರು ಅಡಿಯ ಹೈವೇ ಮಾಡಿ, ಮುಂದೆ ಅದನ್ನು ಹೊಸೂರು ರಸ್ತೆಗೆ ಲಿಂಕ್ ಮಾಡಿಬಿಟ್ಟರೆ ವಾಹನ ಸಂಚಾರ ಸುಗಮವೋ ಸುಗಮವಂತೆ... ಮತ್ತೆ ಇಲ್ಲಿ ಬೀದಿಗೆ ಬೀಳುವ ಕುಟುಂಬಗಳ ಕೈಗೆ ಮತ್ತದೇ ಟಿಡಿಆರ್ ಕಾಪಿ ಇಕ್ಕುತ್ತಿದ್ದಾರೆ.

ಬೇರೆ ದಾರಿ ಇಲ್ಲವೇ?

ನಿಜಕ್ಕೂ ಪಾಲಿಕೆಗೆ ಕಾಳಜಿ ಇದ್ದರೆ, ಇಲ್ಲಿ ಹಲವಾರು ಪರ್ಯಾಯ ಮಾರ್ಗಗಳಿವೆ. ಮೊದಲನೇ ಮುಖ್ಯರಸ್ತೆಯಲ್ಲಿರುವ ಬಸ್‌ಸ್ಟಾಪ್ ಅನ್ನು ಸ್ಥಳಾಂತರಿಸಿದರೆ ಕಾಲುಭಾಗ ಸಂಚಾರ ದಟ್ಟಣೆ ಸಮಸ್ಯೆ ಬಗೆಹರಿದಂತೆ. ಜೊತೆಗೆ ಎರ್ರಾಬಿರ್ರಿಯಾಗಿರುವ ಪಾರ್ಕಿಂಗ್ (ಅ)ವ್ಯವಸ್ಥೆಯನ್ನು ಸ್ಥಳಾಂತರಿಸಬಹುದು. ಈಗಿರುವ ವಿಶಾಲ ಫುಟ್‌ಪಾತ್‌ಗಳಿಂದ ಒಂದೆರಡು ಅಡಿ ಜಾಗವನ್ನು ರಸ್ತೆ ಅಗಲೀಕರಣಕ್ಕೆ ಬಳಸಿಕೊಳ್ಳಬಹುದು. ತೀರಾ ಅಗತ್ಯ ಬಿದ್ದಲ್ಲಿ ಒಂದು ಫ್ಲೈಓವರ್ ಅನ್ನೋ, ಅಂಡರ್‌ಪಾಸ್ ರಸ್ತೆಯನ್ನೋ ಇಲ್ಲವೇ ಮ್ಯಾಜಿಕ್ ಬಾಕ್ಸ್ ಸುರಂಗ ಮಾರ್ಗವನ್ನೋ ನಿರ್ಮಿಸಿದರೆ ಸಾಕು. ಚಾಮರಾಜಪೇಟೆಯ ಸಂಚಾರಿ ವ್ಯವಸ್ಥೆ ಸುಗಮವಾಗಿಬಿಡುತ್ತದೆ. ಜೊತೆಗೆ ಈಗಿರುವ 120-180 ಸೆಕೆಂಡುಗಳ ಸಿಗ್ನಲ್‌ಗಳ ಅವಧಿಯನ್ನು ಕಡಿಮೆಗೊಳಿಸಿ ಸಂಚಾರ ದಟ್ಟಣೆ ಕಡಿಮೆ ಮಾಡಬಹುದು.

ಟಿಡಿಆರ್: ನೋ ಯೂಸ್!

ಸದ್ಯ ಪಾಲಿಕೆ ನೀಡುತ್ತಿರುವ ಟಿಡಿಆರ್ (ಟ್ರಾನ್ಸ್‌ಫರಬಲ್ ಡೆವಲಪ್‌ಮೆಂಟ್ ರೈಟ್ಸ್) ಪತ್ರಗಳು ಚಾಮರಾಜಪೇಟೆಯ ವರ್ತಕರು ಮತ್ತು ನಿವಾಸಿಗಳಿಗೆ ಯಾವ್ಯಾವುದಕ್ಕೂ ಪ್ರಯೋಜನವಿಲ್ಲ, ಏಕೆಂದರೆ ಈ ಟಿಡಿಆರ್, ಲಭ್ಯವಿರುವ ಜಾಗದ ಮೇಲೆ ಮಹಡಿ ಕಟ್ಟಿಕೊಳ್ಳಲು ಅನುಮತಿ ನೀಡುತ್ತದಷ್ಟೇ. ಆದರೆ ಇಲ್ಲಿರುವ ಬಹುತೇಕ ಮಳಿಗೆಗಳ ವಿಸ್ತಾರ 20x12 ಸೈಜಿನದ್ದು. ಇದರಲ್ಲಿ ಹತ್ತು ಅಡಿ ಒಡೆದು ಹಾಕಿದರೆ ಉಳಿಯೋದಾದರೂ ಏನು? ಅಲ್ಲಿ ಮಹಡಿ ಕಟ್ಟಿದರೂ ಪ್ರಯೋಜನವೇನು? ಮೆಟ್ಟಿಲು ಮಾಡಲೂ ಜಾಗವಿಲ್ಲದಿರುವಾಗ, ಅಲ್ಲಿ ವ್ಯಾಪಾರ ಮಾಡುವುದಾದರೂ ಹೇಗೆ? "ಜನರಿಗಾಗಿಯೇ ಇದನ್ನೆಲ್ಲ ಮಾಡುತ್ತಿದ್ದೇನೆ" ಎನ್ನುವ ನೆಲಗಳ್ಳ ಆರ್.ಅಶೋಕ್ ಕಣ್ಣಲ್ಲಿ ಇಲ್ಲಿ ಬೀದಿಗೆ ಬೀಳುವವರು ಕಾಣುವುದಿಲ್ಲವೇ? ಪಾಲಿಕೆಯ ದಗಾಕೋರ ಇಂಜಿನಿಯರ್‌ಗಳು ಮತ್ತು ಕಂಟ್ರ್ಯಾಕ್ಟರುಗಳ ಕಮಿಷನ್‌ಗಾಗಿಯೇ ಅಶೋಕ್ ಇಷ್ಟೆಲ್ಲ 'ಅಭಿವೃದ್ಧಿ' ಕಾರ್ಯ ಹಮ್ಮಿಕೊಂಡಿರುವುದು ನಿಚ್ಚಳವಾಗಿ ಕಾಣುತ್ತಿರುವಾಗ, ಪ್ರತಿಭಟನೆ ಬಿಟ್ಟರೆ ಇನ್ನಾವ ಮಾರ್ಗವಿದೆ?

ಚಾಮರಾಜಪೇಟೆಯಲ್ಲಿ ಪಾಲಿಕೆ ವಿರುದ್ಧ ಎದ್ದಿರುವ ಅಸಹನೆ, ಪ್ರತಿಭಟನೆಗಳು ಇಡೀ ಬೆಂಗಳೂರಿಗೆ ವ್ಯಾಪಿಸಲಿವೆ. ಆಗಲೇ ಈ 'ಅಭಿವೃದ್ಧಿ' ಎಂಬ ಮನೆಮುರುಕುತನ ಬೆತ್ತಲಾಗಲಿದೆ.

● ಪಿ.ಕೆ.ಮಲ್ಲನಗೌಡರ್


ಇದಲ್ಲವೇ ವಿಪರ್ಯಾಸ?

ಇವತ್ತು ರಸ್ತೆ ಅಗಲೀಕರಣ ವಿರೋಧಿಸಿ ಚಾಮರಾಜಪೇಟೆಯಲ್ಲಿ ಸಂಘಟನಾತ್ಮಕ ಹೋರಾಟ ಕೈಗೆತ್ತಿಕೊಂಡಿರುವುದು ವರ್ತಕರು. ಆದರೆ ಈ ವರ್ತಕರಿಗೆ ಮಳಿಗೆ ಬಾಡಿಗೆ ನೀಡಿರುವ ಮಾಲೀಕರಿಗೆ ರಸ್ತೆ ಅಗಲೀಕರಣವಾಗುವುದು ಬೇಕಿದೆ. ಏಕೆಂದರೆ 50-60 ವರ್ಷಗಳ ಹಿಂದೆ ಬುಡುಬಿ ಬಾಡಿಗೆ ಬೆಲೆಗೆ ಈ ಮಳಿಗೆಗಳ ಮೇಲೆ ಆಧಿಪತ್ಯ ಸಾಧಿಸಿರುವ ಬಹುತೇಕ ವರ್ತಕರಿಗೆ ರಸ್ತೆ ಅಗಲೀಕರಣವಾದರೆ ಭಾರೀ ಲಾಸು! ಹೇಗಿದೆ ನೋಡಿ ವ್ಯಂಗ್ಯ?

ತಮ್ಮ ಕರಪತ್ರದಲ್ಲಿ 'ರಸ್ತೆ ಅಗಲೀಕರಣವಾದರೆ ರೈತರ ಸರಣಿ ಆತ್ಮಹತ್ಯೆಯಂತೆ ವರ್ತಕರೂ ಆತ್ಮಹತ್ಯೆಗೆ ಇಳಿಯಬೇಕಾಗುತ್ತದೆ' ಎನ್ನುವ ಸಾಲು ಸೇರಿಸಿರುವ ಈ ನಗರವಾಸಿ ಮಧ್ಯಮ, ಮೇಲ್ಮಧ್ಯಮ ವರ್ಗದವರಿಗೆ ಈಗ ಬುಡಕ್ಕೆ ಬಿಸಿ ತಗುಲಿದಾಗಷ್ಟೇ ರೈತರ ನೆನಪಾಗಿಬಿಟ್ಟಿದೆ.

ಇಲ್ಲಿ ಈ ವರ್ತಕ ಕುಟುಂಬಗಳಿಗೆ ಅನ್ಯಾಯವಾಗಬಾರದು ನಿಜ, ಆದರೆ ಪ್ರತಿನಿತ್ಯ ಕೈಗಾರೀಕರಣದ ಹೆಸರಲ್ಲಿ ಬೀದಿ ಪಾಲಾಗುತ್ತಿರುವ ಗ್ರಾಮೀಣ ರೈತರು, ಕೃಷಿಕಾರ್ಮಿಕರು, ಆದಿವಾಸಿಗಳ ಪರವೂ ಈ ವರ್ತಕರು ಯೋಚಿಸುವಂತಾಗಲಿ....

ಹೈಟೆಕ್ ಕೃಷ್ಣನ ತಲೆ!



ಈ ಯೋಜನೆ ಹೈಟೆಕ್ ಸಿಎಂ ಎಂದೇ ಹೆಸರಾಗಿದ್ದ ಆ ಹೆಸರಲ್ಲೇ ಬಸಿರಾಗಿದ್ದ ಎಸ್.ಎಂ.ಕೃಷ್ಣರ ಆಡಳಿತಾವಧಿಯಲ್ಲಿ ರೂಪುಗೊಂಡಿತ್ತು, ಯಾವುದೇ ತಜ್ಞರ ಸಲಹೆ ಕೇಳದೇ, ಜನಾಭಿಪ್ರಾಯ ಸಂಗ್ರಹ ಮಾಡದೇ ಬಿಬಿಎಂಪಿಯ ರಣಹಸಿವಿನ ಇಂಜಿನಿಯರ್‌ಗಳು, ಕಂಟ್ರ್ಯಾಕ್ಟರುಗಳು ತಾವೇ ಈ ನಿಷ್ಪ್ರಯೋಜಕ ಯೋಜನೆಯನ್ನು ತಯಾರಿಸಿದ್ದರು. ಈಗ ಮೂರ್ಖ ಯಡ್ಡಿಯ ಸರ್ಕಾರ ಇದನ್ನು ಜಾರಿಗೊಳಿಸಲು ಹೊರಟಿದೆ.

ಬೆಂಗಳೂರಲ್ಲೀಗ ಇಂತಹವೇ ಹತ್ತಾರು ಯೂಸ್‌ಲೆಸ್ ಕಾಮಗಾರಿಗಳು ನಡೆಯುತ್ತಿದ್ದು, ಇವೆಲ್ಲ ಪಾಲಿಕೆಯ ಅಧಿಕಾರಿಗಳೇ ರೂಪಿಸಿದ ಕಳ್ಳಾಟಗಳು. ಐದಾರು ವರ್ಷ ಜನಪ್ರತಿನಿಧಿಗಳೇ ಇರದಿದ್ದ ಬೆಂಗಳೂರು ಪಾಲಿಕೆಯನ್ನು ಈ ಭ್ರಷ್ಟ ಅಧಿಕಾರಿಗಳು ಕ್ಯಾಪ್ಚರ್ ಮಾಡಿಕೊಂಡುಬಿಟ್ಟಿದ್ದಾರೆ!

ಮೆಟ್ರೊ, ಮೊನೋ ಏತಕ್ಕೆ?

'ಸೆಪ್ಟೆಂಬರ್ ಹೊತ್ತಿಗೆ ಮೆಟ್ರೊ ರೈಲಿನ ಮೊದಲಭಾಗ ಆರಂಭ' ಎಂದು ಬೀಗುತ್ತಿರುವ ಯಡಿಯೂರಪ್ಪಗೆ ಈ ಮೆಟ್ರೊ, ಮೊನೋ ರೈಲುಗಳು ಸಂಚಾರ ದಟ್ಟಣೆ ಕಡಿಮೆ ಮಾಡಲೆಂದೇ ರೂಪುಗೊಂಡ ಯೋಜನೆಗಳು ಎಂಬುದು ಗೊತ್ತಿಲ್ಲವೇನೋ? ಮೆಟ್ರೋ ರೈಲು ಸಂಪೂರ್ಣವಾಗಿ ಜಾರಿಗೆ ಬಂದಮೇಲೆ ಸಂಚಾರ ದಟ್ಟಣೆಯ ಸಮಸ್ಯೆ ಕಡಿಮೆ ಆಗುವುದಾದರೆ ಈ ರಸ್ತೆ ಅಗಲೀಕರಣವೇಕೆ ಬೇಕಿತ್ತು? ನುಂಗಣ್ಣಗಳ ಖಜಾನೆ ತುಂಬಲಷ್ಟೇ ಈ ಅಗಲೀಕರಣ ಎಂಬ ದರೋಡೆ ನಡೆದಿದೆಯಷ್ಟೇ....



ಲಿಂಗಾಯತ ನೌಕರರ ಸಮ್ಮೇಳನ: ಜಾತಿಭೂತಗಳ ನರ್ತನ


ಜಾತಿ ಎಂಬ ಭೂತ ಮೈಹೊಕ್ಕರೆ, ತಮ್ಮದೇ ಶ್ರೇಷ್ಠ ಜಾತಿ ಎಂಬ ಭ್ರಮೆಗೆ ಬಿದ್ದರೆ ಸಂವಿಧಾನವನ್ನೂ ಕಡೆಗಣಿಸ ಬಲ್ಲ ಜನ ನಮ್ಮ ನಡುವೆ ಇದ್ದಾರೆ. ಇಂತಹ 'ಜಾತಿ ಅಹಂ'ನ ಕಾರಣದಿಂದಾಗಿಯೇ ಮೇಲ್ಜಾತಿಯ ಸರ್ಕಾರಿ ನೌಕರರು ತಮ್ಮ ತಮ್ಮ ಜಾತಿ ಹೆಸರಿನ ಕ್ಷೇಮಾಭಿವೃದ್ಧಿ ಸಂಘಗಳನ್ನು ಸ್ಥಾಪಿಸಿಕೊಂಡು, ಜಾತಿಬಲದಿಂದಲೇ ಅಧಿಕಾರಸ್ಥರನ್ನು ಓಲೈಸುತ್ತ ಅವರ ನೆರವು ಪಡೆಯುತ್ತಿದ್ದಾರೆ.

ಇದೇ 27 ರಂದು ಬೆಂಗಳೂರಿನ ಬಸವೇಶ್ವರ ನಗರದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ 'ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಸರ್ಕಾರಿ ನೌಕರರ 5ನೇ ರಾಜ್ಯ ಸಮ್ಮೇಳನ ಜರುಗುತ್ತಿದ್ದು, ಅದರಲ್ಲಿ ಮುಖ್ಯಮಂತ್ರಿಯಾದಿಯಾಗಿ ಹಲವಾರು ಲಿಂಗಾಯತ ಸಚಿವರು ಯಾವ ಅಳುಕು, ಲಜ್ಜೆ ಇಲ್ಲದೇ ಪಾಲ್ಗೊಳ್ಳುತ್ತಿದ್ದಾರೆ.

ಮಠ-ಮಂದಿರಗಳಿಗೆ ಸರ್ಕಾರದ ಹಣ ನೀಡುತ್ತ ಮೇಲ್ಜಾತಿಗಳ ಗುಲಾಮನಂತೆ ವರ್ತಿಸುತ್ತಿರುವ ನಿರ್ಲಜ್ಜ ಮುಖ್ಯಮಂತ್ರಿ ಯಡಿಯೂರಪ್ಪ ಈ ಸಮ್ಮೇಳನವನ್ನು ಉದ್ಘಾಟಿಸಲಿದ್ದು, ಸ್ಮರಣ ಸಂಚಿಕೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಜಗದೀಶ್ ಶೆಟ್ಟರ್ ಬಿಡುಗಡೆ ಮಾಡಲಿದ್ದಾರೆ. ಮಠ-ಮಂದಿರಗಳಿಗೆ ಸರ್ಕಾರದ ಹಣ ನೀಡುತ್ತ ಮೇಲ್ಜಾತಿಗಳ ಗುಲಾಮನಂತೆ ವರ್ತಿಸುತ್ತಿರುವ ನಿರ್ಲಜ್ಜ ಮುಖ್ಯಮಂತ್ರಿ ಯಡಿಯೂರಪ್ಪ ಈ ಸಮ್ಮೇಳನವನ್ನು ಉದ್ಘಾಟಿಸಲಿದ್ದು, ಸ್ಮರಣ ಸಂಚಿಕೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಜಗದೀಶ್ ಶೆಟ್ಟರ್ ಬಿಡುಗಡೆ ಮಾಡಲಿದ್ದಾರೆ. ಈ ಸಮ್ಮೇಳನದ ವೇದಿಕೆಯಲ್ಲಿ ಸಚಿವರಾದ ಸಿ.ಎಂ. ಉದಾಸಿ, ರೇಣುಕಾಚಾರ್ಯರೂ ಇರುತ್ತಾರೆ. ಹಾಗೆಯೇ ನೈಸ್‌ನ ಅಶೋಕ್ ಖೇಣಿ, ರಾಜ್ಯಸಭಾ ಸದಸ್ಯೆ ಬಿ. ಜಯಶ್ರೀ ಕೂಡಾ!

ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ವೇದಿಕೆಯ ಮೇಲಿರುವ ಮೇಲಿನ ಗಣ್ಯರೆಲ್ಲ ಲಿಂಗಾಯತರು! ಮಹಾಪೌರ ಎಂಬ ಕಾರಣಕ್ಕಾಗಿ ನಾಮಕಾವಸ್ತೆ ಮೇಯರ್ ನಟರಾಜ್‌ಗೂ ಆಹ್ವಾನವಿದೆ!!

ಈ ಸಂಘದ ಉದ್ದೇಶವೇನು?



'ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ಸರ್ಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘ' ಎನ್ನುವುದೊಂದು ಫ್ಯೂಡಲ್ ಮನಸ್ಸಿನ ಲಿಂಗಾಯತ ನೌಕರರ ಗುಂಪು ಅಷ್ಟೇ. ಈ ಸಂಘದಲ್ಲೇನೂ ಎಲ್ಲ ಲಿಂಗಾಯತ ನೌಕರರು ಸದಸ್ಯರಾಗಿಲ್ಲ, ಜಾತಿ ಹೆಸರಿನಲ್ಲಿ ಲಾಬಿ ಮಾಡುವ ಒಂದಷ್ಟು ನೌಕರರ ಗುಂಪು ಇದಷ್ಟೇ. ಆದರೆ 'ಲಿಂಗಾಯತ' ಎಂಬ 'ಕೊಂಬು' ಇರುವುದರಿಂದ ಅಧಿಕಾರಸ್ಥರೆಲ್ಲ ಇಂತಹ ಸಂಘಗಳ ಲಾಬಿಗೆ ಮಣಿಯುತ್ತಾರೆ. ಆ ಮೂಲಕ ಇಲ್ಲಿನ ದಮನಿತ ಜಾತಿಗಳ ನೌಕರರನ್ನು ಅವಮಾನಿಸುತ್ತಾರೆ.


ಸದ್ಯ ಒಂದು ವರ್ಷದಿಂದ ಈ ಸಂಘಕ್ಕೆ ಅಧ್ಯಕ್ಷನಾಗಿರುವಾತ ಬಸವಲಿಂಗಯ್ಯ ಎಂಬ ಪರಮ ಲಿಂಗವಂತ. 'ನಿಮ್ಮ ಸಂಘದ ಉದ್ದೇಶ ಏನಪ್ಪಾ?' ಅಂತ ಕೇಳಿದರೆ, ಈ ಮಹಾಶಯ ಬಸವಣ್ಣನವರ ಹೆಸರನ್ನೇ ಎಳೆದು ತಂದುಬಿಡುವುದೇ? "ಬಸವಣ್ಣನವರು ಬಯಸಿದ್ದ ಜಾತಿರಹಿತ ಸಮಾಜವೇ ನಮ್ಮ ಸಂಘದ ಗುರಿ. ಲಿಂಗಾಯತರಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಸಹಾಯ ಮಾಡೋದು ನಮ್ಮ ಕೆಲಸ. ವಿದ್ಯಾರ್ಥಿಗಳಿಗೆ ಬಹುಮಾನ, ವಿಧವೆಯರಿಗೆ ನೆರವು..." ಹೀಗೆ ಈ 'ಬಸವ' ಲಿಂಗಯ್ಯ ಸುಳ್ಳುಗಳನ್ನು ಹೇಳತೊಡಗುತ್ತಾನೆ. ಈತನ ಸಂಘದ ಹೆಸರಲ್ಲೇ ಜಾತಿ ಇದೆ; ಇಂತಹ ಫ್ಯೂಡಲ್ ಸಂಘಗಳ ಸಮ್ಮೇಳನಗಳಿಗೆ ಮುಖ್ಯಮಂತ್ರಿ, ಸಚಿವರು, ಲಿಂಗಾಯತ ಸ್ವಾಮೀಜಿಗಳು ಹಾಜರಾಗುವ ಮೂಲಕ ಜಾತಿಪದ್ಧತಿಯನ್ನು ಬೆಂಬಲಿಸುತ್ತಿರುವುದು ಅಸಹ್ಯಕರವೂ ಹೌದು, ಅಕ್ಷಮ್ಯವೂ ಹೌದು....

ಸಂವಿಧಾನ ಮತ್ತು ಕೆಸಿಎಸ್‌ಆರ್ (ಕರ್ನಾಟಕ ನಾಗರಿಕ ಸೇವಾ ಕಾಯ್ದೆ) ಪ್ರಕಾರ ಸರ್ಕಾರಿ ನೌಕರರು ಜಾತಿ ಸಂಘಟನೆಗಳನ್ನು ಕಟ್ಟಿಕೊಳ್ಳುವುದು ಕಾನೂನುಬಾಹಿರ. ಆದರೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಮೇಲೆ ಒಂದಿಷ್ಟು ಜಾತಿ ದುರಹಂಕಾರದ ಲಿಂಗಾಯತ ನೌಕರರು ಜಾತಿ ಸಂಘಟನೆಗಳನ್ನು ಕಟ್ಟಿಕೊಂಡು, ಸರ್ಕಾರಿ ನೌಕರರ ಮಧ್ಯೆ ಜಾತಿಗೋಡೆಗಳನ್ನು ಎಬ್ಬಿಸುತ್ತಿದ್ದಾರೆ. ಇದಕ್ಕೆ ಯಡ್ಡಿ ಸರ್ಕಾರ ಬೆಂಬಲವಾಗಿ ನಿಂತಿದೆ. ಇಂತಹ ಕಾನೂನುಬಾಹಿರ ಸಂಘಟನೆಗಳ ಕುರಿತು ರಾಜ್ಯಪಾಲರು ಗಮನಿಸುವಂತಾಗಲಿ.

• ಮಲ್ಲನಗೌಡರ್

'ಇದು ಸಂವಿಧಾನ ವಿರೋಧಿ'

-ಪ್ರೊ. ರವಿವರ್ಮಕುಮಾರ್



"ಜಾತಿ ಹೆಸರಲ್ಲಿ ಸಂಘಟನೆ ಕಟ್ಟೋದೇ ಸಂವಿಧಾನ ವಿರೋಧಿ. ಇದನ್ನು ಸರ್ಕಾರಿ ನೌಕರರು ಮಾಡೋದಂತೂ ಅಕ್ಷಮ್ಯ. ಯಾರಾದರೂ ಇದನ್ನು ಕೋರ್ಟಿನಲ್ಲಿ ಪ್ರಶ್ನಿಸಿದರೆ ಇಂತಹ ಪಿಡುಗಿಗೆ ಕಡಿವಾಣ ಹಾಕಬಹುದು....

"ಹಿಂದೆ ಹಲವಾರು ಸಲ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ನೌಕರರು ಕ್ಷೇಮಾಭಿವೃದ್ಧಿ ಸಂಘಗಳನ್ನು ಮಾಡಿಕೊಂಡಾಗ, ಮೇಲ್ಜಾತಿಯ ಜನ ಇದನ್ನು ವಿರೋಧಿಸಿ, ಅಂತಹ ಸಂಘಗಳಿಗೆ ತೊಂದರೆ ಕೊಟ್ಟಿದ್ದಾರೆ....

"ಈಗ ಮೇಲ್ಜಾತಿಯ ಸರ್ಕಾರಿ ನೌಕರರೇ ಇಂತಹ ಸಂಘಟನೆಗಳನ್ನು ರಾಜಾರೋಷವಾಗಿ ಮಾಡ್ತಿರೋದು ಅಸಹ್ಯಕರ. ಅಂತಹ ಸಂಘಗಳ ಸಮ್ಮೇಳನಗಳಲ್ಲಿ ಭಾಗವಹಿಸಿ, ಜಾತಿ ಸಂಘಟನೆಗಳಿಗೆ ಮುಖ್ಯಮಂತ್ರಿಯವರೇ ಪ್ರೋತ್ಸಾಹಿಸುವುದು ಸಂವಿಧಾನ ವಿರೋಧಿ ನಡೆಯೇ ಆಗಿದೆ...."


ಜಾಹೀರಾತಿನಲ್ಲಿ ಸತ್ಯ ಮುಚ್ಚಿಡಲಾದೀತೇ?

. ಇಲ್ಲದ ಸಾಧನೆಯನ್ನ ಸಾಬೀತುಪಡಿಸುವ ಉತ್ಸಾಹದಲ್ಲಿರುವ ಯಡಿಯೂರಪ್ಪ ಜಾಹೀರಾತಿನ ಮುಲಾಜಿನ ಮೂಲಕ ಮಾಧ್ಯಮಗಳ ಮೇಲೆ ಹಿಡಿತ ಸಾಧಿಸ ಹೊರಟಿದ್ದಾರೆ. ಸರ್ಕಾರದ ವೈಫಲ್ಯಗಳ ಬಗ್ಗೆ ಪತ್ರಿಕೆಗಳು ಬೆಳಕು ಚೆಲ್ಲಿದಾಗ ಸೂಕ್ಷ್ಮತೆಯಿರುವ ಮುಖ್ಯಮಂತ್ರಿಯಾದರೆ ಸಮಸ್ಯೆಗಳನ್ನು ಪರಿಹರಿಸುವತ್ತ ಗಮನ ಹರಿಸುತ್ತಾನೆ. ಆದರೆ ಯಡಿಯೂರಪ್ಪ ಜಾಹೀರಾತುಗಳ ಮೂಲಕ ಮಾಧ್ಯಮಗಳನ್ನೇ 'ಮುದ್ದು' ಮಾಡುವ ಅತಿ ಜಾಣತನದ ಹಾದಿ ತುಳಿಯುತ್ತಿದ್ದಾರೆ.

ಇದಕ್ಕೆ ಜೂ. 21ರಂದು ಗೃಹ ಕಚೇರಿ ಕೃಷ್ಣದಲ್ಲಿ ನಡೆದ ಸಾಧನಾ ಸಮಾವೇಶದ ಪೂರ್ವಭಾವಿ ಪತ್ರಿಕಾಗೋಷ್ಠಿಯೇ ಸ್ಪಷ್ಟ ಉದಾಹರಣೆ. ಬೆಳಗ್ಗೆ ಹತ್ತು ಗಂಟೆಯಿಂದ ಆರಂಭವಾದ ಈ 'ಕೆಲಸ' ಸಂಜೆ ಐದೂವರೆವರೆಗೂ ಅವಿರತವಾಗಿ ನೆರವೇರಿತು. ಈ ಸಂಬಂಧ ಪ್ರಮುಖ ಕನ್ನಡ ಹಾಗೂ ಇಂಗ್ಲಿಷ್ ದಿನಪತ್ರಿಕೆಗಳೂ ಸೇರಿದಂತೆ ವಿವಿಧ ಚಾನೆಲ್‌ಗಳಿಗೆ ಸಂದರ್ಶನ ವೇಳಾಪಟ್ಟಿಯೂ ನಿಗದಿಯಾಗಿತ್ತು. ಆ ವೇಳಾಪಟ್ಟಿಯ ಅಡಿಯಲ್ಲಿ ಜೂನ್ 24ರ ಒಳಗೆ ಸಂದರ್ಶನಗಳನ್ನು ಪ್ರಕಟಿಸಬಾರದೆಂಬ ಆದೇಶವೂ ಅಚ್ಚಾಗಿತ್ತು!

ಈ ಆದೇಶವನ್ನು ಪ್ರತೀ ಪತ್ರಿಕೆಗಳೂ ಶಿರಸಾವಹಿಸಿ ಪಾಲಿಸಿದ ಪರಿಣಾಮವೆಂಬಂತೆ ಜೂ. 24ರ ಸಂಚಿಕೆಗಳು ಸರ್ಕಾರಿ ಜಾಹೀರಾತಿನಿಂದ ಮೈಕೈ ತುಂಬಿಕೊಂಡು ಹೊರಬಂದವು. ಪ್ರಮುಖ ದಿನಪತ್ರಿಕೆಗಳಾದ ಪ್ರಜಾವಾಣಿಯಲ್ಲಿ ಮೂರುಪುಟ, ಕನ್ನಡಪ್ರಭದಲ್ಲಿ ಒಂದೂಮುಕ್ಕಾಲು, ವಾರ್ತಾಭಾರತಿಯಲ್ಲಿ ಒಂದು ಹಾಗೂ ವಿಜಯಕರ್ನಾಟಕದಲ್ಲಿ ಮೂರು ಮತ್ತು ಸಂಯುಕ್ತ ಕರ್ನಾಟಕದಲ್ಲಿ ಮೂರೂವರೆ ಪುಟಗಳಷ್ಟು ಕಲರ್ ಜಾಹೀರಾತುಗಳು ಸರ್ಕಾರದ 'ಸಾಧನೆ'ಯನ್ನು ಸಾರಿ ಹೇಳಿದವು!

ಒಂದೇ ಒಂದು ಸಂತಸದ ಸಂಗತಿಯೆಂದರೆ, ಮಾನ್ಯ ಮುಖ್ಯಮಂತ್ರಿಗಳು ಪತ್ರಿಕೆಗಳ ಮೂಲಕ ಹೇಗೇಗೆಲ್ಲಾ 'ಸಾಧನೆ' ಪ್ರದರ್ಶಿಸಬೇಕೆಂದು ಕನಸುಕಂಡಿದ್ದರೋ ಅವೆಲ್ಲವೂ ಉಲ್ಟಾ ಹೊಡೆದಿದ್ದವು! ನಿಷ್ಠಾವಂತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು ಸರ್ಕಾರದ ಮುಸುಡಿಗೆ ಮಂಗಳಾರತಿ ಮಾಡಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಎಸೆದರು. ತನ್ಮೂಲಕ ಈ ಸರ್ಕಾರದ ನಿಜವಾದ ಸಾಧನೆಗಳೇನೆಂಬುದು ಜನಸಾಮಾನ್ಯರಿಗೂ ಅರ್ಥವಾಯಿತು. ಪ್ರತೀ ಪತ್ರಿಕೆಗಳೂ ಈ ಸುದ್ದಿಗೆ ಪ್ರಾಮುಖ್ಯತೆ ಕೊಡುವ ಅನಿವಾರ್ಯತೆಗೆ ಸಿಕ್ಕಿ ಯಡ್ಡಿಯ ಸಾಹಸಗಾಥೆ ಹಾಗೂ ಜಾಹೀರಾತುಗಳು ಒಳಪುಟಗಳಲ್ಲಿ ತಲೆಮರೆಸಿಕೊಂಡವು!




ಇದೆಲ್ಲವನ್ನು ಗಮನಿಸಿದರೆ ಜಾಹೀರಾತುಗಳಲ್ಲಿ ಸತ್ಯ ಮುಚ್ಚಿಡ ಹೊರಟಿರುವ ಯಡ್ಡಿಯ ಹುನ್ನಾರಗಳು ಮನದಟ್ಟಾಗುತ್ತವೆ. ಆದರೆ ಇದಕ್ಕಾಗಿ ವ್ಯಯಿಸಿದ ಜನರ ಹಣದ ಮೊತ್ತ ಕಂಗೆಡಿಸುವಂತಿದೆ. ಕನ್ನಡ, ಇಂಗ್ಲಿಷ್ ದಿನಪತ್ರಿಕೆಗಳು ಹಾಗೂ ಚಾನೆಲ್‌ಗಳು ಅಂತೆಲ್ಲ ಜಾಹೀರಾತು ಕೊಡಲು ಕೋಟಿಗಳ ಲೆಕ್ಕದಲ್ಲಿ ಹಣ ಖರ್ಚಾಗಿದೆ. ಇದನ್ನೆಲ್ಲಾ ಯಡಿಯೂರಪ್ಪ ತನ್ನ ಸ್ವಂತ ತಿಜೋರಿಯಿಂದ ಕೊಟ್ಟಿದ್ದರೆ ಹಾಳಾಗಿ ಹೋಗಲಿ ಅನ್ನಬಹುದಿತ್ತು, ಆದರೆ ಈ ಜಾಹೀರಾತು ವೆಚ್ಚಕ್ಕೆ ಸರ್ಕಾರದ ಬೊಕ್ಕಸ ಅಂದರೆ ಜನರ ದುಡ್ಡನ್ನೇ ದೋಚಲಾಗಿದೆ.

ದುರಂತ ನೋಡಿ, ಸರ್ಕಾರದ ಕಡೆಯಿಂದ ಇಂಥ ಯಡವಟ್ಟುಗಳಾದಾಗ ಕಿವಿ ಹಿಂಡಬೇಕಿರುವುದು ಮಾಧ್ಯಮಗಳ ಜವಾಬ್ದಾರಿ. ಆದರೆ ಅವುಗಳೇ ಕಲರ್ ಕಲರ್ ಜಾಹೀರಾತುಗಳಿಗೆ ಅಡಿಯಾಳುಗಳಂತಾಗಿವೆ. ಆದರೆ ಇದೇ ಸರ್ಕಾರದ ಕಡೆಯಿಂದ ಮೂಗುದಾರದಂತೆ ಬಳಕೆಯಾದರೆ ಹೇಗೆ? ಮುಖ್ಯಮಂತ್ರಿ ಮತ್ತು ಮಾಧ್ಯಮಗಳೆರಡೂ ಹಾದಿಬಿಟ್ಟಂತೆ ಅನಿಸುತ್ತಿಲ್ಲವೇ?

ಸರ್ಕಾರ ನಿಜವಾಗಿಯೂ ಸಾಧನೆ ಮಾಡಿದ್ದರೆ ಪತ್ರಿಕೆಗಳು ಸ್ವಯಂ ಸ್ಫೂರ್ತಿಯಿಂದ ಅದರ ಬಗ್ಗೆ ಬರೆಯುತ್ತವೆ. ಜನ ಕೂಡಾ ಅದನ್ನ ಸ್ವೀಕರಿಸುತ್ತಾರೆ. ಆದರೆ ಹುಳುಕುಗಳ ಸಿಂಹಾಸನದಲ್ಲಿ ಕುಳಿತು ದರ್ಬಾರು ನಡೆಸುತ್ತಿರುವ ಯಡ್ಡಿಗೆ ಎಲ್ಲಿ ಹುಳುಕು ಹೊರಬೀಳುತ್ತದೋ ಎಂಬ ಆತಂಕವಿದ್ದಂತಿದೆ. ಆದುದರಿಂದಲೇ ಜಾಹೀರಾತಿನ ಮೂಲಕ ಸತ್ಯ ಮುಚ್ಚಿಡಲು ಹವಣಿಸುತ್ತಿದ್ದಾರೆ ಮತ್ತು ಅದಕ್ಕಾಗಿ ಜನರ ದುಡ್ಡನ್ನು ವ್ಯಯಿಸಿದ್ದಾರೆ. ಸಾಧನೆ ಸಾರುವುದಕ್ಕೋಸ್ಕರವೇ ಖರ್ಚು ಮಾಡಿದ ಈ ಕೋಟ್ಯಾಂತರ ರೂ.ಗಳನ್ನು ನೆರೆ ಸಂತ್ರಸ್ತರಿಗೆ ಕೊಟ್ಟಿದ್ದರೆ ಆ ಜನ ನೆಮ್ಮದಿಯಿಂದ ಬದುಕುತ್ತಿದ್ದಾರಲ್ಲಾ? ನೆರೆ ಪರಿಹಾರಕ್ಕೆ ಇಂದಿಗೂ ಮೀನಾ ಮೇಷಾ ಎಣಿಸುತ್ತಿರುವ ಯಡ್ಡಿಗೆ ಈ ಸೂಕ್ಷ್ಮತೆ ಯಾಕಿಲ್ಲ?

ಇದೆಲ್ಲದರಿಂದಾಗಿ ಒಂದು ವಿಚಾರ ಸ್ಪಷ್ಟವಾಗುತ್ತದೆ; ಯಡಿಯೂರಪ್ಪ ಜನರನ್ನ ಮೂರ್ಖರೆಂದುಕೊಂಡಿದ್ದಾರೆ. ಆದರೆ ಸತ್ಯವನ್ನು ಜಾಹೀರಾತು, ಒಣಸಂದರ್ಶನಗಳ ಮೂಲಕ ಮುಚ್ಚಿಡಲಾಗದೆಂಬುದು ಕಟುಸತ್ಯ!

• ಬಾಗಿಲಗದ್ದೆ



ಕೆಲ ದಿನಗಳ ಹಿಂದೆ ದಿನಪತ್ರಿಕೆಗಳಲ್ಲಿ ರಾರಾಜಿಸಿದ ಮೇಲ್ಕಂಡ ಫೋಟೋ ಈ ನಾಡಿನ ಪ್ರಜ್ಞಾವಂತರೊಳಗೆ ಹುದೊಂದು ಪ್ರಶ್ನೆಯನ್ನು ಹುಟ್ಟುಹಾಕಿದೆ. ಪಶ್ಚಿಮ ಬಂಗಾಳದಲ್ಲಿ ಪೊಲೀಸ್ ಎನ್‌ಕೌಂಟರ್‌ಗೆ ಬಲಿಯಾದ ವಾಸಿ ಮಹಿಳೆಯೊಬ್ಬಳ ಶವವನ್ನು ಅಡ್ಡಬಡಿಗೆಗೆ ಕೈಕಾಲು ಕಟ್ಟಿ ಹೊತ್ತೊಯ್ಯುತ್ತಿದ್ದ ದೃಶ್ಯ ಅದೆಂತಹುದೋ ಳುಕ್ಕೆ ಕಾರಣವಾಗಿತ್ತು.

ಈ ನೆಲದ ಆಡಳಿತಾರೂಢರ, ಪೊಲೀಸರ ದೃಷ್ಟಿಯಲ್ಲಾಕೆ ಮಾವೋಯಿಸ್ಟ್. ಆ ಕಾರಣದಿಂದಲೇ ಬೇಟೆಯಾಡಿದ ಯನ್ನ ಹೆಡೆಮುರಿಗೆ ಕಟ್ಟಿದಂತೆ ಹೊತ್ತೊಯ್ಯಲಾಯಿತು. ಒಳಾರ್ಥದಲ್ಲಿ ಭಾರತದ ಭ್ರಷ್ಟ ಪ್ರಭುತ್ವದ ಆಂತರಿಕ ತೆಗೆ ಧಕ್ಕೆಯುಂಟುಮಾಡುವವರನ್ನು ಪ್ರಭುತ್ವ ಹೇಗೆ ನಡೆಸಿಕೊಳ್ಳುತ್ತದೆಂಬುದನ್ನೂ ಅನಾವರಣಗೊಳಿಸಿದಂತಾಯ್ತು. ಂತವೆಂದರೆ, ಮಾನವೀಯತೆಗೆ ಕಣ್ಣು-ಕಿವಿ ತೆರೆದುಕೊಂಡಿರಬೇಕಾದ ಮಾಧ್ಯಮಗಳೂ ಅಧಿಕಾರಶಾಹಿಯ ೀಶವನ್ನು ಜನರಿಗೆ ತಲುಪಿಸಿ ಕೃತಾರ್ಥಗೊಂಡವು. ಮನುಷ್ಯತ್ವದ ಪಸೆಯೆಂಬುದಿದ್ದಿದ್ದರೆ 'ಎನ್‌ಕೌಂಟರ್‌ನಲ್ಲಿ ಾದ ಮಾವೋಯಿಸ್ಟ್ ಮಹಿಳೆಯನ್ನು ಪೊಲೀಸರು ಹೊತ್ತೊಯ್ಯುತ್ತಿರುವುದು' ಎಂಬರ್ಥದ ಸ್ಲೋಗನ್ನು ಕೆರೆದು ಡುತ್ತಿರಲಿಲ್ಲ!

ಈ ಸಾವಿಗೆ ಘನತೆಯಿಲ್ಲವೇ?

ಸತ್ತಾಕೆ ಆದಿವಾಸಿಯಾಗಿರಬಹುದು ಅಥವಾ ಮಾವೋಯಿಸ್ಟೇ ಆಗಿದ್ದಿರಲೂ ಬಹುದು. ಆದರೆ ಆಕೆಯೂ ಮನುಷ್ಯಳು, ಇದೇ ಪ್ರಜಾಪ್ರಭುತ್ವ ವ್ಯವಸ್ಥೆಯಡಿಯಲ್ಲಿ ಬದುಕಿದವಳೆಂಬ ಪ್ರಾಥಮಿಕ ಪ್ರಜ್ಞೆಯೂ ಮುಸುಕಾದರೆ ಹೇಗೆ? ಈ ಮನ ಕಲಕುವಂಥ ಭಾವಚಿತ್ರ ಕೇವಲ ಮನುಷ್ಯತ್ವದ ಸೆಲೆ ಬತ್ತಿರುವುದಕ್ಕೆ ಮಾತ್ರ ಉದಾಹರಣೆಯಲ್ಲ; ತದಲ್ಲಿ ಆದಿವಾಸಿಗಳನ್ನ ಹೇಗೆ ಟ್ರೀಟ್ ಮಾಡುತ್ತಿದ್ದೇವೆಂಬುದರ ಸಂಕೇತವೂ ಹೌದು.

ಕೆಲ ವರ್ಷಗಳ ಹಿಂದೆ ಬಾಂಗ್ಲಾ ಗಡಿ ವಿವಾದದ ಸಂಬಂಧ ಚಕಮಕಿ ನಡೆದ ಸಂದರ್ಭದಲ್ಲಿ ಭಾರತದ ದ್ದಿನಾಚೆ ನಮ್ಮ ಸೈನಿಕರನ್ನು ಹೊಡೆದು ಹಾಕಲಾಯಿತು. ಆ ಸಮಯದಲ್ಲಿ ಬಾಂಗ್ಲಾ ಸೈನಿಕರು ಭಾರತೀಯ ಧರ ಮೃತ ದೇಹಗಳನ್ನು ಹೀಗೆಯೇ ಕಟ್ಟಿ ತಂದಿದ್ದರು. ಆಗ ಇಡೀ ಭಾರತದಾದ್ಯಂತ ಮಾನವೀಯತೆಯ ಪ್ರಜ್ಞೆ ತಗೊಂಡು ವಿರೋಧ ವ್ಯಕ್ತವಾಯಿತು. ಇದು ಆಗಬೇಕಾದದ್ದೆ. ಆದರೆ ಆ ಪ್ರಜ್ಞೆ ಇದೇ ನೆಲದ ಮಹಿಳೆಯನ್ನು ದು ಹೆಡೆಮುರಿಗೆ ಹೊತ್ತು ತಂದ ಫೋಟೋ ನೋಡಿದಾಗ ಯಾಕೆ ಜಾಗೃತವಾಗಲಿಲ್ಲ?


ಯಾಕೆಂದರೆ, ಇಲ್ಲಿ ಗಿರಿಜನರನ್ನು ನಡೆಸಿಕೊಳ್ಳುವ ರೀತಿಯೇ ಹಾಗಿದೆ! ಕಾಡಿನ ನಡುವಲ್ಲಿ ಬದುಕು ಕಟ್ಟಿಕೊಂಡಿರುವ ಲ್ಲ ನಾಗರಿಕ(?) ಜಗತ್ತಿನ ಮನಸ್ಸಿನಾಳದಲ್ಲಿ 'ಕಾಡು ಮನುಷ್ಯ'ರೆಂಬ ಸ್ಥಾನವನ್ನೇ ಪಡೆದಿದ್ದಾರೆ. ಆ ಜನರ ತಲ್ಲಣಗಳು ಕ ಜಗತ್ತಿಗೆ ತಾಕುವುದಿಲ್ಲ, ಆದರೆ ಹೋರಾಟಗಳು ನಡೆದು ರಕ್ತ ಚಿಮ್ಮಿದರೆ ಭಯದ ಮುಖವಾಡ ಹೊದ್ದ ವಂತಿಕೆ ಚಿಗಿತುಕೊಳ್ಳುತ್ತದೆ. ಸರ್ಕಾರಗಳಾದರೂ ನೆತ್ತರು ಒರೆಸಿ, ಭರವಸೆಗಳ ಸುಗಂಧದ್ರವ್ಯ ಸಿಂಪಡಿಸಿ ಕಮಟು ಗಲಾಡಿಸುತ್ತವೆಯೇ ವಿನಃ ಸಮಸ್ಯೆಯ ಮೂಲ ಅರಿತು ಪರಿಹರಿಸುವ ಔಚಿತ್ಯ ತೋರುವುದಿಲ್ಲ. ದೂರದ ಮ ಬಂಗಾಲದಲ್ಲಿರಲಿ, ನಮ್ಮದೇ ನೆಲವಾದ ಮೆಣಸಿನಹಾಡ್ಯದಲ್ಲಿ ಪಾಪದ ಆದಿವಾಸಿಗಳನ್ನು ಕೊಂದು ಕೆಡವಿದರೂ ಳಗಿನ ಮನುಷ್ಯತ್ವ ಮರಗಟ್ಟಿ ಹೋಗುತ್ತದೆ. ಜೊತೆಗೇ ಬದುಕಿದವರು ಈ ರೀತಿ ಸತ್ತರೂ ಅಕ್ಕಪಕ್ಕದಲ್ಲೇ ರಾಟದ ದನಿ ಹುಟ್ಟುವುದಿಲ್ಲವೆಂದರೆ, ಆದಿವಾಸಿಗಳ ಸ್ಥಾನ ಅದೆಂಥದ್ದಿರಬಹುದೋ ಊಹಿಸಿ.

ಇಂಥಾ ಶುಷ್ಕ ಸ್ಥಿತಿಯಲ್ಲೂ ಒಂದು ಪ್ರಶ್ನೆ ಪದೇಪದೆ ಕಾಡುತ್ತದೆ; ಇಂಥಾ ಸಾವುಗಳಿಗೆ ಘನತೆಯಿಲ್ಲವೆ?

• ಬಾಗಿಲಗದ್ದೆ

ಗೋವಿಂದರಾಜು ಕೊಲೆಯತ್ನದ ಹಿಂದೆ

ಈ ಕೊಲೆಗೂ ಗೋವಿಂದರಾಜುಗೂ ಏನೇನೂ ಧವಿಲ್ಲದಾಗ್ಯೂ ಸುದ್ದಿ ಮಾತ್ರ ಗೋವಿಂದರಾಜುವೇ ಂಡನ ಹಂತಕರಿಗೆ ಸುಪಾರಿ ಕೊಟ್ಟರೆಂದು ಹಬ್ಬಿತು. ಜೊತೆಜೊತೆಗೇ ಹಬ್ಬಿದ ಮತ್ತೊಂದು ಸುದ್ದಿಯೆಂದರೆ ೋ ಬೋಂಡಾ ಎಂಬಾತನ ಪತ್ನಿಯ ಬಗ್ಗೆ. ಈಕೆಗೆ



ಂದರಾಜು ಜೊತೆ ಗೆಳೆತನವಿತ್ತಂತೆ. ಶುರುವಿನಲ್ಲಿ ಬಿಟ್ಟು ದುಡ್ಡು ಕೊಡುತ್ತಿದ್ದ ಗೋವಿಂದರಾಜು ಇತ್ತೀಚೆಗೆ ತ್ತ ಮುಖ ಕೂಡ ಹಾಕುತ್ತಿರಲಿಲ್ಲವಂತೆ. ರೊಚ್ಚಿಗೆದ್ದ ವಾಡಿಗೆ ಹಂತಕರನ್ನು ಬಿಟ್ಟು ಬುದ್ಧಿ ಕಲಿಸಲು ಿದಳೇ? ಏಕೆಂದರೆ ಕೊಲ್ಲಲು ಬಂದವರು ಪೂರ್ವಕವಾಗೇ ಪ್ರಾಣಹಾನಿಯಾಗದಂತೆ ಎಚ್ಚರಿಕೆ ದ್ದಾರೆ. ಬಿಸಿ ಮುಟ್ಟಿಸಬೇಕು ಆದರೆ ಸಾಯಕೂಡದು! ದು ಯಾರೋ ಚಿದ್ದಿಗೆ ಬಿದ್ದ ಹೆಂಗಸೇ

ಮಾಡಿರಬೇಕೆಂದು ಇಡೀ ಶ್ರೀರಾಂಪುರ ಪಿಸುಗುಡುತ್ತಿರುವುದಕ್ಕೂ ಕಾರಣವಿದೆ. ಹಾಗಿದ್ದರೆ ಗೋವಿಂದರಾಜು ಏಕೆ ಅದನ್ನು ಮುಚ್ಚಿಡುತ್ತಿದ್ದ? ತನಗೆ ಯಾರೂ ಶತ್ರುಗಳಿಲ್ಲ ಎಂದು ಗೋವಿಂದರಾಜುವೇ ಹೇಳುತ್ತಾನೆಂದರೆ ಸುಮ್ಮಸುಮ್ಮನೇ ಯಾರಾದರೂ ಏಕೆ ಕೊಲೆಗೆ ಯತ್ನಿಸುತ್ತಾರೆ? ಹೇಳಿಕೊಳ್ಳಲಾಗದ, ಎದುರಿಸಲಿಕ್ಕೂ ಆಗದ ಯಾವ ಪೇಚಾಟಕ್ಕೆ ಗೋವಿಂದರಾಜು ಸಿಲುಕಿದ್ದಾರೆ? ಅಥವಾ ಕೌನ್ಸಿಲರ್ ಮಲ್ಲೇಶ್‌ರನ್ನು ಸಿಲುಕಿಸಲು ಮಂತ್ರಿ ಟೌನ್‌ಶಿಪ್ ಖದೀಮರು ಇಂಥದೊಂದು ಟ್ರಿಕ್ ಬಳಸಿರಬಹುದಾ? ನೆಲಗಳ್ಳ ಪಾಂಡುರಂಗಶೆಟ್ಟಿಯ ಕೈವಾಡವಿದೆಯೇ? ಯಾರಾದರೂ ಸುನೀಲ ಶಿಷ್ಯರು ದುಸ್ಸಾಹಸಕ್ಕೆ ಕೈಯಿಟ್ಟರಾ?

ಸದ್ಯಕ್ಕಂತೂ ಗೋವಿಂದರಾಜು ಕೊಲೆಯತ್ನದ ಕೇಸು ಮಲ್ಲೇಶ್ವರಂ ಪೊಲೀಸರ ಪಾಲಿಗೆ ಬಿಡಿಸಲಾಗದ ಒಗಟಾಗಿಬಿಟ್ಟಿದೆ. ಒಂದೋ ಇದು ಅನೈತಿಕ ಸಂಬಂಧದ ಫಲವಾಗಿರಬೇಕೆಂಬುದೇ ಬಹುತೇಕರ ವಾದ. ಅಂಥ ಯಾವ ಪೇಚಾಟಕ್ಕೆ ಗೋವಿಂದರಾಜು ಸಿಲುಕಿದ್ದರು? ಸತ್ಯ ಅವರಿಗಲ್ಲದೇ ಇನ್ನಾರಿಗೆ ತಾನೇ ಗೊತ್ತಿರಲು ಸಾಧ್ಯ?

• ರಾ. ಸೋಮನಾಥ್

ra.somanath2010@gmail.com

ಎಸ್.ಎಲ್. ಭೈರಪ್ಪನತ್ರ ಜಾತಿ ತೊಲಗಿಸೊ ಮಿಷಿನದಂತೆ!

ಜನಪ್ರಿಯ ಕಾದಂಬರಿಕಾರರಾದ ಎಸ್.ಎಲ್. ಭೈರಪ್ಪನವರು ಮತ್ತೊಂದು ಕಾದಂಬರಿ ಹೆರಲು ಬಸಿರಾಗಿದ್ದಾರಂತಲ್ಲಾ, ವರಾಹ ತಳಿಯೊಂದು ಬದುಕಿನ ಕೊನೆಯವರೆಗೂ ತನ್ನ ಸಂತತಿಯನ್ನು ಹೆರುವಂತೆ, ಇನ್ನೂ ಹೊಟ್ಟೆಯಲ್ಲಿ ಕಾದಂಬರಿ ಹೂರಣ ತುಂಬಿಕೊಂಡಿರುವ ಭೈರಪ್ಪನ ಬಸಿರಿನ ಸುದ್ದಿ ಕೇಳಿದ ಕಚ್ಚೆಪುರಿ ಪತ್ರಿಕೆಯೊಂದು ಸಂಭ್ರಮದಿಂದ ಕುಣಿದಾಡುತ್ತ "ಕಾದಂಬರಿ ಹೆಸರೇನು? ಅದರ ಆಕಾರ ಮಂದ ಮತೀಯವಾಗಿರುತ್ತೊ ಇಲ್ಲ ಉಗ್ರ ಮತೀಯವಾಗಿರುತ್ತೊ? ಉಳಿದೆಲ್ಲಾ ಬಸಿರಿಗಿಂತ ಈ ಬಸಿರು ಏನನ್ನಿಸುತ್ತದೆ? ಆಗಲೇ ನೋವು ಆರಂಭವಾಗಿದೆಯೋ? ಸಲೀಸಾದ ಹೆರಿಗೆ ಸೂಚನೆಗಳಿವೆಯೊ? ನೀವೇನೂ ಹೆದರಬೇಡಿ, ಕೂಸು ಹುಟ್ಟಿದ ಕೂಡಲೇ ಅದರ ರೋಸನ್ನು ಮುಚ್ಚಿ ಮೆರೆಸಲು ಆರೆಸೆಸ್ ಹುಡುಗರು ಕಾಯುತ್ತ ಕುಳಿತಿದ್ದಾರೆ. ಅಷ್ಟೇ ಅಲ್ಲ, ಅದರ ಹುಟ್ಟನ್ನೇ ನಾಡಿನ ತುಂಬ ಮೆರೆಸಿಕೊಂಡು ಅಲೆಯುವ ವಟುಗಳದ್ದೇ ಒಂದು ಪಡೆಯಿದೆ. ಯಾವುದಕ್ಕೂ ಜಲ್ದಿ ಹೆರಿಗೆ ಮಾಡಿಕೊಳ್ಳಿ. ಬಸಿರಾದ ಅನುಭವದ ಒಂದು ತುಣುಕನ್ನು ಹೇಳಿದರೆ ಅದನ್ನು ಮೊದಲೇ ಪ್ರಕಟಿಸುತ್ತೇವೆ" ಎಂದು ಬೇಡಿಕೊಂಡವಂತಲ್ಲಾ, ಥೂತ್ತೇರಿ!

* * * *

ಇದರಿಂದ ತುಂಬು ಗರ್ಭಿಣಿಯ ತೂಕದಲ್ಲಿ ಮಾತನಾಡಿರುವ ಭೈರಪ್ಪ, "ನಾನು ಕಾದಂಬರಿ ಹೆರುವ ಸುದ್ದಿಯಿಂದ ಈ ನಾಡಿನ ತುಂಬ ಹರಡಿರುವ ಆರೆಸೆಸ್ಸಿನವರಿಗೆ ಎಷ್ಟು ಸಂತೋಷವಾಗಿದೆ ಎಂಬುದು ನನಗೆ ಗೊತ್ತು, ನನ್ನ 'ಆವರಣ'ವನ್ನು ಹೊತ್ತು ಮಾರಿದ್ದಾರೆ. ಸರಕಾರಿ ನೌಕರರೂ ಕೂಡ ತಮ್ಮ ಕರ್ತವ್ಯದ ಒಂದು ಭಾಗವೆಂದು ತಿಳಿದು 'ಆವರಣ'ವನ್ನು ಮಾರುತ್ತ, ಸಂಬಳ ಬಂದಕೂಡಲೇ ಮನಿಯಾರ್ಡರ್ ಕಮೀಷನ್ನನ್ನ ಕೈಯಿಂದಲೇ ಹಾಕಿ ನನಗೆ ಹಣ ಕಳಿಸಿದ್ದಾರೆ. ಅದಕ್ಕಾಗಿಯೇ 'ಆವರಣ' ಹಲವಾರು ಮುದ್ರಣ ಕಂಡಿದೆ. ಈ 'ಕವಲು ದಾರಿಯೂ' ಕೂಡ ಹತ್ತಾರು ಮುದ್ರಣ ಕಾಣುವುದರಲ್ಲಿ ಯಾವ ಸಂಶಯವೂ ಇಲ್ಲ" ಎಂದು ಮೆಲುಕಾಕಿದರಂತಲ್ಲಾ, ಥೂತ್ತೇರಿ!!

* * * *

'ಕವಲು ದಾರಿ' ಕಾದಂಬರಿ ಒಳಗಣ ಹೂರಣವೇನಿರಬಹುದು ಎಂದು ಕೇಳಲಾದ ಪ್ರಶ್ನೆಗೆ ಭೈರಪ್ಪನವರು ಸೂಚ್ಯವಾಗಿ ತಿಳಿಸಿದ ಸೂಚನೆಯನ್ನು ಅವರಿಗಾಗದ ಕಿಡಿಗೇಡಿಗಳು ಬೇರೆಯದೇ ಆದ ರೀತಿಯಲ್ಲಿ ವ್ಯಾಖ್ಯಾನಿಸುತ್ತಿದ್ದಾರಲ್ಲಾ, ತನ್ನೆಲ್ಲಾ ಭೈರಿಗೆ ಸಾಮಗ್ರಿಯನ್ನು ಹಿಂದೂ ಧರ್ಮದಿಂದಲೇ ಬಗೆದು ತೆಗೆದು ಹರಡುತ್ತಿರುವ ಭೈರಪ್ಪ ಹಿಂದೂ ಧರ್ಮದ ಕೌಟುಂಬಿಕ ಸಮಸ್ಯೆಯನ್ನು ಮತೀಯವಾಗಿಯೇ ಶೋಧಿಸಿ ಹೊರಗೆಡವಿದ್ದಾರಂತಲ್ಲಾ, ಒಂದು ವಿಕೃತ ಊಹೆಯ ಪ್ರಕಾರ ಹಿಂದೂ ಕುಟುಂಬದ ಹುಡುಗರ ಮೇಲೆ ಮುಸ್ಲಿಂ ಕ್ರಿಶ್ಚಿಯನ್ ಹುಡುಗರ ಪ್ರಭಾವ ಬದ್ದಿರುವುದರಿಂದ ಅವು ಬೆಳಗಿನ ಬೈಠಕ್‌ಗೆ ಹೋಗಲು ಹಿಂಜರಿಯುತ್ತಿವೆ, ಬದಲಿಗೆ ಬಿರಿಯಾನಿ ಕಂಡರೆ ಮರಿನಾಯಿಗಳು ಅಮೇಧ್ಯದೆಡೆಗೆ ಓಡುವಂತೆ ಬ್ಯಾರಿ ಹೋಟೆಲ್ ಕಡೆ ಓಡುತ್ತವೆ. ಮದ್ಯಪಾನ, ಧೂಮಪಾನವನ್ನು ಕೂಡ ಅನ್ಯಧರ್ಮೀಯರ ಸಹವಾಸದಿಂದಲೇ ಕಲಿತುಕೊಳ್ಳುತ್ತವೆ. ಆದ್ದರಿಂದ ನಮ್ಮ ಧರ್ಮದ ಬೇಲಿ ಸುಭದ್ರವಾಗಿರಬೇಕೆಂದು ಭೈರಪ್ಪ ಬರೆದಿರುತ್ತಾರೆಂದು ಆಡಿಕೊಳ್ಳುತ್ತಿವೆಯಲ್ಲಾ, ಥೂತ್ತೇರಿ.

ಥೂತ್ತೇರಿ

• ಯಾಹೂ

* * * *

ಭೈರಪ್ಪ ಮೊದಲಿನಂತಿಲ್ಲ, ಶಾನೆ ಬದಲಾಗಿದ್ದಾರೆ. ಜಾತೀಯತೆ ತೊಲಗಬೇಕೆನ್ನುತ್ತಾರೆ, ಅದಕ್ಕಾಗಿಯೇ ಧರ್ಮಶ್ರೀಯನ್ನು ಮತ್ತೆ ಬರೆಯುತ್ತಾರಂತೆ. ಎಲ್ಲಕ್ಕಿಂತ ಮುಖ್ಯವಾಗಿ ಜಾತಿಗಳು ಹೋಗಬೇಕಾದರೆ ಏನು ಮಾಡಬೇಕೆಂಬ ಭೀಕರ ಪ್ರಶ್ನೆಗೆ ಭೈರಣ್ಣ ಚಿಟಿಕೆ ಹೊಡೆದಂತೆ ಉತ್ತರಿಸಿದರಂತಲ್ಲಾ, ಅವರ ಪ್ರಕಾರ ಪ್ರತಿ ಊರಿಗೊಂದು ಫ್ಯಾಕ್ಟರಿ ಹಾಕಿಬಿಡುವುದು. ಅಲ್ಲಿ ಕೆಲಸ ಮಾಡಲು ಬಂದ ಹುಡುಗಹುಡುಗಿ ಜಾತಿಯನ್ನು ಪರಿಗಣಿಸದೆ ಪ್ರೇಮ ವಿವಾಹವಾಗಿಬಿಡುತ್ತಾರೆ. ಇದರಿಂದ ಜಾತಿಗಳು ಫ್ಯಾಕ್ಟರಿಗಳಂತೆಯೇ ಮುಳುಗಿ ಹೋಗುತ್ತವೆಂದು ಗಂಭೀರವಾಗಿ ಹೇಳಿದ್ದರಂತಲ್ಲಾ, "ಸರೀ ಸ್ವಾಮಿ, ಜಾತೀಯತೆ ಹೋದರೂ ಅಷ್ಟಮಠಗಳ ಅನಿಷ್ಟಾಚಾರಣೆಗಳು ಹಾಗೇ ಇರುತ್ತವಲ್ಲಾ. ಆಗೇನು ಮಾಡುವುದು?" ಎಂದಾಗ ಸದರಿ ಭೈರಪ್ಪ ಪೇಜಾವರನಂತೆ ಪಿಳಿಪಿಳಿ ಕಣ್ಣುಬಿಡುತ್ತ ಸುಮ್ಮನೆ ಕೂತರಂತಲ್ಲಾ, ಥೂತ್ತೇರಿ!!

* * * *

ಭೈರಪ್ಪ ಕಾದಂಬರಿ ಹೆರುವ ಸಂಭ್ರಮದಲ್ಲಿರುವಂತೆ, ಎಡೂರಪ್ಪ ಎರಡು ವರ್ಷದ ಸಂಭ್ರಮಾಚರಣೆಯಲ್ಲಿರುವುದರಿಂದ, ಅವರನ್ನು ಮಾತನಾಡಿಸಿ ಅವರ ಸಂತೋಷ ಹಂಚಿಕೊಳ್ಳಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಿದರೆ ಸಿಕ್ಕೇಬಿಟ್ಟರು!

"ಹಲೋ ಯಾರು?"

"ನಾನು ಸಾರ್ ಯಾಹು. ಚನ್ನಾಗಿದ್ದೀರ ಸಾರ್?"

"ಈ ನಾಡಿನ ಜನತೆ ಆಶೀರ್ವಾದದಿಂದ ಚೆನ್ನಾಗಿದ್ದೇನೆ."

"ಎರಡು ವರ್ಷದ ಸಾಧನೆ ಬಗ್ಗೆ ಕೇಳಬೇಕು ಅನ್ನಿಸಿದೆ ಸಾರ್."

"ಕೇಳಿ, ಅದಕ್ಕೇನಂತೆ ನೀವಿರೋದೆ ಕೇಳಕ್ಕಲ್ಲವೆ?"

"ನಿಮ್ಮ ಎರಡು ವರ್ಷದ ಸಾಧನೆ ಏನು ಸಾರ್?"

"ಅದನ್ನ ಎರಡು ಮಾತಲ್ಲಿ ಹೇಳಕ್ಕೆ ಬರಲ್ಲ, ದಿನಗಟ್ಟಲೆ ಕೂತುಕೊಂಡು ಹೇಳಬೇಕಾಗತ್ತೆ"

"ಹೋಗ್ಲಿ ಗುರುತರವಾದ ಒಂದೆರಡೇಳಿ."

"ನಾವು ಚುನಾವಣೆಗೂ ಮುನ್ನ ಕೊಟ್ಟ ಭರವಸೆಗಳನ್ನೆಲ್ಲಾ ಈಡೇರಿಸಿದ್ದೀವಿ."

"ಹಾಗಿದ್ದರೆ ಇನ್ನ ಮೂರು ವರ್ಷ ಆರಾಮವಾಗಿರಬಹುದಲ್ಲ ಸಾರ್?"

"ಇರಬವುದು. ಆದ್ರೆ ಇರಕ್ಕಾಗಲ್ಲ, ಇನ್ನು ಮಾಡಬೇಕಾದ ಕೆಲಸ ತುಂಬಾ ಇವೆ."

"ಅದರಲ್ಲೊಂದೇಳಿ?"

"ಅನ್ಯಾಯವಾಗಿ ಶೋಬನ್ನ ಸಂಪುಟದಿಂದ ಕೈಬಿಡೊ ಅಂತ ಪರಿಸ್ಥಿತಿ ನಿರ್ಮಾಣ ಮಾಡಿದ್ರು. ಹೇಗಾದ್ರು ಮಾಡಿ ಆಕೇನ ಮತ್ತೆ ಸಂಪುಟಕ್ಕೆ ಸೇರಿಸಿಕೊಂಡರೆ ನನ್ನ ಸಾಧನೆ ಪೂರ್ಣ ಆದಂತೆ!"

"ಥೂತ್ತೇರಿ!!!"




ರಂಜನೆ | ಬೋಧನೆ | ಪ್ರಚೋದನೆ
ಲಂಕೇಶ್

ಪಾರ್ವತೀಪುರದ ಮೀಟರ್ ಬಡ್ಡಿ ಮಾಫಿಯಾ

ಪಿಟ್ಟ ಇಟ್ಟ ಮುಹೂರ್ತ

ಕಲಾಸಿಪಾಳ್ಯದ ಹಳೇ ರೌಡಿ ವಾಲೆ ಸೀನನ ಕೊಲೆಯತ್ನದ ಮೂಲಕ ಪಾರ್ವತಿಪುರದ ಮೀಟರ್ ಬಡ್ಡಿ ಮಾಫಿಯಾದ ಎರಡನೇ ಇನ್ನಿಂಗ್ಸ್ ಆರಂಭವಾಗಿದೆ!

ಮೊದಲು ಚಟ್ನಿ ಸಲೀಮ್, ನಂತರ ಚಿದಂಬರ ಶೆಟ್ಟಿ, ತದನಂತರ ಮೇಟಿ;- ಹೀಗೆ ಬಿದ್ದ ವಿಕೆಟ್ಟುಗಳ ಪಟ್ಟಿಗೆ ಅದೆಷ್ಟೋ ವರ್ಷಗಳ ನಂತರ ವಾಲೇ ಸೀನನೆಂಬ ಹೆಸರೂ ಸೇರ್ಪಡೆಯಾಗುತ್ತಿತ್ತೋ ಏನೋ? ಪಿಟ್ಟನ ಬೇಟೆ ಮಿಸ್ಸಾಯಿತು. ವಾಲೇ ಸೀನನ ಆಯುಸ್ಸು ಗಟ್ಟಿಯಿತ್ತೋ ಅಥವಾ ಪಾರ್ವತಿಪುರದ ಯಾವ ಪಾತಕಿಯ ತಲೆ ಉರುಳುತ್ತೋ ಬಲ್ಲವರ್‍ಯಾರು?


ವಾಲೆ ಸೀನ


ಜೂನ್ 20 ರ ಮಧ್ಯಾಹ್ನ ಬನಶಂಕರಿಯ ಕೆ.ಆರ್. ರಸ್ತೆಯ 6 ನೇ ಕ್ರಾಸಿನ ತನ್ನ ಮನೆ ಮುಂದೆ ನಿಂತಿದ್ದ ವಾಲೇ ಸೀನನ ಮೇಲೆ ನಡೆದ ದಾಳಿ ಅದೆಷ್ಟು ಭಯಾನಕವಾಗಿತ್ತೆಂದರೆ; ರಸ್ತೆ ಗುಂಟ ಬಿದ್ದಿದ್ದ ರಕ್ತ ಕಂಡೇ ಜನ ಮನೆ ಬಾಗಿಲು ಮುಚ್ಚಿಕೊಂಡರು. ಬೀಸಿದ ಮಚ್ಚನ್ನೇ ಎಡಗೈಯಲ್ಲಿ ಹಿಡಕೊಂಡು, ಹೊಟ್ಟೆಗೆ ಚುಚ್ಚಿದ ಚಾಕನ್ನೇ ಕಿತ್ತುಕೊಂಡು ನಡುರಸ್ತೆಯಲ್ಲಿ ಹಂತಕರ ವಿರುದ್ಧ ಹೊಡೆದಾಡುತ್ತಿದ್ದ ವಾಲೆ ಸೀನ ಸದ್ಯ ದೀಪಕ್ ನರ್ಸಿಂಗ್ ಹೋಮಿನ ತೀವ್ರ ನಿಗಾದಲ್ಲಿ ಪ್ರಜ್ಞೆಯಿಲ್ಲದೇ ಮಲಗಿದ್ದಾನೆ.

ಅವತ್ತು ಕಲಾಸಿಪಾಳ್ಯದ ಭಯಾನಕ ರೌಡಿ ಚಟ್ನಿ ಸಲೀಮ್‌ನನ್ನು ಹಾಡುಹಗಲೇ ಕತ್ತರಿಸಿ ಹಾಕಿದ್ದ ವಾಲೇ ಸೀನನಿಗೆ ಇವತ್ತಲ್ಲ ನಾಳೆ ತನ್ನನ್ನೂ ಯಾರಾದರೂ ಹೀಗೆ ಕತ್ತರಿಸುತ್ತಾರೆಂಬುದು ಎಲ್ಲಿ ಗೊತ್ತಿತ್ತು?


90 ದಶಕದ ಪ್ರಾರಂಭದಲ್ಲಿ ಕಲಾಸಿಪಾಳ್ಯದ ಪಾರ್ವತಿಪುರವೆಂದರೆ ಹೆಚ್ಚೂ ಕಮ್ಮಿ ಅದು ಮೀಟರ್ ಬಡ್ಡಿ ದೊರೆಗಳ ಗೂಡಾಗಿ ಹೋಗಿತ್ತು. ಪಾರ್ವತಿಪುರದ ಮಾದೇಶ, ಆತನ ತಮ್ಮ ಎರ್ರಾ, ಆಟೋ ಮೋಹನ, ಆಟೋ ಮಂಜ, ಮೇಟಿ, ಎಮ್ಮೆಲ್ಲೇ, ಲಚ್ಚೆ ಮೋಹನ, ಸುರೇಶ; ಹೀಗೆ ತಲೆ ಎತ್ತಿದ ಬಡ್ಡಿ ಕಿರಾತಕರ ಪೈಕಿ ಕೊಂಚ ಯಡವಟ್ಟು ಅಂತಿದ್ದದ್ದು ವಾಲೇ ಸೀನನೆ!

ಬಡ್ಡಿ ವಸೂಲಿಗೆಂದು ಬಂದಿದ್ದ ಮಾದೇಶನನ್ನು ಹಿಡಿದು ಬಡಿದಿದ್ದ ಚಟ್ನಿ ಸಲೀಮ್ ಆ ಕಾಲಕ್ಕೆ ಕಲಾಸಿಪಾಳ್ಯದ ಮಟ್ಟಿಗೆ ದೊಡ್ಡ ರೌಡಿ. ಅವನನ್ನು ಪಾರ್ವತಿಪುರದ ಗ್ಯಾಂಗ್ ಅದೆಷ್ಟು ಕ್ರೂರವಾಗಿ ಮುಗಿಸಿತ್ತೆಂದರೆ ಒಂದೇ ಏಟಿಗೆ ವಾಲೆ ಸೀನ ಆತನ ತಲೆಯನ್ನೇ ಸೀಳಿ ಹಾಕಿದ್ದ. ಮಾದೇಶನ ಜೊತೆ ಸೀನನೂ ಜೈಲಿಗೆ ಹೋಗಿ ಬಂದ. ಚಟ್ನಿ ಸಲೀಮ್‌ನ ಕೊಲೆಯ ಖ್ಯಾತಿಯೊಂದೇ ಇಡೀ ಪಾರ್ವತಿಪುರದ ಮೀಟರ್ ಬಡ್ಡಿ ದಂಧೆಗೆ ರಕ್ಷಣೆಯಂತಿತ್ತು. ಬಡ್ಡಿಗೆ ಕೊಟ್ಟು ಕೊಟ್ಟೇ ಮಾದೇಶ ಕೋಟ್ಯಾಧಿಪತಿಯಾದ. ಆಟೋ ಮೋಹನ ಚಿತ್ರ ನಿರ್ಮಾಪಕ ಚಿದಂಬರ ಶೆಟ್ಟಿಯನ್ನೇ ಕೊಂದು ಇಡೀ ಪಾರ್ವತಿಪುರದ ಕುಖ್ಯಾತಿಯನ್ನು ಮತ್ತಷ್ಟು ಹೆಚ್ಚಿಸಿಬಿಟ್ಟ. ಸುರೇಶ, ಎರ್ರಾ, ಲಚ್ಚೆ ಮೋಹನ, ಆಟೋ ಮಂಜ ಇತ್ಯಾದಿಗಳೆಲ್ಲ ಗಾಂಧಿನಗರದ ಪ್ರತಿಷ್ಠಿತ ಸಿನಿಮಾ ಫೈನಾನ್ಸರುಗಳಾಗಿ ಮೆರೆದರು.

ಆದರೆ ಮಾದೇಶ ಮತ್ತು ವಾಲೆ ಸೀನ ಮಾತ್ರ ಹುಷಾರಾಗೇ ಇದ್ದರು. ಬೇರೆಲ್ಲ ಬಡ್ಡಿಕೋರರಂತೆ ಬಹಿರಂಗವಾಗಿ ಇದ್ದರು. ಓಡಾಡದೇ ಯಾರ್‍ಯಾರನ್ನೋ ಮುಂದೆ ಬಿಟ್ಟು ಬಡ್ಡಿ ದಂಧೆ ನಡೆಸುತ್ತಿದ್ದರು. ಇವತ್ತಲ್ಲಾ ನಾಳೆ ಚಟ್ನಿ ಸಲೀಮ್ ಹತ್ಯೆಯ ಪ್ರತೀಕಾರಕ್ಕೆ ತಾವು ಬಲಿಯಾಗುವುದು ಶತಸಿದ್ಧ ಎಂಬುದು ಇಬ್ಬರಿಗೂ ಮನದಟ್ಟಾಗಿತ್ತು. ಅದಕ್ಕೆಂದೇ ವಾಲೆ ಸೀನ ಮಾವಳ್ಳಿಯನ್ನು ಬಿಟ್ಟು ಬನಶಂಕರಿಗೆ ಬಂದ. ಹೊಸ ಮನೆಯೊಂದನ್ನು ಕಟ್ಟಿಸಿ ಅದರಲ್ಲೇ ಶ್ರೀಗುರು ಸೆರಾಮಿಕ್ಸ್ ಎಂಬ ಅಂಗಡಿಯೊಂದನ್ನು ತೆರೆದ. ಚಟ್ನಿ ಸಲೀಮ್‌ನ ಅಣ್ಣನ ಮಗನೊಬ್ಬ ವಾಲೆ ಸೀನನ ವಿರುದ್ಧ ಪ್ರತೀಕಾರಕ್ಕೆ ರೆಡಿಯಾಗುತ್ತಿದ್ದಾನೆಂಬುದು ಇಡೀ ಪಾರ್ವತಿಪುರಕ್ಕೇ ಗೊತ್ತಾಗಿತ್ತು.


ಆರ್.ವಿ. ದೇವರಾಜ್

ಚಟ್ನಿ ಸಲೀಮ್‌ನ ಹತ್ಯೆಗೆ ಆತನ ಸಂಬಂಧಿಗಳನೇಕರು ಪ್ರತಿಕಾರಕ್ಕೆ ನಿಂತರಾದರೂ ಮಾದೇಶ ಮತ್ತು ಸೀನ ಮಾತ್ರ ಯಾರ ಕೈಗೂ ಸಿಗಲೇ ಇಲ್ಲ. ಜೊತೆಗೆ ಮಾರ್ಕೆಟ್ ದೇವಿಯೇ ಪಾರ್ವತಿಪುರದ ಹಂತಕರ ಬೆನ್ನಿಗೆ ನಿಂತುಬಿಟ್ಟಿದ್ದ ಆದರೆ ಕೊಂದ ಪಾಪ ಬಿಡಬೇಕಲ್ಲ, 2007 ರ ಹೊತ್ತಿಗೆ ಅದು ಬೇರೆಯದೇ ರೂಪತಾಳಿ ನಿಂತಿತ್ತು, ಆತನ ಹೆಸರು ಪಿಟ್ಟ ಅಲಿಯಾಸ್ ನಾಗರಾಜ!


ಮಾದೇಶ

ಯಾವುದೋ ಬಡ್ಡಿ ವಸೂಲಿಗೆ ಸಂಬಂಧಪಟ್ಟಂತೆ ಮಾದೇಶ ಮತ್ತು ವಾಲೆ ಸೀನರ ಮಧ್ಯೆಯೇ ಬಿರುಕು ಬಂದಿತ್ತು, ಹಾಗಂತ ಮಾದೇಶ ಅದನ್ನು ಬಹಿರಂಗವಾಗಿ ತೋರ್ಪಡಿಸದೇ ಉಪಾಯವಾಗಿ ಪಿಟ್ಟ ಎಂಬಾತನನ್ನು ಛೂ ಬಿಟ್ಟ. ಪಿಟ್ಟನ ಹುಡುಗರಿಗೂ ವಾಲೆ ಸೀನನ ಕಡೆಯವರಿಗೂ ಮಾರಾಮಾರಿಯಾದ್ದು ಬಸವನಗುಡಿ ಪೊಲೀಸರು ಇಬ್ಬರ ಕಡೆಯ ಹುಡುಗರ ಮೇಲೂ ಡಕಾಯಿತ ಕೇಸು ಹಾಕಿ ಜೈಲಿಗಟ್ಟಿದ್ದರು.

ಪಿಟ್ಟ ಮತ್ತು ವಾಲೆ ಸೀನನ ಮಧ್ಯೆ ಹೊಸ ಜಿದ್ದೊಂದು ಭುಗಿಲೆದ್ದಿತ್ತು. ಪಿಟ್ಟನ ಮೇಲೆ ಸೆಂಟ್ರಲ್ ಪೊಲೀಸ್ ಠಾಣೆಯ ಪೊಲೀಸರು ರೌಡಿ ಶೀಟ್ ತೆರೆದರೆ ಸೀನನ ಮೇಲೆ ಕಲಾಸಿಪಾಳ್ಯದ ಪೊಲೀಸರು ರೌಡಿ ಶೀಟ್ ತೆಗೆದಾಗಿತ್ತು. ಜಿದ್ದಾಜಿದ್ದಿಗೆ ಸಿಲುಕಿದ ಗ್ಯಾಂಗ್‌ಗಳು ಯಾಪಾಟಿ ಹೊಡೆದಾಡಿಕೊಂಡವೆಂದರೆ ಪಿಟ್ಟನ ಶಿಷ್ಯ ಕುಮಾರ ಎಂಬಾತನನ್ನು ಹನುಮಂತ ನಗರದಲ್ಲಿ ಯಾರೋ ದುಷ್ಮನ್‌ಗಳು ಇರಿದು ಕೊಂದರೆ ಅದನ್ನು ವಾಲೆ ಸೀನನೇ ಮಾಡಿಸಿದ್ದಾನೆಂದು ಪಿಟ್ಟ ಭಾವಿಸಿದ.

ಅತ್ತ ವಾಲೆ ಸೀನ ಬಡ್ಡಿ ದಂಧೆ, ಸೆರಾಮಿಕ್ಸ್ ವ್ಯಾಪಾರ ಎಂದು ವ್ಯವಹಾರಕ್ಕೆ ನಿಂತ ಪಿಟ್ಟ ಪಾತಕ ಲೋಕದ ಪಳಗಲಾರಂಭಿಸಿದ್ದ. ರಾಮನಗರದ ಬಳಿ ನಡೆದ ನಿಗೂ ಕೊಲೆಯೊಂದರಲ್ಲಿ ಪಿಟ್ಟನದೇ ಪ್ರಮುಖ ಪಾತ್ರವಾಗಿ ಮಾದೇಶನ ಕುಮ್ಮಕ್ಕು ಬೇರೆ ಇತ್ತಲ್ಲ; ಅತ್ತ ಬಡ್ಡಿ ವಸೂ ಇತ್ತ ರೌಡಿಗಿರಿ ಎರಡರಲ್ಲೂ ಪಿಟ್ಟನ ಹೆಸರು ಮಿಂ ಲಾರಂಭಿಸಿತ್ತು. ಈ ಮಧ್ಯೆ ಪಿಟ್ಟನ ಶಿಷ್ಯ ಕುಮ್ಮಿ ಅಲಿಯಾ ಕುಮಾರನ ಕೊಲೆಯಾಯಿತಲ್ಲ; ಆಗ ವಾಲೆಸೀ ನೇರವಾಗಿಯೇ ಪಿಟ್ಟನಿಗೆ ಫೋನ್ ಮಾಡಿ 'ಈಗ ನಿ ಶಿಷ್ಯನನ್ನು ಮರ್ಡರ್ ಮಾಡಿಸಿದ್ದೀನಿ. ಇಷ್ಟಕ್ಕೇ ಗಾಂಚಾ ನಿಲ್ಲಿಸಲಿಲ್ಲ ಎಂದರೆ ಮುಂದೆ ನಿನ್ನನ್ನೇ ತೆಗೀತಿನಿ.... ಎಂ ಆವಾಜು ಹಾಕಿದ. ಸೀನ ಹಾಗೆ ವಾರ್ನ್ ಮಾಡುವುದಕ್ಕೆ ಕಾರಣವಿತ್ತು, ಪಿಟ್ಟ ಪದೇಪದೇ ಫೋನ್ ಮಾಡಿ ನಿನ್ನ ಮರ್ಡರ್ ಮಾಡದೇ ಬಿಡಬೇಕು ಅಂದ್ರೆ ರೋಲ್‌ಕಾ ಕೊಡು ಎಂದು ಬಾಲಿಶವಾಗಿ ಪೀಡಿಸುತ್ತಿದ್ದ. ತೀರ ತ ಮೇಲೇ ಕೈ ಮಾಡುವ ಮಟಕ್ಕೆ ಪಿಟ್ಟ ಬರಲಾರ ಎಂದ ಸೀನ ಲೆಕ್ಕ ಹಾಕಿದ್ದು ಜೂನ್ 20 ರಂದು ಸುಳ್ಳಾಗಿತ್ತು

ಮಧ್ಯಾಹ್ನ 3.30 ರ ಹೊತ್ತ ತನ್ನ ಊಟ ಮುಗಿಸಿ ಮನೆ ಹೊರ ನಿಂತು ಮೊಬೈಲ್ ಫೋನಿನ ಮಾತಾಡುತ್ತಾ ಇದ್ದಾಗಲೇ ಬೂದ ಬಣ್ಣದ ಸ್ಯಾಂಟ್ರೋ ಕಾರ್ ಬಂದ ಎದುರಿನಿಂದಲೇ ಹಾದು ಹೋಯ ಹಾಗೆ ಹೋದ ಕೆಲವೇ ಕ್ಷಣಕ ಅದೇ ಕಾರು ಮತ್ತೆ ವಾಪಸ ಬಂದಿದ್ದೇ ಸೀನನ ಎದುರೇ ಬಂದ ನಿಂತಿತ್ತು, ಏನಾಗುತ್ತಿದೆ ಎಂದು ಸೀ ತಲೆ ಕೆಡಿಸಿಕೊಳ್ಳುವ ಮೊದಲೇ ಪಿ ಲಾಂಗ್ ಹಿಡಿದು ಕಾರಿನಿಂದಿಳಿದ ಆತನ ಜೊತೆ ಇನ್ನೂ ಮೂವರಿದ್ದರು ಬಂದು ಬಂದದ್ದೇ ಸೀನನ ಕತ್ತರಿಸತೊಡಗಿದರು. ಬೀಸಿದ ಲಾಂಗಿಗೆ ಕೈ ಅಡ್ಡ ಹಿಡಿದರೆ ಸೀನ ಎಡಗೈಯೇ ಸಿಗಿದು ಹೋಯ್ತು. ಮತ್ತೊಬ್ಬ ಹಂತಕ ತ ಚಾಕು ತೆಗೆದದ್ದೇ ಸೀನನ ಹೊಟ್ಟೆಗೇ ಹಾಕಿ ಚುಚ್ಚಿಬಿಟ್ಟ

ಆದರೆ ಸೀನ ಹಳೇ ಫೈಟರ್. ತನ್ನ ಹೊಟ್ಟೆಗೆ ಹಾಕಿದ ಚಾಕುವನ್ನೇ ತೆಗೆದು ಅದನ್ನು ಹಿಡಿದುಕೊಂಡೇ ಹಂತ ಪಡೆಯ ಮೇಲೆ ಬಿದ್ದ. ರಕ್ತಸಿಕ್ತನಾಗಿದ್ದವನೊಬ್ಬ ನಡುರಸ್ತೆಯಲ್ ಹೆಣಗಾಡುತ್ತಿದ್ದದ್ದನ್ನು ಕಂಡ ಜನ ದಿಕ್ಕಾಪಾಲಾಗಿ ಓಡುತ್ತಿದ್ದ ವಾಲೆ ಸೀನ ಹೊರಬಂದಿದ್ದ ತನ್ನ ಹೊಟ್ಟೆಯ ಕರುಳನ್ನ ಎತ್ತಿಕೊಂಡು ಪಕ್ಕದ ದೀಪಕ್ ನರ್ಸಿಂಗ್ ಹೋಮಿ ಬಂದು ಬಿದ್ದಿದ್ದ. ಪಾಪಿ ಚಿರಾಯು. ಯಾರ ಪ್ರಾ ತೆಗೆಯುತ್ತಾನೋ ಅಥವಾ ಪಿಟ್ಟನೇ ನಿಕಾಲಿಯಾಗುತ್ತಾನೋ ಬಲ್ಲವರ್‍ಯಾರು?

ಪಾರ್ವತಿಪುರದ ಮೀಟರ್ ಬಡ್ಡಿ ಮಾಫಿಯಾದ ಇನ್ನೆಷ್ಟು ತಲೆ ಉರುಳುತ್ತೋ-ರಕ್ತ ಹರಿಯುತ್ತೋ ಗೊತ್ತಿಲ್ಲ, ಇಷ್ಟಕ್ಕೆ ಬಾಲ ಮುದುರುವ ಆಸಾಮಿಯಂತೂ ವಾಲೆ ಸೀನನಲ್ಲ

• ರಾ. ಸೋಮನಾಥ್
ra.somanath2010@gmail.com

ಸಂಪುಟ ಸರ್ಜರಿ ಬೀಳಲಿವೆ ವಿಕೆಟ್‌ಗಳು!

ಮುಖ್ಯಮಂತ್ರಿ ಯಡಿಯೂರಪ್ಪ ತನ್ನ ಎರಡು ವರ್ಷದ ಸಂಪುಟಕ್ಕೆ ಸದ್ಯದಲ್ಲೇ ಸರ್ಜರಿ ಮಾಡಲಿದ್ದೇನೆ ಎಂದು ಹೇಳಿದ್ದಾರೆ.

ಎರಡು ವರ್ಷ ಅಧಿಕಾರ ಪೂರೈಸಿದ ಹಿನ್ನೆಲೆಯಲ್ಲಿ ಹಮ್ಮಿಕೊಂಡಿರುವ 'ಸಾಧನೆ ಸಮಾವೇಶ'ದ ನಂತರ ಮುಖ್ಯಮಂತ್ರಿ ಮಾಡಲಿರುವ ಸಂಪುಟ ಪುನರ್‌ರಚನೆಯಲ್ಲಿ ಯಾರ ಕೈಬಿಡುತ್ತಾರೆ, ಯಾರನ್ನು ಸೇರಿಸಿಕೊಳ್ಳುತ್ತಾರೆ ಎಂಬ ಆತಂಕ, ಆಸೆ ಬಿಜೆಪಿಯ ವಲಯದಲ್ಲಿ ಮೂಡಿದೆ.



ಹಾಗೆ ನೋಡಿದರೆ ಅಧಿಕಾರದ ಗದ್ದುಗೆಯನ್ನೇರಿದ ನಂತರ ಪ್ರತಿಯೊಂದು ಚುನಾವಣೆ, ಉಪ ಚುನಾವಣೆಯನ್ನು ಗೆದ್ದುಕೊಂಡು ಬಂದಿರುವ ಯಡಿಯೂರಪ್ಪನವರಿಗೆ ಸಂಪುಟ ವಿಸ್ತರಣೆಗೆ ಇದು ಸಕಾಲ. ಏಕೆಂದರೆ ಪಕ್ಷದಲ್ಲಿ ಈಹಿಂದೆ ಯಡ್ಡಿ ವಿರುದ್ಧ ಬಂಡಾಯದ ಬಾವುಟ ಹಾರಿಸಿದ್ದ ಬಳ್ಳಾರಿಯ ರೆಡ್ಡಿ ಸಹೋದರರು ಈಗ ತೆಪ್ಪಗಾಗಿದ್ದಾರೆ. ಹಾಗೆಯೇ ಪ್ರತಿ ಚುನಾವಣೆಯಲ್ಲೂ ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸುತ್ತಾ ಬಂದಿರುವ ಯಡ್ಡಿ ಒಂದು ರೀತಿಯಲ್ಲಿ ಬಲಿಷ್ಠರಾಗಿದ್ದಾರೆ.

ಆದರೂ ಯಡ್ಡಿ ನಿಜವಾಗಲೂ ತಮ್ಮ ಸಂಪುಟವನ್ನು ಪುನರ್ ರಚಿಸುವ ಕೆಲಸಕ್ಕೆ ಈಗಲೇ ಕೈಹಾಕುತ್ತಾರೆಯೇ? ಈ ಪ್ರಶ್ನೆ ಯಾಕೆಂದರೆ ಯಾವುದೇ ಮುಖ್ಯಮಂತ್ರಿ ರಾಜಕೀಯ ಪರಿಸ್ಥಿತಿ ಶಾಂತವಾಗಿರುವಾಗ ಸಂಪುಟ ಪುನರ್ ರಚನೆಯಂತಹ ಕಸರತ್ತಿಗೆ ಸಾಮಾನ್ಯವಾಗಿ ಕೈ ಹಾಕುವುದಿಲ್ಲ. ಹೀಗಾಗಿ ಯಡ್ಡಿ ಕೂಡ ಅಂತಹ ಅಪಾಯಕಾರಿ ಕೆಲಸಕ್ಕೆ ಕೈ ಹಾಕದೇ ಇನ್ನಷ್ಟು ಕಾಲವನ್ನು ತಳ್ಳುವ ಸಾಧ್ಯತೆ ಇದ್ದೇಇದೆ.

ಜೊತೆಗೆ, ಬರುವ ಸೋಮವಾರದಿಂದ ವಿಧಾನಸಭೆಯ ಅಧಿವೇಶನ ಆರಂಭವಾಗುವುದರಿಂದ ಅಧಿವೇಶನ ಮುಗಿಯುವ ತನಕ ಸಂಪುಟ ಪುನರ್ ರಚಿಸುವ ಪ್ರಶ್ನೆ ಇಲ್ಲವೇ ಇಲ್ಲ. ಅಧಿವೇಶನ ಮುಗಿಯುವ ಹೊತ್ತಿಗೆ ಆಷಾಡಮಾಸ ಆರಂಭವಾಗುತ್ತದೆ. ಆಷಾಢಮಾಸವು ಶುಭಕಾರ್ಯಗಳಿಗೆ ಯೋಗ್ಯವಾದುದಲ್ಲ ಎಂದು ಮತ್ತೆ ಪುನರ್ ರಚನೆ ಕಸರತ್ತನ್ನು ಯಡ್ಡಿ ಮುಂದೂಡಬಹುದು. ಅಂದರೆ, ಆಗಸ್ಟ್ ತಿಂಗಳ ಎರಡನೇ ವಾರದ ತನಕ ಅಧಿವೇಶನ ಮತ್ತು ಆಷಾಢಮಾಸಗಳನ್ನು ನೆಪವಾಗಿಟ್ಟುಕೊಂಡು ಮಂತ್ರಿ ಸ್ಥಾನದ ಆಕಾಂಕ್ಷಿಗಳನ್ನು ಯಡ್ಡಿ ಸತಾಯಿಸಬಹುದು.

ಇವೆರಡೂ 'ಅಡ್ಡಿ'ಗಳು ಬಗೆಹರಿದನಂತರ ಗ್ರಾಮ ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳು ಎದುರಾಗುತ್ತವೆ. ಆಗಲೂ ಹಿಂದಿನಂತೆ ಚುನಾವಣೆ ನೆಪವನ್ನು ಮುಂದಿಟ್ಟು ಪುನರ್ ರಚನೆಯನ್ನು ಕೈಬಿಡುವ ಸಾಧ್ಯತೆ ಇದೆ. 'ನಿಮ್ಮ ಕ್ಷೇತ್ರಗಳಿಗೆ ಹೋಗಿ ಚೆನ್ನಾಗಿ ಕೆಲಸಮಾಡಿ ಜಿಲ್ಲಾ ಪಂಚಾಯತ್ ಚುನಾವಣೆಯಲ್ಲಿ ಪಕ್ಷವನ್ನು ಗೆಲ್ಲಿಸಿಕೊಡಿ. ಆನಂತರ ನಿಮಗೆ ಮಂತ್ರಿ ಸ್ಥಾನ ನೀಡುತ್ತೇನೆ' ಎಂದು ಆ ಸಂದರ್ಭದಲ್ಲಿ ಯಡ್ಡಿ ಹೇಳುವ ಬಗ್ಗೆಯೂ ಈಗ ಪಕ್ಷದಲ್ಲಿ ಚರ್ಚೆ ನಡೆಯುತ್ತಿದೆ.

ಇದೆಲ್ಲದರ ಅರ್ಥ ಯಡ್ಡಿಗೆ ಸಂಪುಟ ಪುನರ್ ರಚನೆ ವಿಷಯದಲ್ಲಿ ಯಾವುದೇ ಆಸಕ್ತಿ ಇಲ್ಲ ಎಂದಲ್ಲ. ಬದಲಾಗಿ ಏನಾದರೂ ಮಾಡಿ ತನ್ನ ಅತ್ಯಂತ ಆಪ್ತ ಮತ್ತು ನಂಬುಗೆಯ ಹಿಂಬಾಲಕರಾದ ವಿ. ಸೋಮಣ್ಣ ಮತ್ತು ಶೋಭಾ ಕರಂದ್ಲಾಜೆಯನ್ನು ಮಂತ್ರಿಗಳನ್ನಾಗಿ ಮಾಡಬೇಕೆಂಬುದಷ್ಟೇ ಸದ್ಯಕ್ಕೆ ಅವರಿಗಿರುವ ಏಕೈಕ ಆಸಕ್ತಿ. ಇದರ ಹೊರತಾಗಿ ಯಾವುದೇ ಮಂತ್ರಿಯನ್ನು ಸಂಪುಟದಿಂದ ಕಿತ್ತು ಹಾಕಿ ಅವರ ಸ್ಥಾನದಲ್ಲಿ ಇನ್ನೊಬ್ಬರನ್ನು ಸೇರಿಸುವ ಯೋಜನೆ ಯಡ್ಡಿಗಿಲ್ಲ, ಯಾಕೆಂದರೆ ಈಗ ಎರಡು ವರ್ಷಗಳ ನಂತರ ಕೊನೆಗೂ ಪಕ್ಷದಲ್ಲಿ ಎಲ್ಲವೂ ಪ್ರಶಾಂತವಾಗಿದೆ. ಇಂತಹ ಸಂದರ್ಭದಲ್ಲಿ ಸಂಪುಟ ಪುನರ್ ರಚನೆ ಮಾಡಲು ಮುಂದಾದರೆ ಮತ್ತೆ ಭಿನ್ನಮತೀಯ ಚಟುವಟಿಕೆಗಳು ಹುಟ್ಟಿಕೊಳ್ಳುತ್ತವೆ ಎಂಬ ಅರಿವು ಅವರಿಗಿದೆ.



ಹಾಗೊಂದು ವೇಳೆ ಪುನರ್‌ರಚನೆ ಮಾಡಲೇಬೇಕಾದಲ್ಲಿ ಮೊದಲೆ ತಿಳಿಸಿದಂತೆ ಖಾಲಿ ಇರುವ ಎರಡು ಸ್ಥಾನಗಳಿಗೆ ಶೋಭಾ ಮತ್ತು ಸೋಮಣ್ಣ ಅವರನ್ನು ಮಾತ್ರ ಯಡ್ಡಿ ಸೇರಿಸಿಕೊಳ್ಳಬಹುದು. ಈಗ ಇವರಿಬ್ಬರನ್ನು ಸೇರಿಸಿಕೊಳ್ಳುವ ಬಗ್ಗೆ ಬಳ್ಳಾರಿ ರೆಡ್ಡಿ ಸಹೋದರರು ಯಾವುದೇ ವಿರೋಧವನ್ನು ವ್ಯಕ್ತಪಡಿಸಲಾರರು.

ಹಾಗೆಯೇ, ಈಗಾಗಲೇ ಎರಡು ವರ್ಷಗಳ ಕಾಲ ಅಧಿಕಾರದ ರುಚಿಯನ್ನು ಅನುಭವಿಸಿರುವ ಪಕ್ಷೇತರ ಸಚಿವರಿಗೆ ಗೇಟ್‌ಪಾಸ್ ಕೊಟ್ಟು ಅವರ ಜಾಗಕ್ಕೆ ಪಕ್ಷದ ಹಿರಿಯ ಶಾಸಕರನ್ನು ತರಬೇಕೆನ್ನುವ ಚಿಂತನೆ ಬಿಜೆಪಿಯಲ್ಲಿ ನಡೆಯುತ್ತಿದೆ ಹಾಗಾದರೆ ಪಕ್ಷೇತರರಾಗಿ ಆಯ್ಕೆಯಾಗಿ ಮಂತ್ರಿಗಳಾಗಿರುವ ವೆಂಕಟರಮಣ, ಸುಧಾಕರ, ಶೇಖರ್ ಗೂಳಿಹಟ್ಟಿ, ಶಿವಣ್ಣಗೌಡ ನಾಯಕ್ ಮತ್ತು ನರೇಂದ್ರಸ್ವಾಮಿ ಹೆಸರುಗಳು ಹಿಟ್ ಲಿಸ್ಟ್‌ನಲ್ಲಿವೆ ಎಂದು ಕೇಳಿಬರುತ್ತಿದೆ. ಅವರುಗಳ ಬದಲಾಗಿ ಬೆಳ್ಳುಬ್ಬಿ ಆನೇಕಲ್ ನಾರಾಯಣಸ್ವಾಮಿ, ಸೊಗಡು ಶಿವಣ್ಣ ಮೊದಲಾದವರ ಅದೃಷ್ಟದ ಬಾಗಿಲು ತೆರೆಯಬಹುದು.

ವಿಧಾನ ಪರಿಷತ್ ಸ್ಪೀಕರ್ ಸ್ಥಾನ ಕೂಡ ಇದೇ ಮೊದಲ ಬಾರಿಗೆ ಬಿಜೆಪಿಯ ಕೈವಶವಾಗುವ ಘಳಿಗೆ ಕೂಡಿಬಂದಿದೆ. ವಿಧಾನ ಪರಿಷತ್ತಿನಲ್ಲೇ ತಮ್ಮ ರಾಜಕೀಯ ಜೀವನದ ಹೆಚ್ಚು ಕಾಲವನ್ನು ಕಳೆದಿರುವ ಹಿರಿಯ ಬಿಜೆಪಿ ಸದಸ್ಯರಾದ ಡಿ.ಎಚ್.ಶಂಕರಮೂರ್ತಿ, ಡಾ. ವಿ.ಎಸ್. ಆಚಾರ್ಯ ಮತ್ತು ರಾಮಚಂದ್ರಗೌಡರ ಹೆಸರುಗಳು ಸ್ಪೀಕರ್ ಸ್ಥಾನಕ್ಕೆ ಕೇಳಿಬರುತ್ತಿವೆ. ಆದರೆ ಈ ಮೂರು ಹಿರಿಯ ಜೀವಗಳಿಗೆ ಸ್ಪೀಕರ್ ಕುರ್ಚಿಯಲ್ಲಿ ಕುಳಿತುಕೊಳ್ಳುವ ಆಸೆಯೇ ಇಲ್ಲ; ಅಕಸ್ಮಾತ್ ಬಿಜೆಪಿ ಮತ್ತು ಅದರ ಪಿತೃ ಸಂಘಟನೆ ಆರೆಸ್ಸೆಸ್‌ನ ಮುಖಂಡರು ಒಂದು ನಿರ್ಣಯ ಕೈಗೊಂಡು ಈ ಹಿರಿಯ ಸದಸ್ಯರೇ ಸ್ಪೀಕರ್ ಸ್ಥಾನ ಅಲಂಕರಿಸಬೇಕು ಎಂದು ವಿಪ್ ನೀಡಿದರೆ ಮತ್ತೊಂದು ಮಂತ್ರಿ ಸ್ಥಾನ ಖಾಲಿಯಾಗಬಹುದು. ಈಗಾಗಲೇ ಯಡ್ಡಿ ಸಂಪುಟದಲ್ಲಿ ಮಂತ್ರಿಯಾಗಿ ಕಳಪೆ ಸಾಧನೆ ಮಾಡಿರುವ ರಾಮಚಂದ್ರಗೌಡರ ಹೆಸರೇ ಈಗ ಸ್ಪೀಕರ್ ಸ್ಥಾನಕ್ಕೆ ಹೆಚ್ಚಾಗಿ ಕೇಳಿಬರುತ್ತಿರುವುದರಿಂದ ಅವರು ತಮ್ಮ ಮಂತ್ರಿ ಪದವಿ ತೊರೆಯಬೇಕಾಗಬಹುದು.


• ಕೆ. ಸದಾಶಿವ ಶೆಣೈ

ಭೂಗಳ್ಳ ಡಿ.ಸಿ. ರಾಮಾಂಜನೇಯ

ತಹಶೀಲ್ದಾರ್ ವರ್ಗಾವಣೆಯಲ್ಲಿ ಭೂಮಾಫಿಯಾ!

ಬಿಂಡವಾಳ ಹೂಡಿಕೆ ಪ್ರಹಸನದ ಸಂಭಾವ್ಯ ಅನಾಹುತಗಳು ಗರಿಗೆದರಲಾರಂಭಿಸಿವೆ. ಕೈಗಾರಿಕೆಗಳಿಗೆ ಭೂಸ್ವಾಧೀನದ ಹೆಸರಲ್ಲಿ ನಡೆಯುತ್ತಿರುವ ಭರ್ಜರಿ ಭೂಮಾಫಿಯಾವೊಂದು ದೇವನಹಳ್ಳಿ ತಾಲ್ಲೂಕನ್ನೇ ಆಪೋಶನ ತೆಗೆದುಕೊಳ್ಳಲು ಹವಣಿಸುತ್ತಿದೆ. ಇದಕ್ಕೆ ಪೂರಕವಾಗಿ ತಹಶೀಲ್ದಾರ್‌ಗಳ ವರ್ಗಾವಣೆ ನಾಟಕ ಎಗ್ಗಿಲ್ಲದೆ ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಕೆಲ ಆಯಕಟ್ಟಿನ ಅಧಿಕಾರಿಗಳು, ಶಾಸಕರು-ಸಚಿವರು ಮುಂಗಾರಿಗೆ ಮುನ್ನವೇ ಸುಗ್ಗಿಯ ಸಂಭ್ರಮದಲ್ಲಿದ್ದರೆ, ದೇಶಭಕ್ತರ ಮುಖವಾಡದ ಆರೆಸ್ಸೆಸ್ ಪಡೆಯೂ ಲಾಠಿ ಯಾಡಿಸಿ ಸಂತಸ ಪಡುತ್ತಿದೆ.

ದೇವನಹಳ್ಳಿ ತಾಲ್ಲೂಕಿನ ಜಾಲಾ ಹೋಬಳಿ, ಅರೆಬಿನ್ನ ಮಂಗಲ, ಬಂಡಿಕೊಡಿಗೇನಹಳ್ಳಿ, ಬಿ.ಕೆ. ಪಾಳ್ಯ ಮತ್ತು ಬಾಗಲೂರುಗಳಲ್ಲಿ KIADB ಕೈಗಾರಿಕೆ ಹೆಸರಲ್ಲಿ ಭೂಸ್ವಾಧೀನಕ್ಕೆ ಮುಂದಾಗಿದೆ. ನೀತಿ- ನಿಜಾಯಿತಿಗಳಿಗೆ ಅನುಗುಣವಾಗಿ ಇರಬೇಕಿರುವ ಈ ಭೂಸ್ವಾಧೀನ ಪ್ರಕ್ರಿಯೆ ಪಕ್ಕಾ ಹಣಬಾಕತನಕ್ಕೆ ಬಲಿಯಾಗಿ ಹೋಗಿದೆ. ಸರ್ಕಾರಿ ಜಾಗಗಳನ್ನು ಯಾರ್‍ಯಾರದ್ದೋ ಹೆಸರಿಗೆ ಮಾಡಿಸಿ ಕಾಸು ಗೆಬರುವ ಕಾರ್ಯ ಎಗ್ಗಿಲ್ಲದೆ ನಡೆದು, ಕೋಟಿಗಳ ಲೆಕ್ಕದ ಸರ್ಕಾರಿ ಹಣ ಭ್ರಷ್ಟರ ಜೋಳಿಗೆಯ ಪಾಲಾಗುತ್ತಿದೆ. ಇಷ್ಟೆಲ್ಲ ಅಪರಾತಪರಾಗಳ ಸೂತ್ರವನ್ನು ಖುದ್ದು ಬೆಂಗಳೂರು ನಗರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿ ರಾಮಾಂಜನಪ್ಪನೆಂಬಾತ ಹಿಡಿದು ಮೆರೆದಾಡ ಹತ್ತಿದ್ದಾನೆ.


ಮೈ.ಚ.ಜಯದೇವ್

ಪ್ರಸ್ತುತ ಕೆಐಎಡಿಬಿ ಸ್ವಾಧೀನಪಡಿಸ ಹೊರಟಿರುವ ಜಮೀನುಗಳಲ್ಲಿ ಹೆಚ್ಚಿನ ಪ್ರದೇಶ ಸರ್ಕಾರೀ ಜಾಗ. ಸರಿಯಾಗಿ ಕೆಲಸ ನಡೆದದ್ದೇ ಆದರೆ ಪರಿಹಾರ ಅಂತೆಲ್ಲ ಖರ್ಚು ತಪ್ಪುವುದಲ್ಲದೆ, ಬಡ ಹಿಡುವಳಿದಾರರು ಭೂಮಿ ಕಳಕೊಳ್ಳುವುದೂ ತಪ್ಪುತ್ತದೆ. ಆದರೆ ಇದೇ ವಿಚಾರ ರಾಮಾಂಜನೇಯನ ನಿದ್ದೆಗೆಡಿಸಿದೆ. ಆದುದರಿಂದಲೇ ಗೋಮಾಳ ಪ್ರದೇಶವನ್ನು ಯಾರ್‍ಯಾರದ್ದೋ ಹೆಸರಿಗೆ ಹರಿದು ಹಂಚಿ, ದಾಖಲೆಗಳಿಲ್ಲದ ಜಮೀನುಗಳ ಮಾಲೀಕರಿಂದ ಹಣ ಎತ್ತಿ ಬೋಗಸ್ ದಾಖಲೆ ಸೃಷ್ಟಿಸುವ ಅಡ್ನಾಡಿ ಕೆಲಸಕ್ಕೆ ಕೈಹಾಕಿದ್ದಾನೆ.

ಈತನ ಭ್ರಷ್ಟಾಚಾರದ ವಿರಾಟ್ ರೂಪವನ್ನು ವಿವರಿಸುವ ಮೊದಲು ಈತನ ಪೂರ್ವಾಪರಗಳನ್ನೊಮ್ಮೆ ತಡಕುವುದೊಳಿತು. ಈ ಹಿಂದೆ ಅಂದರೆ, ಎಸ್ಸೆಂ ಕೃಷ್ಣರ ಅವಧಿಯಲ್ಲಿ ಬಿಡಿಎಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಯಾಗಿದ್ದವನು ರಾಮಾಂಜನೇಯ. ಆ ಅವಧಿಯಲ್ಲಿ ನೂರು ಬಿಡಿಎ ಪ್ರದೇಶಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಜವಾಬ್ದಾರಿ ಈತನ ಮೇಲಿತ್ತು, ಅದರಲ್ಲೇ ಈತ ಸಾಕಷ್ಟು ನುಂಗಿ ನೊಣೆದಿದ್ದ.

ನಂತರ ಯಡಿಯೂರಪ್ಪ 'ಕ್ಷಿಪ್ರ ಕ್ರಾಂತಿ' ನಡೆಸಿ ಅಧಿಕಾರ ಹಿಡಿಯಲು ಮುಂದಾದರಲ್ಲಾ? ಆ ಸಂದರ್ಭದಲ್ಲಿ ಕ್ರೀಡಾ ಸಚಿವ ಗೂಳಿಹಟ್ಟಿ ಶೇಖರ್ ಕೂಡಾ ಆಮಿಷಕ್ಕೆ ಬಲಿಯಾಗಿದ್ದ. ಈ ಗೂಳಿಹಟ್ಟಿಗೆ ರಾಮಾಂಜನೇಯ ಪಕ್ಕಾ ಶಿಷ್ಯ! ಇಂಥ ಅನೇಕ ಶಿಷ್ಯಂದಿರಿಗೆ ಠಾವು ಹುಡುಕುವ ಉದ್ದೇಶದಿಂದಲೇ ಗೂಳಿ ಇಪ್ಪತ್ತೈದು ಕೋಟಿ ಭಕ್ಷೀಸಿನ ಜೊತೆಗೆ ತನಗೆ ಬೇಕಾದ ಅಧಿಕಾರಿಗಳನ್ನು ತಾನು ಹೇಳಿದ ಕಡೆ ವರ್ಗಾವಣೆ ಮಾಡಬೇಕೆಂಬ ಬೇಡಿಕೆಯಿಟ್ಟಿದ್ದ. ಈ ಕೋಟಾದಡಿಯಲ್ಲೇ ಪರಮ ಭ್ರಷ್ಟ ರಾಮಾಂಜನೇಯ ಬಿಡಿಎಯಿಂದ ಬೆಂಗಳೂರು ನಗರ ಜಿಲ್ಲೆಯ ವಿಶೇಷ ಜಿಲ್ಲಾಧಿಕಾರಿಯಾಗಿ ಬಡ್ತಿ ಪಡೆದ.


ತದನಂತರ ಈತ ನಡೆಸಿರುವುದು, ನಡೆಸುತ್ತಿರುವುದೆಲ್ಲಾ ಪಕ್ಕಾ ಅಡ್ನಾಡಿ ಕೆಲಸಗಳನ್ನೇ. ಇಂಥವನಿಗೆ ಕೆಐಎಡಿಬಿ ವತಿಯಿಂದ ನಡೆಯುತ್ತಿರುವ ಭೂಸ್ವಾಧೀನ ಕಾರ್ಯ ಕಾಮಧೇನುವಾಗಿ ಬದಲಾಗಿದೆ. ಈ ಪ್ರಕ್ರಿಯೆಯಲ್ಲಿ ಕೆಐಎಡಿಬಿ ತಾನು ಸ್ವಾಧೀನ ಪಡಿಸಿಕೊಳ್ಳಲಿರುವ ಪ್ರದೇಶದ ಬಗ್ಗೆ ಯಲಹಂಕ ತಾಲ್ಲೂಕು ಕಚೇರಿಗೆ ವರದಿ ಕೊಡುತ್ತದೆ. ಅಲ್ಲಿನ ತಹಶೀಲ್ದಾರ್ 'ನೈಜತೆ ಸರ್ಟಿಫಿಕೆಟ್' ಕೊಟ್ಟರೆ ಮಾತ್ರ ಪರಿಹಾರ ಸಿಗುತ್ತದೆ; ಇದು ನಿಯಮ.

ಆದರೆ ರಾಮಾಂಜನಪ್ಪ ಈ ನಿಯಮಕ್ಕೆ ಬ್ರೇಕ್ ಹಾಕಹತ್ತಿದ. ಈ ವ್ಯಾಪ್ತಿಯಲ್ಲಿ ಎಕರೆಗೆ ಅರವತ್ತೆರಡು ಲಕ್ಷ ಬೆಲೆಯಿದೆ. ಇದರಾಸೆಯಿಂದಲೇ ಸೆಕ್ಷನ್ 136 ಅಂತೊಂದನ್ನು ಹುಟ್ಟುಹಾಕಿದ. ಇದರಡಿಯಲ್ಲಿ ಪಕ್ಕಾ ವಂಚನೆಗೆ ಚಾಲನೆ ದೊರೆಯಿತು. ದಾಖಲೆ ಇಲ್ಲದವರಿಗೆ ಈ 'ಸೆಕ್ಷನ್'ನಡಿಯಲ್ಲಿ ಬೋಗಸ್ ದಾಖಲೆ ಸೃಷ್ಟಿಸಿ, ಇದಕ್ಕೆ 25 ಲಕ್ಷ ಅಂತ ಫಿಕ್ಸ್ ಮಾಡಿದ. ಹೀಗೆ ಪೆಂಡಿಗಟ್ಟಲೆ ನಕಲಿ ಮಂಜೂರಾತಿ ದಾಖಲೆಗಳು ಗುಡ್ಡೆ ಬೀಳಲಾರಂಭಿಸಿದವು. ಆದರೆ ಈ ಅವಧಿಯಲ್ಲಿ ಯಲಹಂಕ ವ್ಯಾಪ್ತಿಯಲ್ಲಿದ್ದ ತಹಶೀಲ್ದಾರ್‌ಗಳಾದ ಧನಲಕ್ಷ್ಮಿ ಹಾಗೂ ಮಹೇಶ್ ಬಾಬು ಎಂಬವರು ರಾಮಾಂಜನೇಯನ ರಂಕುಗಳಿಗೆ ತೊಡರುಗಾಲಾದರು.


ಇಷ್ಟರಲ್ಲಾಗಲೇ ರಾಮಾಂಜನೇಯನ ನಕಲಿ ದಾಖಲೆ ಪುರಾಣ ಚರ್ಚೆಯ ವಿಷಯವಾಗಿ ವಿಧಾನಸೌಧವನ್ನೂ ತಲುಪಿಯಾಗಿತ್ತು, ಒತ್ತಡ ತಡೆದುಕೊಳ್ಳಲಾಗದೆ ಸರ್ಕಾರ ತನ್ನ ಜಮೀನು ಉಳಿಸಿಕೊಳ್ಳುವ ನಿಮಿತ್ತ ಸರ್ಕಾರಿ ಮಂಡಳಿ ನಿಯಮಿತದಿಂದ 'ಜಾರಿದಳ' ಅಂತೊಂದನ್ನು ನೇಮಿಸಿತು.

ಇದಕ್ಕೆ ಕಂದಾಯ ಇಲಾಖೆಯ ನಿವೃತ್ತ ಕಾರ್ಯದರ್ಶಿ ಸುಬ್ರಹ್ಮಣ್ಯಂ ಅಧಿಕಾರಿಯಾಗಿ ಬಂದರು. ಜೊತೆಗೆ ಖಡಕ್ ಐಎಎಸ್ ಅಧಿಕಾರಿ ಮಂಜುಳಾರೂ ನೇಮಕಗೊಂಡರು.

ಹಾಗೆ ಬಂದ ಮಂಜುಳಾ ಕಡತಗಳನ್ನು ಪರಿಶೀಲಿಸಿದಾಗ ನಕಲಿತನದ ದರ್ಶನವಾಯಿತು. ಬೋಗಸ್ ದಾಖಲೆಗಳಿಂದಾಗಿ ನಿಜವಾದ ರೈತರಿಗಾಗುತ್ತಿರುವ ಅನ್ಯಾಯಗಳೂ ತಿಳಿದವು. ತಕ್ಷಣದಲ್ಲಿ ಅಂಥ ದಾಖಲೆಗಳನ್ನೆಲ್ಲ ಸೀಜ್ ಮಾಡಿದ ಮಂಜುಳಾ 'ಯಾರಿಗೂ ದಾಖಲೆ ಕೊಡುವ ಹಾಗಿಲ್ಲ' ಅಂತ ನಿಷ್ಠುರ ಆದೇಶ ಹೊರಡಿಸಿದ್ದರು.


ಕರುಣಾಕರರೆಡ್ಡಿ

ಸಿಕ್ಕಿಕೊಳ್ಳುವ ಭಯ ಹಾಗೂ ದುಡ್ಡು ಕೊಟ್ಟವರ ಒತ್ತಡದಿಂದಾಗಿ ಪೀಕಲಾಟಕ್ಕಿಟ್ಟುಕೊಂಡವನು ರಾಮಾಂಜನೇಯ! ಮಂಜುಳಾರ ಕಡೆಯಿಂದ ಈ ಆದೇಶ ಹೊರಬರುವ ಕ್ಷಣದವರೆಗೂ ರಾಮಾಂಜನೇಯ ತನ್ನ 'ಪರ್ಸನಲ್' ಸೆಕ್ಷನ್ 136 ರನ್ವಯ ಬೋಗಸ್ ದಾಖಲೆ ಸೃಷ್ಟಿಸಹತ್ತಿದ್ದ. ಭತ್ತದ ಹುಲ್ಲಿಗೆ ಬೆಂಕಿ ಹಾಕಿ ನಕಲಿ ಕಡತಗಳನ್ನು ಅದಕ್ಕೆ ಹಿಡಿದು ಹಳತಾಗಿ ಮಾರ್ಪಡಿಸುವ ಆವಿಷ್ಕಾರವೂ ರಾಮಾಂಜನೇಯನ ಕಡೆಯಿಂದ ನಡೆದುಹೋಗಿತ್ತು! ಆದರೀಗ ಬೇರೆ ನಿರ್ವಾಹವಿಲ್ಲದೆ ಅಂಥ ಕಡತಗಳನ್ನೆಲ್ಲ ಆರ್ಡರ್ ಪೆಂಡಿಂಗ್ ಅಂತ ತಡೆಹಿಡಿದ. ಇದು ಕೋಟಿಗಳ ವ್ಯವಹಾರವಾದುದರಿಂದ ಇದು ಮುಂದುವರೆಯಬೇಕೆಂದರೆ 'ಜಾರಿದಳದಿಂದ' ಮಂಜುಳಾರನ್ನು ಹೊರಗಟ್ಟಬೇಕು ಮತ್ತು ದಂಧೆಯ ಹೆಬ್ಬಾಗಿಲಾದ ಯಲಹಂಕಕ್ಕೆ ತನ್ನ ಛೇಲಾ ಒಬ್ಬನನ್ನು ತಹಶೀಲ್ದಾರ್ ಆಗಿ ನೇಮಿಸ ಬೇಕು. ಇವು ಆಂಜನೇಯನೆದುರಿಗಿದ್ದ ಆಯ್ಕೆಗಳು.


ಗೂಳಿಹಟ್ಟಿ ಶೇಖರ್

ಈ ಆಯ್ಕೆಗಳೇ ಆರೆಸ್ಸೆಸ್ ಲಿಂಕ್‌ಗೆ ಕಾರಣವಾಗಿ ಬೆಂಗಳೂರು ವಿವಿಯ ಸಮಾಜ ಶಾಸ್ತ್ರ ವಿಭಾಗದ ಭ್ರಷ್ಟ ಮೈಲಾರಪ್ಪನೂ ಪಾಲು ತಿನ್ನುವಂತಾಯಿತು. ಈ ಮೈಲಾರಿಯ ಮೈಂಡಿನಲ್ಲೂ ಕೆ.ಆರ್. ಪುರಂನಲ್ಲಿದ್ದ ತನ್ನ ತಮ್ಮ ವೆಂಕಟೇಶ್‌ನನ್ನು ಯಲಹಂಕದೊಳಗಿಟ್ಟು ಕಾಸು ಕೀಳುವ ಆಲೋಚನೆಯೊಂದು ಹರಿದಾಡುತ್ತಿತ್ತು, ಅದಕ್ಕೆ ಸರಿಯಾಗಿ ಪುರಾತನ ಫ್ರೆಂಡ್ ರಾಮಾಂಜನೇಯನೂ ಸಂದಿಗ್ಧಕ್ಕೆ ಸಿಲುಕಿದ್ದ.

ಒಂದೇ ಏಟಿಗೆ ಎರಡು ಉಪಯೋಗ ಪಡೆಯಲು ನಿಂತ ಮೈಲಾರಿ ಆರೆಸ್ಸೆಸ್‌ನ ದಕ್ಷಿಣ ವಿಭಾಗದ ಪ್ರಮುಖ ಪ್ರೊ. ಆರ್. ನರಹರಿ, ಮೈ.ಚ. ಜಯದೇವ ಹಾಗೂ ದಿನೇಶ್ ಹೆಗ್ಡೆಗೆ ಗಂಟುಬಿದ್ದ. ದೇಶ ಭಕ್ತರ ಪೋಸಿನ ಈ ಭಟ್ಟಂಗಿಗಳು ಕರುಣಾಕರ ರೆಡ್ಡಿಯ ಬಳಿ ಹೋಗಿ ರಚ್ಚೆ ಹಿಡಿದು ಅಂತೂ ಮೈಲಾರಪ್ಪನ ತಮ್ಮ ವೆಂಕಟೇಶ್‌ನನ್ನು ಯಲಹಂಕಕ್ಕೆ ತಹಶೀಲ್ದಾರ್ ಆಗಿ ಕೂರಿಸಿದರು.

ಆದರೆ ರಾಮಾಂಜನೇಯನಿಗೆ ಮಂಜುಳಾರ ಕಿರಿಕ್ ಅತಿಯಾಗಿತ್ತಲ್ಲಾ? ಯಲಹಂಕಕ್ಕೆ ಬಂದ ವೆಂಕಟೇಶ್ ಮೆರೆಯಲು ಶುರುವಿಡಬೇಕಾದರೆ ಮಂಜುಳಾ ಕಿಕ್‌ಔಟ್ ಆಗಲೇಬೇಕಿತ್ತು, ಈ ಸಂಬಂಧ ಮೈಲಾರಿಗೆ ವೆಂಕಟೇಶನ ಮೂಲಕ ಗಂಟುಬಿದ್ದ ರಾಮಾಂಜನೇಯ ತನ್ನ ಛೇಲಾ ಸಾಧಿಕ್ ಎಂಬಾತನನ್ನು 'ಜಾರಿದಳ'ಕ್ಕೆ ಮುಖ್ಯಸ್ಥನನ್ನಾಗಿಸಿದ. ದಕ್ಷ ಅಧಿಕಾರಿ ಮಂಜುಳಾರನ್ನು ಮೈಸೂರು ಆಡಳಿತ ತರಬೇತಿ ಸಂಸ್ಥೆಗೆ ಎತ್ತಂಗಡಿ ಮಾಡಿಸಿದ. ವರದಿ ಅಚ್ಚಿಗೆ ಹೋಗುವ ಸಂದರ್ಭದಲ್ಲಿ ಮಂಜುಳಾ ಅಲ್ಲಿಂದಲೂ ಎತ್ತಂಗಡಿಯಾಗಿ ಬಿಎಂಟಿಸಿಗೆ ಆಯುಕ್ತರಾಗಿ ನೇಮಕಗೊಂಡಿರುವ ಸುದ್ದಿ ಬಂದಿದೆ.

ಅಲ್ಲಿಗೆ ದೇವನಹಳ್ಳಿ ಸುತ್ತಮುತ್ತ ನೂರಾರು ಎಕರೆ ಸರ್ಕಾರಿ ಜಾಗ ಯಾರ್‍ಯಾರದ್ದೋ ಹೆಸರಿನಲ್ಲಿ ಮಂಜೂರಾಗುವುದಕ್ಕೆ ಮರುಚಾಲನೆ ಸಿಕ್ಕಂತಾಗಿದೆ. ಇಷ್ಟೂ ಅನಾಹುತ ಕರುಣಾಕರ ರೆಡ್ಡಿಯ ಕಣ್ಣಳತೆಯಲ್ಲೇ ನಡೆದುಹೋಗಿದೆ. ಕೋಟಿಗಳೂ ಕೈ ಬದಲಾಗಿವೆ.

ಇನ್ನು ಮುಂದೆ ರಾಮಾಂಜನೇಯನ ನೇತೃತ್ವದಲ್ಲಿ ದೇವನಹಳ್ಳಿ ಸುತ್ತಮುತ್ತ ಎಗ್ಗಿಲ್ಲದೆ ಭೂ ಹನನ ನಡೆಯಲಿದೆ. ಅರೆಭಿನ್ನಮಂಗಲ ಮತ್ತು ಸಿಂಗಹಳ್ಳಿಗಳಲ್ಲಿ ಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರ ನೀಡದ್ದಕ್ಕೆ, ನಕಲಿ ಮಾಲೀಕರಿಗೆ ಪರಿಹಾರ ಕೊಟ್ಟಿರುವುದರ ವಿರುದ್ಧ ರೈತರು ಪ್ರತಿಭಟಿಸಿದ್ದಾರೆ. ಇದೆಲ್ಲವನ್ನು ಸರಿಪಡಿಸಿ ಅಂತ ಅಹವಾಲು ಸಲ್ಲಿಸೋಣವೆಂದರೆ ಕಂದಾಯ ಸಚಿವನೇ ಕಳ್ಳನ ಸ್ಥಾನದಲ್ಲಿದ್ದಾನೆ. ಮುಖ್ಯಮಂತ್ರಿ ಯಡಿಯೂಪ್ಪನವರಾದರೂ ಸರಿಪಡಿಸಿಯಾರಾ ಅಂತ ನೋಡಿದರೆ ಅವರ ನಿಯತ್ತು ರೆಡ್ಡಿ ಪಟಾಲಂನ ಪದತಲದಲ್ಲಿದೆ!

ಸರ್ಕಾರಿ ಜಾಗವನ್ನು ಭ್ರಷ್ಟರ ಕೈಯಿಂದ ರಕ್ಷಿಸುವವರು, ನೊಂದವರಿಗೆ ನ್ಯಾಯ ದೊರಕಿಸುವವರ್‍ಯಾರು?

• ಸಂತೋಷ್ ಬಾಗಿಲಗದ್ದೆ



ಕಟ್ಟಾ ಬಂಟ ಎಲ್ಲರಿಗೂ ನೆಂಟ!

ರಾಮಾಂಜನೇಯನೆಂಬ ಭ್ರಷ್ಟನ ನಿಯತ್ತು ನಿಂತ ಜಾಗದಲ್ಲಿ ನಿಲ್ಲುವ ಜಾಯಮಾನದ್ದಲ್ಲ. ಅದು ಗೂಳಿ ಹಟ್ಟಿಯಿಂದ ಕರುಣಾಕರ ರೆಡ್ಡಿಗೆ ಶಿಫ್ಟ್ ಆಗಿ ಕಟ್ಟಾ ಸುಬ್ರಹ್ಮಣ್ಯ ನಾಯ್ಡುವಿನ ಸುಪರ್ದಿಗೂ ಒಳಪಡಬಲ್ಲದು. ಒಂದರ್ಥದಲ್ಲೀತ ಕಟ್ಟಾನ ಖಾಸಾ ಬಂಟ. ಆದರೆ ಎಲ್ಲರಿಗೂ ನೆಂಟ!

ಈತನ ಖತರ್‌ನಾಕ್ ಬುದ್ಧಿ ನೋಡಿ. ರೆಡ್ಡಿ ಬಳಗಕ್ಕೆ ಹತ್ತಿರಾಗಿರುವ ಈತ ಕಟ್ಟಾ ನಾಯ್ಡುವಿನ ಮಗನಿಗೆ ಬಳ್ಳಾರಿಯ ದಿವಾಕರ ಬಾಬು ಮಗಳೊಂದಿಗೆ ಸಂಬಂಧ ಕುದುರಿಸಿದ್ದಾನೆ! ಹೇಳಿಕೇಳಿ ಬಾಬು ರೆಡ್ಡಿಗೆ ಪರಮ ವಿರೋಧಿ!

ಆದರೂ ಕೂಡ ಈತನ ಮೇಯ್ದಾಟಕ್ಕೆ ಯಾವ ತೊಂದರೆಯೂ ಆಗಿಲ್ಲ, ಯಾಕೆಂದರೆ ಈತನ ಹಡಬೆ ಹಣದಲ್ಲಿ ಎಲ್ಲರಿಗೂ ಪಾಲು ಹೋಗುತ್ತಿದೆ!

ಡಿಎಸ್‌ಎಸ್ ಟು ಆರೆಸ್ಸೆಸ್
ಮಾರ್ಜಾಲ ಮೈಲಾರಿ!



ತಹಶೀಲ್ದಾರ್‌ಗಳ ವರ್ಗಾವಣೆಯಲ್ಲಿ ಸ್ವಾರ್ಥ ಸಾಧನೆ ಮಾಡಿರುವ ಮೈಲಾರಪ್ಪ ಪಕ್ಕಾ ಲೆಕ್ಕಾಚಾರದ ಗಿರಾಕಿ. ಯಾವ ಸಮಯದಲ್ಲಾದರೂ ಬಣ್ಣ ಬದಲಿಸಿಬಿಡಬಲ್ಲ ಮೈಲಾರಿ ಮೊದಮೊದಲು ತಾನೊಬ್ಬ ಮಹಾನ್ ದಲಿತೋದ್ಧಾರಕನೆಂಬಂತೆ ಪೋಸು ಕೊಡುತ್ತಿದ್ದ. ಕಡೆಗೊಂದು ದಿನ ಇದ್ದಕ್ಕಿದ್ದಂತೆ ಆರೆಸ್ಸೆಸ್ ವಟುಗಳ ಬಾಲ ಹಿಡಿದು ಅಡ್ಡಾಡಲಾರಂಭಿಸಿದ!


ಇಂಥಾ ಮೈಲಾರಿ ಯಾರ್‍ಯಾರದ್ದೋ ಕೈಕಾಲು ಹಿಡಿದು ಎಮ್ಮೆಲ್ಲೆ ಟಿಕೆಟ್ ಖರೀದಿಸಿದವನೇ ಪುಲಿಕೇಶಿನಗರದಿಂದ ಸ್ಪರ್ಧಿಸಿ ಹೀನಾಯವಾಗಿ ಗೋತಾ ಹೊಡೆದಿದ್ದ. ತದನಂತರ ಆರೆಸ್ಸೆಸ್‌ನ ನರಹರಿ, ಜಯದೇವ್‌ನಂಥವರನ್ನು ಪಳಗಿಸಿ ಕೊಂಡ ಮೈಲಾರಿ ಸರ್ಕಾರದ ಕಡೆಯಿಂದಲೂ ಲಾಭ ಗಿಟ್ಟಿಸಲು ಹುನ್ನಾರ ನಡೆಸತೊಡಗಿದ.

ಇದೀಗ ಮೈಲಾರಿಗೆ ಎಂಎಲ್‌ಸಿಯಾಗುವ ಪಿತ್ತ ನೆತ್ತಿಗೇರಿದೆ. ಹೇಗಾದರೂ ಮಾಡಿ ಅಧಿಕಾರ ರಾಜಕೀಯಕ್ಕಿಳಿಯುವ ಹಪಾಹಪಿಯೂ ಅಧಿಕವಾಗಿದೆ. ಇದಕ್ಕಾಗಿ ತನ್ನ ತಮ್ಮ ವೆಂಕಟೇಶನ ಜೇಬನ್ನೇ ನೆಚ್ಚಿಕೊಂಡಿರುವ ಮೈಲಾರಿ ಆತನನ್ನು ಯಲಹಂಕಕ್ಕೆ ವರ್ಗಾವಣೆ ಮಾಡಿಸಿದ್ದಾನೆ.


ವೆಂಕಟೇಶ್ ಹುಲುಸಾದ ಹುಲ್ಲುಗಾವಲನ್ನು ಹೊಟ್ಟೆಬಿರಿಯೆ ಮೇಯುವುದು ಖಚಿತ. ಮೈಲಾರಿಗೂ ಒಂದಷ್ಟು ಹಡಬೆ ದುಡ್ಡು ಒಟ್ಟಾಗುವುದೂ ನಿಶ್ಚಿತ.


ದಲಿತ ಪರತೆಯೆಂಬ ಪೊರೆ ಕಳಚಿ ಆರೆಸ್ಸೆಸ್‌ಗೆ ಹಾರಿರುವ ಮೈಲಾರಿ ಲಾಭ ಅಂತೊಂದು ಬರುವುದಾದರೆ ಯಾವ ಗಟಾರಕ್ಕೆ ಹಾರಲೂ ಹೇಸುವವನಲ್ಲ!

ಕಾರ್ಟೂನ್ ಕಾರ್ನರ್



ಸಿಎಂ ಕೋಟಾ ಹಗರಣ ಯಡ್ಡಿ ನೆಂಟರಿಗೇ ಸೈಟು





ಬೆಂಗಳೂರಿನ ಬಡಜನರ ಪಾಲಿಗೆ ರಕ್ಕಸನಂತಿರುವ ಬಿಡಿಎ ಅಧಿಕಾರಸ್ಥ ರಾಜಕಾರಣಿಗಳಿಗೆ ನಾಯಕಸಾನಿಯಂತಾಗಿ ಹೋಗಿದೆ. ಮುಖ್ಯಮಂತ್ರಿಗಳ ವಿವೇಚನಾ ಕೋಟಾ, ಜಿ-ಕ್ಯಾಟಗರಿಯೆಂಬ ವಿಶೇಷಾಧಿಕಾರವನ್ನು ಮುಂದಿಟ್ಟುಕೊಂಡು ಇಲ್ಲಿ ನಡೆಯುತ್ತಿರುವ ಅಕ್ರಮಗಳಿಗೆ ಎಣೆಯೇ ಇಲ್ಲ. ಈ ಹಿಂದಿನ ಸಿಎಂಗಳೆಲ್ಲಾ ಪ್ರತಿ ಬಾರಿ ಯಾರ್‍ಯಾರಿಗೋ ಸೈಟು ಹಂಚಿ ಅವಿವೇಕ ತೋರಿದ್ದರೆ ಈ ಬಾರಿ ಯಡ್ಡಿ ತಮ್ಮ ರಕ್ತ ಸಂಬಂಧಿಗಳಿಗೇ ತಮ್ಮ ಕೋಟಾದಡಿ ಬಿಡಿಎ ಸೈಟು ದಯಪಾಲಿಸಿ ತಮ್ಮ ಭ್ರಷ್ಟ ಜನ್ಮವನ್ನು ಸಾರ್ಥಕಪಡಿಸಿಕೊಂಡಿದ್ದಾರೆ.

ರಾಜ್ಯವನ್ನೆಲ್ಲಾ ಲೂಟಿ ಹೊಡೆಯುತ್ತಾ ತನ್ನ ಖಾಸಗಿ ಖಜಾನೆ ಭರ್ತಿ ಮಾಡಿಕೊಳ್ಳುತ್ತಿರುವ ಮುಖ್ಯಮಂತ್ರಿ ಯಡಿಯೂರಪ್ಪ ಈಗ ಚಿಲ್ಲರೆ ಬಾಬತ್ತಿಗೂ ನಾಲಿಗೆ ಚಾಚುತ್ತಿದ್ದಾರೆ. ಇತ್ತೀಚಿನ ಬಿಡಿಎ ಸೈಟು ಹಂಚಿಕೆಯ ದಂಧೆಯೇ ಇದಕ್ಕೆ ಸಾಕ್ಷಿಯಾಗಿದೆ.

ಮುಖ್ಯಮಂತ್ರಿಯ ವಿವೇಚನಾ ಕೋಟಾದಡಿ ಈಗ ಯಡ್ಡಿಯ ಮಗ ರಾಘವೇಂದ್ರ, ತಂಗಿ ಪ್ರೇಮಮ್ಮ ಹಾಗೂ ಸುರೇಖಾ ಸಂಗಪ್ಪ ಬೂಕನಕೆರೆ ಸೈಟು ಕಬಳಿಸಿದ್ದಾರೆ. ಇವೆಲ್ಲಾ ಕೋಟ್ಯಂತರ ರೂಪಾಯಿ ಬೆಲೆಯ ಸೈಟುಗಳು!

ಬೆಂಗಳೂರಿನ ಬಡಜನರ ಪಾಲಿಗೆ ರಕ್ಕಸನಂತಿರುವ ಬಿಡಿಎ ಅಧಿಕಾರಸ್ಥ ರಾಜಕಾರಣಿಗಳಿಗೆ ನಾಯಕಸಾನಿಯಂತಾಗಿ ಹೋಗಿದೆ. ಮುಖ್ಯಮಂತ್ರಿಗಳ ವಿವೇಚನಾ ಕೋಟಾ, ಜಿ-ಕ್ಯಾಟಗರಿಯೆಂಬ ವಿಶೇಷಾಧಿಕಾರವನ್ನು ಮುಂದಿಟ್ಟುಕೊಂಡು ಇಲ್ಲಿ ನಡೆಯುತ್ತಿರುವ ಅಕ್ರಮಗಳಿಗೆ ಎಣೆಯೇ ಇಲ್ಲ. ಈ ಹಿಂದಿನ ಸಿಎಂಗಳೆಲ್ಲಾ ಪ್ರತಿ ಬಾರಿ ಯಾರ್‍ಯಾರಿಗೋ ಸೈಟು ಹಂಚಿ ಅವಿವೇಕ ತೋರಿದ್ದರೆ ಈ ಬಾರಿ ಯಡ್ಡಿ ತಮ್ಮ ರಕ್ತ ಸಂಬಂಧಿಗಳಿಗೇ ತಮ್ಮ ಕೋಟಾದಡಿ ಬಿಡಿಎ ಸೈಟು ದಯಪಾಲಿಸಿ ತಮ್ಮ ಭ್ರಷ್ಟ ಜನ್ಮವನ್ನು ಸಾರ್ಥಕಪಡಿಸಿಕೊಂಡಿದ್ದಾರೆ.

ಮೊದಲನೆಯದಾಗಿ ಬಿ.ವೈ. ರಾಘವೇಂದ್ರನ ವಿಚಾರಕ್ಕೆ ಬರುವುದಾದರೆ ಈತ ಮುಖ್ಯಮಂತ್ರಿಯ ಮಗನಷ್ಟೇ ಅಲ್ಲದೆ ಹಾಲಿ ಶಿವಮೊಗ್ಗ ಸಂಸದ ಕೂಡ. ಎಂ.ಪಿ ಫಂಡಿನ ಪ್ರತಿ ಡೀಲ್‌ನಲ್ಲೂ ಪರ್ಸೆಂಟೇಜ್ ಫಿಕ್ಸ್ ಮಾಡಿ ಹಣ ನುಂಗುತ್ತಿರುವ ರಾಘವೇಂದ್ರನಿಗೆ ಯಾವ ಬಡತನವೂ ಇರಲಿಲ್ಲ. ಆದರೂ ಪುಗಸಟ್ಟೆ ಸಿಕ್ಕರೆ ಯಾಕೆ ಬೇಡ ಅನ್ನಬೇಕು ಎನ್ನುವ ಜಾಯಮಾನ ಇವನದ್ದು! ಹಾಗಾಗಿ ಬೆಂಗಳೂರಿನ ರಾಜಮಹಲ್ ವಿಲಾಸ್ ಎಕ್ಸ್‌ಟೆನ್‌ಷನ್ನಿನ ಕೋಟ್ಯಧೀಶರ ಬಡಾವಣೆಯಲ್ಲೇ 50x80 ಅಳತೆಯ ಸೈಟೊಂದನ್ನು ರಾಘವೇಂದ್ರನಿಗೆ ಸಿಎಂ ಯಡ್ಡಿ ಕೊಟ್ಟಿದ್ದಾರೆ.

ಈ ಸೈಟು ನೀಡಿಕೆಯ ಹಿಂದೆ ಕೊಲೆಗೆ ಸಮನಾದ ಬಡವರ ಕಣ್ಣೀರ ಕತೆಯೂ ಇದೆ. ಈ ಕತೆ ಏನೆಂದು ನಂತರ ನೋಡೋಣ.

ತಂಗಿಗೆ 2 ಕೋಟಿ ರೂ. ಸೈಟು


ರಾಘವೇಂದ್ರನ ಜೊತೆಗೆ ಸೈಟು ನುಂಗಿರುವಾಕೆ ಪ್ರೇಮಮ್ಮ. ಈಕೆ ಯಡ್ಡಿಯ ಖಾಸಾ ಸೋದರಿ. ಅಗ್ರಿಕಲ್ಚರಿಸ್ಟ್ ಎಂಬ ಕ್ಯಾಟಗರಿಯಡಿ ಪ್ರೇಮಮ್ಮನಿಗೆ ಹೆಚ್‌ಎಸ್‌ಆರ್ ಬಡಾವಣೆಯಲ್ಲಿ ಒಂದು ಸೈಟು ಕೊಡಲಾಗಿದೆ. ಈಗಿನ ಮಾರ್ಕೆಟ್ ರೇಟಿನಲ್ಲಿ ಮಿನಿಮಂ 2 ಕೋಟಿ ರೂಪಾಯಿ ಬೆಲೆಬಾಳುವ ಈ ಸೈಟಿಗೆ ಬಿಡಿಎನವರು ಜುಜುಬಿ 8 ಲಕ್ಷ ಪಡೆದು ಕೊಟ್ಟುಬಿಟ್ಟಿದ್ದಾರೆ. ಈಕೆ ಯಾರು, ಸಮಾಜಕ್ಕೆ ಯಾವ ರೀತಿಯ ಕೊಡುಗೆ ನೀಡಿದ್ದಾರೆಂದು ಹುಡುಕುವುದು ವ್ಯರ್ಥ!

ಯಡ್ಡಿಯ ಸೋದರಿ ಎಂಬುದೊಂದೇ ಪ್ರೇಮಮ್ಮನಿಗಿದ್ದ ಶ್ರೀರಕ್ಷೆ.

ಇದಿಷ್ಟೇ ಅಲ್ಲದೆ ಯಡ್ಡಿಯ ಇನ್ನೊಬ್ಬಳು ಬಂಧು ಸುರೇಖಾ ಸಂಗಪ್ಪ ಬೂಕನಕೆರೆ ಎಂಬಾಕೆಗೂ ಅಂಜನಪುರ ಬಿಡಿಎ ಲೇಔಟಿನಲ್ಲಿ ಸೈಟು ನೀಡಲಾಗಿದೆ. 2010 ರ ಮೇ ತಿಂಗಳಲ್ಲಿ ಯಡಿಯೂರಪ್ಪ ಒಟ್ಟಾರೆಯಾಗಿ 163 ಶ್ರೀಮಂತರಿಗೆ ಸಿಎಂ ವಿವೇಚನಾ ಕೋಟಾದಡಿ ಸೈಟು ದಯಪಾಲಿಸಿದ್ದಾರೆ. ಇವರಲ್ಲಿ ಬಹುತೇಕರು ಬಿಜೆಪಿಯ ಶಾಸಕರು-ಸಚಿವರುಗಳೇ ಇದ್ದಾರೆ. ಇಡೀ ಪಟ್ಟಿಯಲ್ಲಿ ಇನ್ನೆರಡು ಅನುಮಾನಾಸ್ಪದ ಹೆಸರುಗಳಿವೆ.

ಬಿ.ಎಸ್. ಶಾಂತಾರಾಂ ಎಂಬಾತನಿಗೆ ಹೆಚ್‌ಎಸ್‌ಆರ್ ಲೇಔಟಿನ 6ನೇ ಸೆಕ್ಟರ್‌ನಲ್ಲಿ 688 ನೇ ನಂಬರಿನ ಸೈಟು ಕೊಟ್ಟಿದೆ. ಅದೇ ರೀತಿ ಬಿ.ಎಸ್. ಪ್ರೇಮನಾಥ್‌ಗೆ ಇದೇ ಹೆಚ್‌ಎಸ್‌ಆರ್ ಬಡಾವಣೆಯ 3 ನೇ ಸೆಕ್ಟರ್‌ನ 40 x60 ಅಳತೆಯ 47/8 ನಂಬರಿನ ಸೈಟು ಸಿಕ್ಕಿದೆ.

ಇವರೆಲ್ಲಾ ಲೋಕಸೇವಾನಿರತ ಯಡಿಯೂರಪ್ಪನ ನೆಂಟರು.



ಬುಲ್ಡೋಜರ್ ರಾಗು

ರಾಜಮಹಲ್ ವಿಲಾಸ ಬಡಾವಣೆಯ 2 ನೇ ಹಂತದಲ್ಲಿ ರಾಘವೇಂದ್ರ ನುಂಗಿರುವ 50x80 ಅಡಿ ಅಳತೆಯ ಸೈಟಿನ ಹಿಂದೆ ಅಧಿಕಾರ ದುರುಪಯೋಗ, ವಂಚನೆ ಹಾಗೂ ನಕಲಿ ದಾಖಲೆಗಳ ಪರಂಪರೆಯೇ ಇದೆ. ಬೆಂಗಳೂರು ಉತ್ತರ ತಾಲ್ಲೂಕಿನ ನಾಗಶೆಟ್ಟಿಹಳ್ಳಿಯ ಸರ್ವೆ ನಂಬರ್ 22/4 ಹಾಗೂ 22/5 ರಲ್ಲಿ ಒಟ್ಟು 64 ಗುಂಟೆ (1 ಎಕರೆ 24 ಗುಂಟೆ) ಜಮೀನನ್ನು ಬಿಡಿಎ ಈ ಹಿಂದೆ ಸ್ವಾಧೀನಮಾಡಿಕೊಂಡಿತ್ತು.

ಭೂ ಮಾಲೀಕರಿಗೆ ಸೂಕ್ತ ಪರಿಹಾರವನ್ನೂ ನೀಡಿ ಆ ಜಮೀನಿನಲ್ಲಿ ಒಂದು ಎಕರೆಯಷ್ಟು ಜಾಗವನ್ನು 1988 ರಲ್ಲಿ ಎನ್‌ಟಿಎ ಹೌಸಿಂಗ್ ಸೊಸೈಟಿಯವರಿಗೆ ನೀಡಲಾಗಿತ್ತು. ಉಳಿಕೆ ಜಾಗದಲ್ಲಿ ಬಿಡಿಎ ನಾಲ್ಕು ದೊಡ್ಡ ನಿವೇಶನಗಳನ್ನು ಹಾಗೂ ಒಂದು ಚಿಕ್ಕ ಪಾರ್ಕ್ ಅನ್ನು ನಿರ್ಮಿಸಿತ್ತು. ಈ ನಡುವೆ ಸೆಲ್ವಕುಮಾರ್ ಎಂಬಾತ ಯಾವುದೋ ನಕಲಿ ದಾಖಲೆ ಜಾಲದವರ ವಂಚನೆಗೆ ಸಿಲುಕಿ ಇದೇ ಜಾಗ ಖರೀದಿಸಿದ್ದ. ನಗರಪಾಲಿಕೆಯಿಂದ ಖಾತೆಯನ್ನು ಮಾಡಿಸಿಕೊಂಡು ಅಲ್ಲಿ ಬಹುಮಹಡಿ ಕಟ್ಟಡ ನಿರ್ಮಿಸಲು ಹೊರಟುಬಿಟ್ಟಿದ್ದ. ಆಗ ಇದೊಂದು ವಿವಾದವೇ ಆಗಿತ್ತು. ಆಶ್ಚರ್ಯದ ವಿಚಾರ ಏನೆಂದರೆ ಆಗ ಉಪಮುಖ್ಯಮಂತ್ರಿಯಾಗಿದ್ದ ಇದೇ ಯಡಿಯೂರಪ್ಪ ಸೆಲ್ವಕುಮಾರ ಆ ಜಾಗದಲ್ಲಿ ಕಟ್ಟಡ ಕಟ್ಟಲು ಅವಕಾಶ ನೀಡಬಾರದೆಂದು, ಅವನ ಹತ್ತಿರ ಇದ್ದ ದಾಖಲೆಗಳು ನಕಲಿಯೆಂದೂ ಆದೇಶ ನೀಡಿದ್ದರು.

ಈಗ ಏನಾಗಿದೆ ನೋಡಿ.

ಸಾರ್ವಜನಿಕರಿಗೆ ಹರಾಜಿನ ಮೂಲಕ ಮಾರಬೇಕಿದ್ದ ಆ ಸೈಟುಗಳಲ್ಲೇ ಒಂದನ್ನು ರಾಘವೇಂದ್ರನಿಗೆ ಕೊಡಿಸಿದ್ದಾರೆ ಯಡ್ಡಿ. ಅಷ್ಟೇ ಅಲ್ಲ, ವಂಚಕ ಸೆಲ್ವಕುಮಾರನನ್ನು ಕರೆಸಿ ಪಾರ್ಕ್‌ಗೆಂದು ಮೀಸಲಿರಿಸಿದ್ದ ಜಾಗವನ್ನೇ ಸೈಟಾಗಿಸಿ ಅವನಿಗೂ ದಯಪಾಲಿಸಿದ್ದಾರೆ.

ಹೀಗೆ ಲೋಕಕ್ಕೇ ಗೊತ್ತಾಗುವಂತೆ ಸ್ವಜನಪಕ್ಷಪಾತ ನಡೆಸುತ್ತಿರುವ ಯಡಿಯೂರಪ್ಪ ನಾಚಿಕೆ, ಮಾನ ಮರ್ಯಾದೆಗಳನ್ನೆಲ್ಲಾ ಬಿಟ್ಟು ನಿಂತಿದ್ದಾರೆ. ಇವರಿಗೆ ಉಗಿದು ಬುದ್ದಿ ಹೇಳುವವರು ಯಾರು?

•ಪಾರ್ವತೀಶ
bparvateesha@gmail.com

ಡಿ.ಬಿ. ಚಂದ್ರೇಗೌಡರ ಮಗಳು ಮಗ್ಗಿ ಕಲಿಸುವ ಪಲ್ಲವಿಗೂ ಸ್ಪೆಷಲ್ ಸೈಟು

"ನಾನು ಮಗ್ಗಿ ಕಲಿಸುವವಳಾಗಿದ್ದು ನೂರಾರು ಮಕ್ಕಳು ಪಟಪಟಾಂತ ಒಂದರಿಂದ ನೂರರತನಕ ಮಗ್ಗಿ ಹೇಳುವಂತೆ ತರಬೇತಿ ಕೊಟ್ಟಿದ್ದೇನೆ. ಈ ನನ್ನ ಸಮಾಜ ಸೇವೆಯನ್ನು ಪರಿಗಣಿಸಿ ನನಗೆ ಮುಖ್ಯಮಂತ್ರಿಗಳ ವಿವೇಚನಾ ಕೋಟಾದಡಿ ಜಿ ಕ್ಯಾಟಗರಿ ಬಿಡಿಎ ಸೈಟನ್ನು ಚೆನ್ನಾಗಿ ಡವಲಪ್ ಆಗಿರುವ ಏರಿಯಾದಲ್ಲಿ ಕೊಡಿ."

–ಇದು ಪಲ್ಲವಿ ರಾಮ್ ಎಂಬಾಕೆ ಯಡ್ಡಿಗೆ ನೀಡಿದ ಅರ್ಜಿ. ಇಂತಹದೊಂದು ಮನವಿ 2009 ರ ಆಗಸ್ಟ್‌ನಲ್ಲಿ ಸಿಎಂ ಯಡ್ಡಿಯ ಕೈ ಸೇರುತ್ತದೆ. ಅದೇ ಅರ್ಜಿಯ ಜೊತೆಯಲ್ಲಿ ಬೆಂಗಳೂರು ಉತ್ತರ ಸಂಸದ ಡಿ.ಬಿ. ಚಂದ್ರೇಗೌಡರ ಶಿಫಾರಸ್ಸು ಪತ್ರವೊಂದು ಇರುತ್ತದೆ. ಈ ಪಲ್ಲವಿ ಮಹಾನ್ ಸಮಾಜ ಸೇವಕಿಯಾಗಿದ್ದು ಮಗ್ಗಿ ಟೀಚರ್ ಕೆಲಸ ಮಾಡುತ್ತಿದ್ದಾರೆ. ಈಕೆ ನನ್ನ ಮಗಳಾದ ಕಾರಣ ಹಾಗೂ ನಾನು ಈ ಮೊದಲು ಬಿಡಿಎ ಸೈಟೇ ತಗೊಂಡಿರದ ಕಾರಣ



ಪಲ್ಲವಿಗೆ ಸೈಟು ಕೊಡಿ ಅಂತ ಮಾನ್ಯ ಚಂದ್ರೇಗೌಡರು ರೆಕಮೆಂಡ್ ಮಾಡಿದ್ದಾರೆ. ಹೀಗೆ ಅರ್ಜಿ ಕೊಟ್ಟ ದಿನವೇ ಸಿಎಂ ಯಡ್ಡಿ "ಕೂಡಲೇ 50x80 ಅಳತೆಯ ಸೈಟು ಕೊಡಿ" ಎಂತಲೂ ನೋಟ್ ಬರೆಯುತ್ತಾರೆ.

ಹೀಗೆ ಪ್ರಯಾಣ ಹೊರಟ ಪಲ್ಲವಿಯ ಅರ್ಜಿ ಕೊನೆಗೆ ಮೊನ್ನೆ ಜೂನ್ 17, 2010 ರಂದು ಗುರಿ ಮುಟ್ಟಿದೆ. ರಾಜಮಹಲ್ ವಿಲಾಸ ಬಡಾವಣೆಯ 2 ನೇ ಹಂತದಲ್ಲಿ (ಗೆದ್ದಲಹಳ್ಳಿ ಸರ್ವೆ ನಂ. 1:2) 50x80 ಅಡಿ ಅಳತೆಯ ಸೈಟ್ ನಂಬರ್ 253 ಎ ಈಗ ಪಲ್ಲವಿಯ ಕೈ ಸೇರಿದೆ. ಇವತ್ತಿನ ಮಾರ್ಕೆಟ್ ರೇಟಿನಲ್ಲಿ 2 ಕೋಟಿ ರೂಪಾಯಿ ಬಾಳುವ ಈ ಸೈಟಿಗೆ ಪಲ್ಲವಿ ಕೊಟ್ಟಿರುವುದು ಜುಜುಬಿ 8 ಲಕ್ಷ ರೂಪಾಯಿಗಳನ್ನು ಮಾತ್ರ.

ಈ ಪಲ್ಲವಿ ಎಂತಾ ಸುಳ್ಳಿಯೆಂದರೆ ತನ್ನ ಅಫಿಡವಿಟ್‌ನಲ್ಲಿ 'ತನಗೆ ಇಡೀ ಭೂಮಂಡಲದಲ್ಲೇ ಎಲ್ಲೂ ಯಾವ ಸೈಟು, ಮನೆಯೂ ಇಲ್ಲ' ಎಂದು ದಾಖಲಿಸಿದ್ದಾಳೆ. ಆದರೆ ಇದೇ ಪಲ್ಲವಿಗೆ ಶಾಂತಿನಗರದ ಟಿವಿ 9 ಕಚೇರಿಯ ಹತ್ತಿರವಿರುವ ಅಪಾರ್ಟ್‌ಮೆಂಟಿನಲ್ಲೂ ಒಂದು ಸುಸಜ್ಜಿತ ಸ್ವಂತ ಫ್ಲಾಟ್ ಇದೆ. ಆದರೂ ಈಕೆಗೆ ಸುಳ್ಳು ಹೇಳಿ ಸರ್ಕಾರಿ ಆಸ್ತಿ ಕದಿಯುವ ಚಪಲ!

ಕಳೆದ 20 ವರ್ಷಗಳಿಂದ ರಾಜಕೀಯದಲ್ಲಿರುವ ಸಂಸದ ಡಿ.ಬಿ. ಚಂದ್ರೇಗೌಡರ ಅವಕಾಶವಾದಿತನ ಈಗ ಪಾತಾಳ ತಲುಪಿದೆ. ಅಧಿಕಾರ ಹೋದರೆ ಸಾಕು ಕಕ್ಕಾಬಿಕ್ಕಿಯಾಗಿ ಬಿಡುವ ಡಿಬಿಸಿ ಈಗ ಬಿಜೆಪಿಗಳ ಜೊತೆ ಸೇರಿ ಆತ್ಮಸಾಕ್ಷಿಯನ್ನು ಕಳೆದುಕೊಂಡಿದ್ದಾರೆ. ಇಲ್ಲದಿದ್ದರೆ ಮಗ್ಗಿ ಕಲಿಸುವ ಬ್ಯುಸಿನೆಸ್ ನಡೆಸುವ ಮಗಳಿಗೆ ಸಮಾಜ ಸೇವಕಿ ಎಂಬ ರೆಕಮೆಂಡೇಶನ್ ಪತ್ರ ಕೊಡಲು ಹೇಗೆ ಸಾಧ್ಯವಿತ್ತು?


ಈ ಪಲ್ಲವಿಯ ಸೋಷಿಯಲ್ ಸರ್ವೀಸ್ ಬಗ್ಗೆ ಹೇಳಬೇಕೆಂದರೆ ಈಕೆ 'ಅಲೋಮಾ ಮೆಂಟಲ್ ಮ್ಯಾಥ್ಸ್' ಎಂಬ ಟ್ಯೂಷನ್ ಬ್ಯುಸಿನೆಸ್ ನಡೆಸುತ್ತಾಳೆ. ಅದೊಂದು ರೀತಿ ಅಬ್ಯಾಕಸ್ ಗಣಿತ ತರಬೇತಿ ತರದ ದಂಧೆ. ಅದನ್ನೇ ಮಹಾನ್ ಸಮಾಜ ಸೇವೆ ಎಂದು ಈಕೆ ಬೊಗಳೆ ಬಿಡುತ್ತಿದ್ದಾಳೆ. ಜೊತೆಗೆ ತೇಜಸ್ ಎನ್ನುವ ಯಾರೋ ಬಾಲಕ ಚೆನ್ನಾಗಿ ಮಗ್ಗಿ ಹೇಳುತ್ತಾನೆಂದು ಯಾರೋ 'ವೆರಿಗುಡ್' ಅಂದರೆಂತಲೂ ರಾಜ್ಯಪಾಲರೇ ಪ್ರಶಸ್ತಿ ಪತ್ರ ಕೊಟ್ಟರೆಂತಲೂ ಹಾಗಾಗಿ ಅವನ ಟೀಚರ್ ತಾನಾಗಿರುವುದರಿಂದ ಬಿಡಿಎ ಸೈಟು ಕೊಡುವಂತೆ ಅರ್ಜಿ ಬರೆದಿದ್ದಾಳೆ.

ಇವಳ ದುರಾಸೆ ಈಡೇರಿಸಲು ಬಿಡಿಎನ ರಾಕ್ಷಸರು ರಾಜಮಹಲ್ ಬಡಾವಣೆಯಲ್ಲಿ ಭೂಸ್ವಾಧೀನಕ್ಕೂ ಮುನ್ನ ಮನೆ ನಿರ್ಮಿಸಿಕೊಂಡಿದ್ದ ಮಿಡಲ್ ಕ್ಲಾಸಿನವರ ಮನೆಯನ್ನೇ ಕೆಡವಿ ಅದೇ ಜಾಗವನ್ನು ಪಲ್ಲವಿಗೆ ಕೊಟ್ಟಿದ್ದಾರೆ.

ಈ ಡಿ.ಬಿ. ಚಂದ್ರೇಗೌಡ ಮತ್ತವರ ಮಗಳು ಪಲ್ಲವಿ ಎಂಥಾ ಮನೆಮುರುಕರಿರಬೇಕು ನೋಡಿ.

ಸಂತೋಷ್ ಹೆಗಡೆ ರಾಜೀನಾಮೆಯೂ ಬೇಲೇಕೇರಿ ಬಂದರಿನ ಗಣಿ ಗೂಂಡಾಗಳೂ!!

• ವಿವೇಕಾನಂದ ತಾಂಡೇಲ



ಮೂರೂಬಿಟ್ಟಿರುವ ಯಡ್ಡಿಯ ಚೆಡ್ಡಿ ಸರ್ಕಾರದ ಅಮೋಘ ಎರಡು ವರ್ಷದ ಮಹಾ-ಮಹಾ ಸಾಧನೆಗೆ 'ದೃಷ್ಟಿ ಬೊಟ್ಟು' ಇಟ್ಟು ಹೊರಬಿದ್ದಿದ್ದಾರೆ ನ್ಯಾಯಮೂರ್ತಿ ಸಂತೋಷ್ ಹೆಗಡೆ! ಕೆಲಸಕ್ಕೆ ಬಾರದ ಲೋಕಾಯುಕ್ತ ಹುದ್ದೆಗೆ ಎಡಗಾಲಲ್ಲಿ ಒದ್ದು ಹೋಗಿರುವ ಹೆಗಡೆಯ ನೈತಿಕ ಒತ್ತಡ, ನಿಷ್ಠುರತೆ, ಪ್ರಾಮಾಣಿಕತೆ, ಜನಪರ ಕಾಳಜಿ ವರ್ತಮಾನ ವ್ಯವಸ್ಥೆಯಲ್ಲಿ ಅಪರೂಪವೇ ಸರಿ. ಹೆಗಡೆ ಅದೆಷ್ಟು ಕಳಕಳಿ-ದಕ್ಷತೆಯಿಂದ ಭ್ರಷ್ಟಾಚಾರದ ವಿರುದ್ಧ ಹೋರಾಟ ಶುರುಹಚ್ಚಿಕೊಂಡಿದ್ದರೋ ಅದಕ್ಕಿಂತ ಬಿರುಸಾಗಿ ಯಡ್ಡಿಯ ಬ್ರಹ್ಮಾಂಡ ಭ್ರಷ್ಟ ತಂಡ ಹೆಗಡೆಯವರನ್ನು ಅಸಹಾಯಕನಾಗಿಸಲು ಹವಣಿಸುತ್ತಲೇ ಇತ್ತು, ಇದರಿಂದ ತಲೆ ರೋಸಿ ಹೋದ ಹೆಗಡೆ "ನಾನೀ ಪೀಠದಲ್ಲಿ ಉತ್ಸವಮೂರ್ತಿಯಾಗಿ ಸರ್ಕಾರಿ ಬೊಕ್ಕಸಕ್ಕೆ ಭಾರವಾಗಲೇ" ಎಂಬ ಸಾತ್ವಿಕ ಸಿಟ್ಟಿಗೊಳಗಾಗಿದ್ದರು; ರಾಜೀನಾಮೆಗೂ ಕಳೆದಾರು ತಿಂಗಳಲ್ಲಿ ಆಗಾಗ ಯೋಚಿಸುತ್ತಲೇ ಇದ್ದರು....



ಗೋಕುಲ್

ಆದರೀಗ ಫ್ಯಾಸಿಸ್ಟ್ ಬಿಜೆಪಿ ಸರ್ಕಾರದ ಕಿರಿಕಿರಿ-ಅಸಹಕಾರಕ್ಕೆ ಬೇಸತ್ತು ಹೆಗಡೆ ಕೊಟ್ಟಿರುವ ರಾಜೀನಾಮೆಗೆ ಅಂತಿಮವಾಗಿ ಕಾರಣವಾಗಿದ್ದು ಏನು ಗೊತ್ತೆ? ಉತ್ತರ ಕನ್ನಡದ ಬೇಲೇಕೇರಿ ಬಂದರಿನಲ್ಲಿ ಗಣಿ ಮಾಫಿಯಾ ಸರ್ಕಾರದ ಸಹಕಾರದಿಂದಲೇ ನಡೆಸಿಕೊಂಡು ಬರುತ್ತಿರುವ ದೋ ನಂಬರ್ ದಂಧೆ, ದಾದಾಗಿರಿಯನ್ನು ಮಟ್ಟ ಹಾಕಲಾಗದೆ ವಿಕ್ಕಟ್ಟಿ ಕಾನೂನು ನಿಷ್ಠ ನ್ಯಾಯಮೂರ್ತಿ ಹೆಗಡೆ ಲೋಕಾಯುಕ್ತ ಹುದ್ದೆಗೆ ರಾಜೀನಾಮೆ ಬಿಸಾಕಿ ಹೋಗಿದ್ದಾರೆ! ಬೇಲೇಕೇರಿ ಬಂದರಿನ ಅಕ್ರಮ ಅದಿರು ರಫ್ತು ವ್ಯವಹಾರ, ಗೋಲ್ ಮಾಲ್-ಗೂಂಡಾಗಿರಿಗೆ ಲೋಕಾಯುಕ್ತರ ಆದೇಶದಂತೆ ತಡೆಯೊಡ್ಡುವ ಕರ್ತವ್ಯ ನಿರತರಾಗಿದ್ದ ಅರಣ್ಯಾಧಿಕಾರಿ ಆರ್. ಗೋಕುಲರನ್ನೇ ಮನೆಗಟ್ಟಲು ಸರ್ಕಾರ ಸಕಲ ಸಿದ್ಧತೆಗಿಳಿದಿದ್ದು ಹೆಗಡೆಯವರನ್ನು ಕಂಗೆಡಿಸಿಬಿಟ್ಟಿತು.

ಬಂದರು ಮಂತ್ರಿ ಕೃಷ್ಣ ಪಾಲೇಮಾರ್ ಎಂಬ ಚೋರ ಪ್ರತ್ಯಕ್ಷವಾಗೇ ಗೋಕುಲರನ್ನು ಅಮಾನತ್ತು ಮಾಡುವ ಪ್ರಕ್ರಿಯೆಗೆ ಕೈಹಾಕಿದ್ದರೆ, ಆತನ ಹಿಂದೆ ಗಣಿ ಗೂಂಡಾ ಮಂತ್ರಿಗಳು ಒತ್ತಾಸೆಯಾಗಿ ನಿಂತಿದ್ದರು. ಈ ಅನ್ಯಾಯ-ಅವ್ಯವಹಾರ ಹೆಗಡೆಯ ಬಹುದಿನದ ಪೀಠತ್ಯಾಗ ಯೋಚನೆಗೊಂದು ಮೂರ್ತ ರೂಪ ಕೊಟ್ಟುಬಿಟ್ಟಿತು! ಕಳೆದ ಸೋಮವಾರದ ಹೊತ್ತಿಗೆ ಹೆಗಡೆ ಸಾಹೇಬರಿಗೆ ಗಣಿ ಮಾಫಿಯಾ ಕರ್ತವ್ಯನಿಷ್ಠ ಅರಣ್ಯಾಧಿಕಾರಿ ಗೋಕುಲರನ್ನು ಬಲಿ ಪಡೆಯಲು ಪ್ರಯತ್ನ ನಡೆಸಿರುವುದು ಖಾತ್ರಿಯಾಗಿ ಹೋಗಿತ್ತು, ಅಲ್ಲಿಗೆ ತನ್ನನ್ನು ನಂಬಿ-ತನ್ನ ಆದೇಶ ಪಾಲಿಸಿದ ತಪ್ಪಿಗೆ ಅಧಿಕಾರಿಯೊಬ್ಬ ಸರ್ಕಾರದ ಹಿಂಸೆಗೆ ಒಳಪಡುವುದಾದರೆ ತಾನಿನ್ನು ಈ ಹುದ್ದೆಯಲ್ಲಿದ್ದೇನು ಪ್ರಯೋಜನ ಅನ್ನಿಸಿಬಿಟ್ಟಿತು ಹೆಗಡೆಜೀಗೆ. ಅಂದೇ ಅವರು ಪೀಠ ತ್ಯಾಗಕ್ಕೆ ದೃಢ ನಿರ್ಧಾರ ಮಾಡೇಬಿಟ್ಟರು!

ರಫ್ತುದಾರ ರೌಡಿಗಳು

ಕುಖ್ಯಾತ ಬೇಲೇಕೇರಿ ಬಂದರು ಗಣಿ ಮಾಫಿಯಾದ ಆಯಕಟ್ಟಿನ ಅಡ್ಡೆ! ಇಲ್ಲಿ ನಡೆಯುವ ಅದಿರು ಸಂಗ್ರಹ-ಸಾಗಾಣಿಕೆ ಮತ್ತಿತರ ಚಟುವಟಿಕೆಗಳೆಲ್ಲವೂ ಶುದ್ಧ ಅಕ್ರಮ. ಬೇಲೇಕೇರಿ ಬಂದರಿನಲ್ಲಿ ಸುಮಾರು ಒಂದು ಡಜನ್ ಅದಿರು ವಿದೇಶಕ್ಕೆ ಕಳಿಸುವ ದೋ ನಂಬರ್ ದಂಧೆಕಾರರಿದ್ದಾರೆ. ಈ ರಫ್ತುದಾರ ರೌಡಿಗಳು ಮತ್ತವರ ಹಿಂದಿರುವ ಗಣಿ ರೆಡ್ಡಿ ಬಳಗ ಈ ನೆಲದ ಯಾವ ಕಾನೂನು-ಕಟ್ಟಲೆಗೂ ಕೇರ್ ಮಾಡದೆ ವಿದೇಶಕ್ಕೆ ಅವ್ಯಾಹತವಾಗಿ ಅದಿರು ಸಾಗಿಸುತ್ತದೆ. ಈ ರಫ್ತುದಾರ ರಕ್ಕಸರು ಬೇಲೇಕೇರಿಯ ಬೆಸ್ತರು-ಪರಿಸರ ಮತ್ತು ಇಡೀ ಜಿಲ್ಲೆಯ ಜನಜೀವನ ಆಪೋಷನ ಪಡೆದು ಅಟ್ಟಹಾಸದಿಂದ ಮೆರೆಯುತ್ತಿದ್ದಾರೆ.

ಕಳೆದ ಜನವರಿಯಲ್ಲಿ ನ್ಯಾ. ಸಂತೋಷ್ ಹೆಗಡೆ ಕಾರವಾರಕ್ಕೆ ಬಂದಿದ್ದರು. ಆಗ ಸ್ಥಳೀಯ ಜನಪರ ಕಳಕಳಿಯ ಒಂದಿಷ್ಟು ಹೋರಾಟಗಾರರು ಬೇಲೇಕೇರಿ ಮತ್ತು ಕಾರವಾರ ಬಂದರಿನಲ್ಲಿ ನಡೆಯುತ್ತಿರುವ ಅಕ್ರಮ-ಅವಾಂತರ ಲೋಕಾಯುಕ್ತರ ಗಮನಕ್ಕೆ ತಂದಿದ್ದರು. ಅದಕ್ಕೆ ನ್ಯಾ. ಹೆಗಡೆ "ನಂಗೆ ಸರ್ಕಾರ ಸರಿಯಾದ ಅಧಿಕಾರ ಕೊಟ್ಟರೆ ನಾಳೆಯೇ ಬಂದರಿನೊಳಗೆ ಒಂದೇ ಒಂದು ಅದಿರು ಲಾರಿ ನುಸುಳದಂತೆ ಮಾಡ್ತೇನೆ" ಎಂದಿದ್ದರು. ಹಾಗಂತ ಹೆಗಡೆಯೇನೂ ಸುಮ್ಮನೇ ಕೂರಲಿಲ್ಲ, ಬೇಲೇಕೇರಿ ಮತ್ತು ಕಾರವಾರ ಬಂದರಿನಲ್ಲಿ ಅಕ್ರಮ ಅದಿರು ಸಂಗ್ರಹಿಸಿ ವಿದೇಶಕ್ಕೆ ಕಳಿಸಲಾಗುತ್ತಿದೆ ಎಂಬ ದೂರನ್ನು ಗಂಭೀರವಾಗೇ ಪರಿಗಣಿಸಿದರು.

ಖೊಟ್ಟಿ ದಾಖಲೆ

ಖಡಕ್ ಅರಣ್ಯಾಧಿಕಾರಿ ಡಾ.ಉದಯ ವೀರ್‌ಸಿಂಗ್ ಎಂಬಾತನನ್ನು ಈ ಅಕ್ರಮ ತನಿಖೆಗೆ ಲೋಕಾಯುಕ್ತರು ನೇಮಿಸಿದರು. ಆತ ವೇಷ ಮರೆಸಿಕೊಂಡು ಪಕ್ಕಾ ಪತ್ತೇದಾರನಂತೆ ಬೇಲೇಕೇರಿ ಬಂದರಿನಲ್ಲಿ ಹಲವು ದಿನ ಅಲೆದು ರಫ್ತುದಾರ ರೌಡಿಗಳ ದುರ್ವ್ಯವಹಾರವನ್ನು ಸೂಕ್ಷ್ಮವಾಗಿ ಗಮನಿಸಿದರು. ಧಾರ್ಮಿಕ ಯಾತ್ರೆಗೆ ಹೋಗುವ ಸ್ಥಳೀಯರಂತೆ ತಮ್ಮ ತನಿಖಾ ತಂಡದ ವಾಹನಕ್ಕೆ ಕಟ್ಟಿಕೊಂಡು ಒಂದು ದಿನ ನಸುಕಿನಲ್ಲಿ ಹಠಾತ್ ರಫ್ತುದಾರ ರೌಡಿಗಳ ಅಡ್ಡೆ ಮೇಲೆ ದಾಳಿ ಮಾಡಿದರು. ಅವರಿಗೆ ಕಂತೆ-ಕಂತೆ ನಕಲಿ ದಾಖಲೆ, ಸಿಡಿ-ಕಂಪ್ಯೂಟರ್ ಸಿಕ್ಕಿದ್ದವು.

ಬೇಲೇಕೇರಿ ರೇಡ್ ಒಂದರಲ್ಲೇ ಲೋಕಾಯುಕ್ತರ ತನಿಖಾ ತಂಡಕ್ಕೆ ಬರೋಬ್ಬರಿ 40 ಗೋಣಿಚೀಲದಷ್ಟು ನಕಲಿ ಪರ್ಮಿಟ್ ಮತ್ತಿತರ ಸಾಗಾಣಿಕೆ-ರಫ್ತು ವಹಿವಾಟಿನ ದಾಖಲೆ ಸಿಕ್ಕಿತ್ತು. ಹಾಗೆಯೇ ಕಳೆದ ಮಾರ್ಚ್‌ನಲ್ಲಿ ಅಕ್ರಮವಾಗಿ ಬೇಲೇಕೇರಿ ಬಂದರಿಗೆ ಬರುತ್ತಿದ್ದ 99 ಅದಿರು ಲಾರಿಗಳನ್ನು ಸೀಜ್ ಮಾಡಲಾಗಿತ್ತು. ಆಗಲೂ ಮತ್ತೊಂದಿಷ್ಟು ನಕಲಿ ದಾಖಲೆ ಸಿಕ್ಕಿತ್ತು. ಇದೆಲ್ಲ ಬೇಲೇಕೇರಿಯ ಡಜನ್ ರಫ್ತುದಾರ ರೌಡಿಗಳು ಕೋಟ್ಯಂತರ ರೂ.ಗಳ ಲಕ್ಷಾಂತರ ಟನ್ ಅದಿರನ್ನು ವಿದೇಶಕ್ಕೆ ಕಳಿಸಿರುವ ಕಳ್ಳ ಕತೆ ಹೇಳುತ್ತಿದ್ದವು.



ಪಾಲೇಮಾರ್

ಡಿಸಿಎಫ್ ಗೋಕುಲ್ ಗೂಸಾ

ನಲ್ವತ್ತು ಗೋಣಿಚೀಲದಲ್ಲಿದ್ದ ಸಿಡಿ-ನಕಲಿ ದಾಖಲೆ-ಸಾಗಾಣಿಕಾ ಪರ್ಮಿಟ್‌ಗಳೆಲ್ಲ ಬೇಲೇಕೇರಿ ಮತ್ತು ಕಾರವಾರ ಬಂದರಿನಲ್ಲಿ ಅಕ್ರಮ ಅದಿರು ದಾಸ್ತಾನಿರುವುದನ್ನು ಸಾರಿಸಾರಿ ಹೇಳುತ್ತಿದ್ದವು. ಈ ಅಕ್ರಮ, ಅದಿರು ದಾಸ್ತಾನಿನ ಬಗ್ಗೆ ತನಿಖೆ ನಡೆಸಿ ಸೀಜ್ ಮಾಡಲು ಲೋಕಾಯುಕ್ತರು ಕಾರವಾರದ ಡಿಸಿಎಫ್ ಆರ್. ಗೋಕುಲ್‌ಗೆ ಆದೇಶಿಸಿದರು. ದಕ್ಷ-ನಿಷ್ಠುರ ಅಧಿಕಾರಿ ಗೋಕುಲ್ ಯಾವ ಮುಲಾಜು-ಆಮಿಷಕ್ಕೂ ಬಲಿ ಬೀಳದೆ ಬೇಲೇಕೇರಿ ಬಂದರಿನ ಮೇಲೆ ರೇಡು ಬಿದ್ದರು. ಅಂಕೋಲೆ ನ್ಯಾಯಾಲಯದ ಅನುಮತಿ ಪಡೆದು ಲಕ್ಷಲಕ್ಷ ಟನ್ ಅದಿರನ್ನು ಗೋಕುಲ್‌ನ ಅರಣ್ಯ ಅಧಿಕಾರಿಗಳ ತಂಡ ಮುಟ್ಟುಗೋಲು ಹಾಕಿಕೊಂಡಿತು.



ಗೋಕುಲ್‌ರ ಕಟ್ಟುನಿಟ್ಟಿನ ಕ್ರಮದಿಂದ ಎಲ್ಲವನ್ನು ಹಣದಿಂದ ಖರೀದಿಸಿ ನಖರಾ ಮಾಡಿ ಮೆರೆಯುತ್ತಿದ್ದ ಬೇಲೇಕೇರಿಯ ಎಕ್ಸ್‌ಪೋರ್ಟರ್ಸ್ ಮಾಫಿಯಾ ತತ್ತರಿಸಿಹೋಯ್ತು. ಗೋಕುಲರನ್ನು ಬಗ್ಗಿಸಲು ಥರಥರದ ಟ್ಯಾಕ್ಟೀಸ್ ಮಾಡಿತು. ಇದ್ಯಾವುದಕ್ಕೂ ಗೋಕುಲ್ ಬಗ್ಗದಿದ್ದಾಗ 10 ಮಂದಿ ಕಳ್ಳ ಅದಿರು ಸಾಗಾಣಿಕೆದಾರರು ಹೈಕೋರ್ಟಿನ ಹಸಿರು ಬೆಂಚ್ ಮುಂದೆ ಅರ್ಜಿ ಸಲ್ಲಿಸಿದರು. ಈ ಅದಿರು ಸಾಗಾಣಿಕೆಗೆ ಅನುಮತಿ ಕೊಡುವಂತೆ ಕೇಳಿದರು. ಮುಂಗಾರು ಶುರುವಾದರೆ ಅದಿರು ನೀರು ಪಾಲಾಗುತ್ತಾದೆಂದು ವಾದಿಸಿದ್ದರು.

ಈ ಪ್ರಕರಣದಲ್ಲಿ ಪ್ರತ್ಯೇಕ ನ್ಯಾಯವಾದಿಯನ್ನು ನೇಮಿಸುವಂತೆ ನ್ಯಾ. ಸಂತೋಷ್ ಹೆಗಡೆ ಅಡ್ವೊಕೇಟ್ ಜನರಲ್‌ಗೆ ಪತ್ರವನ್ನು ಬರೆದರು. ನ್ಯಾಯಾಲಯ ಅದಿರು ಸಾಗಾಣಿಕೆಗೆ ಅವಕಾಶ ಕೊಡಲಿಲ್ಲ. ಅಷ್ಟೇ ಅಲ್ಲ; ಈ ಬಾರಿ ಬೇಲೇಕೇರಿ ಬಂದರು ಏರಿಯಾದಲ್ಲಿ ಮುಂಗಾರು ತಡವಾಗೇ ಪ್ರವೇಶಿಸಿತ್ತು, ಕಳ್ಳ ಅದಿರು ಖದೀಮ ರಫ್ತುದಾರರ ಕೈಗೆ ಸಿಗಲೇ ಇಲ್ಲ.

ಲೂಟ್ ಮಾರ್

ಆಗ ಈ ಚೋರರು ಮೊರೆಹೋಗಿದ್ದು ಅದಿರು ಅವ್ಯವಹಾರದ ಸೂತ್ರದಾರ ಮಂತ್ರಿಗೆ! ಗಣಿ ಮಾಫಿಯಾದ ದೊರೆ ಜನಾರ್ದನ್ ರೆಡ್ಡಿಯ ಅತ್ಯಾಪ್ತ ಸತೀಶ್ ಸೈಲ್ ಈ ಅಕ್ರಮ ಅದಿರು ದಾಸ್ತಾನುದಾರರ ಗ್ಯಾಂಗ್‌ನಲ್ಲಿದ್ದ. ಈತನೇ ಮುಂದಾಗಿ ಅರಣ್ಯಾಧಿಕಾರಿ ಗೋಕುಲ್ ಮುಟ್ಟುಗೋಲು ಹಾಕಿಕೊಂಡಿದ್ದ ಅದಿರಿಗೆ "ಮೋಕ್ಷ" ಕಾಣಿಸಲು ರೆಡ್ಡಿ ಬಳಿ ಓಡಾಡತೊಡಗಿದ. ಬೆಂಗಳೂರಿನ ವಿಧಾನ ಸೌಧವನ್ನೇ ನಿಯಂತ್ರಿಸುವ-ಸಿಎಂ ಯಡ್ಡಿಯನ್ನು ಕಿರುಬೆರಳಿನಲ್ಲಿ ಕುಣಿಸುವ ರೆಡ್ಡಿಗಳಿಂದ ಅಕ್ರಮ ಅದಿರು ದಾಸ್ತಾನುದಾರರಿಗೆ ಅದೇನು ಅಭಯ ಸಿಕ್ಕಿತೋ ಏನೋ? ಹಾಡುಹಗಲೇ ಬರೋಬ್ಬರಿ 6 ದಶಲಕ್ಷ ಟನ್ ಅದಿರು ಹಡಗೇರಿ ಚೀನಾ ಮತ್ತು ಇಂಡೋನೇಷಿಯಾಕ್ಕೆ ರಫ್ತಾಗಿ ಹೋಯ್ತು.

ಬಂದರು-ಕಸ್ಟಮ್ಸ್ ಮತ್ತು ಜಿಲ್ಲಾ ಎಸ್ಪಿ ರಮಣ ಗುಪ್ತರ ಕಣ್ಣೆದುರೇ ಈ ಕಳ್ಳ ಸಾಗಾಣೆ ನಡೆದಿತ್ತು. ಈ ಅಧಿಕಾರಿಗಳೆಲ್ಲ ಸರ್ಕಾರದ ಸೂತ್ರಧಾರ ಮಂತ್ರಿಗಳಿಬ್ಬರ ಬಾಯ್ಮಾತಿನ ಆಜ್ಞೆಗೆ ಅಂಜಿ ಕಳ್ಳತನ ಕಂಡೂಕಾಣದಂತಿದ್ದರು!

ಆ ರಹಸ್ಯ ಕಟ್ಟಾಜ್ಞೆಯ ಖದರೇ ಹಾಗಿತ್ತು ಬಿಡಿ!! ಆದರೆ ಡಿಸಿಎಫ್ ಗೋಕುಲ್ 250 ಕೋಟಿ ರೂಪಾಯಿಗಳ ಅದಿರನ್ನು ಕದ್ದು ವಿದೇಶಕ್ಕೆ ಸಾಗಾಟ ಮಾಡಿರುವುದು ಖಾತ್ರಿಯಾಗುತ್ತಿದ್ದಂತೆ ಕಾನೂನಿನ ಖಡ್ಗ ಕೈಗೆತ್ತಿಕೊಂಡೇಬಿಟ್ಟರು.

ಕ್ರಿಮಿನಲ್ ಕೇಸ್

ಸೀಜ್ ಮಾಡಲಾಗಿದ್ದ 8.5 ದಶಲಕ್ಷ ಟನ್ ಅದರಿನಲ್ಲಿ 6 ದಶಲಕ್ಷ ಟನ್ ಕದ್ದು ಸಾಗಿಸಿದ್ದ 11 ರಫ್ತುದಾರರನ್ನು ಗೋಕುಲ್ ಪತ್ತೆಹಚ್ಚಿ ಅವರ ಮೇಲೆ ಕ್ರಿಮಿನಲ್ ಕೇಸು ಹಾಕಿದರು. ಕೋರ್ಟ್ ಆದೇಶದಂತೆ ಈ ಮುಟ್ಟುಗೋಲು ಮಾಲು ತಾಬಾ ಪಡೆದಿದ್ದ ಪೋರ್ಟ್ ಸಂರಕ್ಷಣಾಧಿಕಾರಿ ಮಹೇಶ್ ಬಿಲಿಯೆ ಮೇಲೂ ಕೇಸ್ ಬಿತ್ತು. ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿಯ ಸತೀಶ್ ಸೈಲ್, ಅದಾನಿ ಕಂಪೆನಿಯ ಶುಕ್ಲಾ, ಸಾಲಗಾಂವ್ಕರ್ ಕಂಪನಿಯ ಆರ್.ವಿ. ನಾಯಕ್, ಐಪಿಎಲ್ ಕಂಪನಿಯ ಎಸ್. ರವಿ, ಆಶಾಪುರ ಕಂಪನಿಯ ವೈ.ಜಿ. ಅಹ್ಮದ್, ಬಿಜೆಎಸ್ ಕಂಪನಿಯ ಮಂಗಲದಾಸ ಕಾಮತ್, ದೊಡ್ಡಣ್ಣವರ್ ಕಂಪನಿಯ ಅಮರ ಮಧುಕರ್ ಸರ್ನೇಬಾತ್, ಲಾಲ್‌ಮಹಲ್


▶▶ 12

ಅದಿರು ಕಳ್ಳರು ಸೇಫ್!

ಲೋಕಾಯುಕ್ತ ಸಂತೋಷ್ ಹೆಗಡೆ 'ವ್ಯರ್ಥ ಹುದ್ದೆ'ಗೆ ರಾಜೀನಾಮೆ ಬಿಸಾಕುವ ಪತ್ರಿಕಾಗೋಷ್ಠಿಯಲ್ಲಿ ಹೆಚ್ಚು ಒತ್ತು ಕೊಟ್ಟು ಹೇಳಿದ್ದು ಬೇಲೇಕೇರಿ ಬಂದರಿನಲ್ಲಿ ಸರ್ಕಾರಿ ಕೃಪಾಶೀರ್ವಾದದಲ್ಲಿ ನಡೆದಿರುವ 250 ಕೋಟಿ ಅದಿರು ಕಳ್ಳತನದ ಕಥೆ. ಲೋಕಾಯುಕ್ತರೇ ಬೇಲೇಕೇರಿ ಬಂದರಿನ ಭಾನಗಡಿಗೆ ನೊಂದು ರಾಜೀನಾಮೆ ನೀಡಿದರೂ ಈ ಹಗರಣದ ಕಳ್ಳರು ಮಾತ್ರ ಇವತ್ತಿಗೂ ಸುರಕ್ಷಿತವಾಗಿದ್ದಾರೆ. ಸಂಬಂಧಿಸಿದವರಿಗೆಲ್ಲಾ ಬರೋಬ್ಬರಿ 50 ಕೋಟಿ ರೂ. ಹಂಚಿ ಸೇಫರ್ ಸೈಡ್ ಸೇರಿರುವ ಈ ಖದೀಮರನ್ನು ಬಂಧಿಸುವ ತಾಕತ್ತು ಅದೆಲ್ಲಿಂದ ಬರಬೇಕು ಪೊಲೀಸ್ ಅಧಿಕಾರಿ ರಮಣ್ ಗುಪ್ತಾರಿಗೆ, ಪಾಪ!

ಕಳ್ಳರೊಂದಿಗೆ ಬೇಲೇಕೇರಿ ಬಂದರಿನಲ್ಲಿ 'ಜೊತೆಯಲಿ...ಜೊತೆಜೊತೆಯಲಿ' ಎನ್ನುತ್ತಾ ಹಾಡಿ ಕುಣಿದ ಬಂದರು ಮಂತ್ರಿ ಪಾಲೇಮಾರ್ ತನ್ನ ಇಲಾಖೆಯ ಬಂದರು ಸಂರಕ್ಷಣಾಧಿಕಾರಿಯ ಮಹೇಶ್ ಬಿಲೆಯೇ ಎಂಬ ಸಣ್ಣ ಇಲಿಯನ್ನು ಸಸ್ಪೆಂಡ್ ಮಾಡಿ ಹೋಗಿದ್ದಾರೆ. ಕಾನೂನುಬದ್ಧವಾಗಿ ರಫ್ತುದಾರ ರೌಡಿಗಳ ಮೇಲೆ ಕೇಸು ಜಡಿದ ದಕ್ಷ ಅರಣ್ಯಾಧಿಕಾರಿ ಅಮಾನತ್ತಿಗೆ ಪಾಲೇಮಾರ್ ರೆಡ್ಡೀಸ್‌ಗಳ ಕಟ್ಟಿಕೊಂಡು 11 ಅದಿರು ಚೋರರು ಪ್ರಯತ್ನ ಹಾಕುತ್ತಿದ್ದಾರೆ.

ಆದರೆ ಇತ್ತ ಲೋಕಾಯುಕ್ತದ ಉರುಳು ಬಿಗಿಯಾಗುತ್ತಿದೆ. ಕಳವಾದ ಅದಿರಿನ ಮೌಲ್ಯಮಾಪನಕ್ಕೆ ಲೋಕಾಯುಕ್ತರು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರಿಗೆ ಸೂಚಿಸಿದ್ದರು. ಅದರಂತೆ ತಂತ್ರಜ್ಞರ ತಂಡವೊಂದು ಬೇಲೇಕೇರಿಗೆ ಬಂದು ಅದಿರುಕಳ್ಳ ಕಂಪನಿಗಳ ಅಸಹಕಾರದ ನಡುವೆಯೂ ಮೌಲ್ಯಮಾಪನ ನಡೆಸಿದೆ. ಅದಿರು ನಾಪತ್ತೆಯಾಗಿರುವುದು ಈಗ ಖಾತರಿಯೂ ಆಗಿದೆ.



ಹಾಗೆಯೇ ಐಬಿಎಂ- ಇಂಡಿಯನ್ ಬ್ಯೂರೋ ಆಫ್ ಮೈನ್ಸ್- ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದೆ. ರಾಜ್ಯ ಸರ್ಕಾರದ ಮಂತ್ರಿ, ಅಧಿಕಾರಿಗಳ ಕುಮ್ಮಕ್ಕಿನಿಂದಲೇ 250 ಕೋಟಿ ರೂ. ಗಳ ಅದಿರು ಕಳ್ಳಸಾಗಾಣಿಕೆ ಆಗಿರುವುದು ಕೇಂದ್ರ ಸರ್ಕಾರದ ಗಮನಕ್ಕೂ ಬಂದಿದೆ. ಹೀಗಾಗಿ ಐಬಿಎಂ ಸ್ವತಂತ್ರ ತನಿಖೆ ನಡೆಸುವ ಚಿಂತನೆಯನ್ನೂ ನಡೆಸಿದೆ. ಒಟ್ಟಿನಲ್ಲಿ ಕುಖ್ಯಾತ ಬೇಲೇಕೇರಿ ಬಂದರಿನ ಅದಿರು ಮಾಫಿಯಾದ ಭಾನಗಡಿ ದಿನಕ್ಕೊಂದು ಆಯಾಮ ಪಡೆಯುತ್ತಿದೆ.



ಕೊಳ್ಳೇಗಾಲ ಧರ್ಮಪಾಲ್ ನೇಗಿಯೆಂಬ ದಗಾಕೋರ!

ಇದು ಖಾಕಿ ಖದರನ್ನ ಕರ್ಮಕಾಂಡಗಳಿಗೆ ಉಪಯೋಗಿಸುತ್ತಿರುವ ಧರ್ಮಪಾಲ್ ನೇಗಿಯೆಂಬ ಮಾಜಿ ಪೊಲೀಸ್ ಅಧಿಕಾರಿಯ ಭೂಗಳವು ವೃತ್ತಾಂತ. ಕೊಳ್ಳೇಗಾಲ ತಾಲ್ಲೂಕಿನ ಜಾಗೇರಿಯ ಫಲವತ್ತು ನೆಲ ಕಳ್ಳಕಾಕರ ಪಾಲಾಗುತ್ತಿರುವ ಕರುಣಾಜನಕ ಕಥೆ ಹಾಗೂ ತಲತಲಾಂತರಗಳಿಂದ ಕೃಷಿ ಮಾಡುತ್ತಿದ್ದರೂ ತುಂಡು ನೆಲಕ್ಕೆ ದಾಖಲೆ ದಕ್ಕಿಸಿಕೊಳ್ಳಲಾಗದೆ ಅತಂತ್ರರಾಗಿರುವ ಬಡರೈತರ ಕಣ್ಣೀರಗಾಥೆ.

ಈಗ್ಗೆ ಎಂಟು ತಿಂಗಳ ಹಿಂದೆ ಎಡಿಜಿ ಪ್ರಿಜನ್ಸ್ ಹುದ್ದೆಯಿಂದ ನಿವೃತ್ತನಾಗಿರುವ ಧರ್ಮಪಾಲ್ ನೇಗಿ ಅಧಿಕಾರಾವಧಿಯಲ್ಲೇ ನಡೆಸಿದ ಭಾನಗಡಿಯಿದು. 1994ರ



ಆಗಸ್ಟ್ 12ರಂದು ನೇಗಿ ಸಾಹೇಬ ತನ್ನ ಹೆಂಡತಿ ಹೀರಾ ಹೆಸರಲ್ಲಿ ಜಾಗೇರಿಯಲ್ಲಿ ಜಮೀನು ಖರೀದಿಸಿದ್ದ. ತಮಿಳು ಮೂಲದ ಲಕ್ಷ್ಮಯ್ಯ ಎಂಬುವವರ ಪುತ್ರ ಭಕ್ತವತ್ಸಲಂ ಎಂಬಾತನಿಂದ 30 ಎಕರೆ ಜಮೀನನ್ನು 3 ಲಕ್ಷಕ್ಕೆ ಖರೀದಿಸಿದ ನೇಗಿ, ಅದರ ಪಕ್ಕದಲ್ಲಿನ ಸರ್ಕಾರಿ ಜಾಗಕ್ಕೆ ತಣ್ಣಗೆ ಬೇಲಿ ಸುತ್ತತೊಡಗಿದ. ಈ ಸಾಹಸದಿಂದಾಗಿಯೇ 30 ಎಕರೆ ಭೂಮಿ ನೂರೂ ಚಿಲ್ಲರೆ ಎಕರೆಯಾಗಿ 'ಅಭಿವೃದ್ಧಿ' ಹೊಂದಿದೆ!

ನೇಗಿ ಈ ಪರಿ ಸರ್ಕಾರಿ ಜಮೀನು ನುಂಗುತ್ತಿದ್ದರೂ ಕಂದಾಯ ಇಲಾಖೆಯಾಗಲೀ, ಅರಣ್ಯ ಇಲಾಖೆಯ ಅಧಿಕಾರಿಗಳಾಗಲಿ ತುಟಿಪಿಟಿಕ್ಕೆನ್ನಲಿಲ್ಲ. ಅದಕ್ಕೆ ಕಾರಣ ನೇಗಿಯ ಪೊಲೀಸ್ ಖದರ್ ಮತ್ತು ಲಾಭ ನಷ್ಟಗಳ ಮುಲಾಜು. ಇದೆಲ್ಲದರಿಂದಾಗಿ ಈ ಅಕ್ರಮ ಜಮೀನಿನಲ್ಲಿ 80 ಚದರ ವ್ಯಾಪ್ತಿಯಲ್ಲಿ ಬೃಹತ್ ಬಂಗಲೆ ತಲೆಯೆತ್ತಿದೆ. ತೆಂಗು, ಬಾಳೆ, ಅಡಿಕೆ, ಕಬ್ಬು ಬೆಳೆಗಳಿಗೆ ಪರವಾನಗಿ ಇಲ್ಲದೇನೆ ಪಕ್ಕದ ಕಾವೇರಿ ನದಿಯಿಂದ ನೀರೆತ್ತಲಾಗುತ್ತಿದೆ. ಇಂಥ ಕಳ್ಳ ಜಮೀನಿನ ಸುತ್ತ ಸೋಲಾರ್ ಬೇಲಿ ಸುತ್ತಿರುವ ನೇಗಿ ಸಾರ್ವಜನಿಕರ ಪಾಲಿಗೆ ಅಧಿಕೃತವಾಗಿಯೇ ಪ್ರವೇಶ ನಿಷೇಧಿಸಿದ್ದಾನೆ.

ಜಾಗೇರಿಯೆಂಬ ನೆಲದ ನಸೀಬೇ ಈ ರೀತಿಯದ್ದು. ಇದೀಗಲೇ ಇದರ ಒಡಲು ಕಳ್ಳಕಾಕರ ಪಾಲಾಗಿಹೋಗಿದೆ. ಇಂಥ ಭೂಕೊಳ್ಳೆಗೆ ಕಾರಣನಾಗಿರುವಾತ ತಮಿಳುನಾಡಿನ ಸಿಂಗಾನಲ್ಲೂರು ಮೂಲದ ಭಕ್ತವತ್ಸಲಂ ಎಂಬಾತ. ಹಿಂದೆ ರಾಜರ ಕಾಲದಲ್ಲಿ ಜಾಗೀರ್‌ದಾರ್‌ಗಳ ಮೂಲಕ ವ್ಯವಸಾಯ ಮಾಡಿಸಲಾಗುತ್ತಿತ್ತಲ್ಲ? ನಂತರ ರಾಜದರ್ಬಾರು ಮುಗಿದ ಬಳಿಕ ಕೆಲ ಪ್ರದೇಶವನ್ನು ಕೃಷಿ ಮಾಡುತ್ತಿದ್ದ ಕೆಲ ರೈತರಿಗೆ ಬಿಟ್ಟುಕೊಡಲಾಗಿತ್ತು. ಆದರೆ ಇವತ್ತಿಗೂ ಒಬ್ಬನೇ ಒಬ್ಬ ರೈತನಿಗೆ ಸಾಗುವಳಿ ಚೀಟಿ ದೊರಕಿಲ್ಲ.


ಆದರೆ ಈ ಭಕ್ತವತ್ಸಲಂ ತಾನು ಜಹಗೀರ್‌ದಾರರ ವಂಶಸ್ಥನೆಂದೂ, ಇಲ್ಲಿನ ಕೆಲಭಾಗ ತನಗೇ ಸೇರಬೇಕೆಂದೂ ಹೈಕೋರ್ಟ್ ಮೆಟ್ಟಿಲೇರಿ ಒಂದಷ್ಟು ಜಮೀನನ್ನು ತನ್ನ ಹೆಸರಿಗೆ ಮಾಡಿಕೊಂಡ. ನಂತರ ಅದರಲ್ಲಿ ತುಂಡು-ತುಂಡನ್ನು ಬೇರೆಯವರಿಗೆ ಮಾರತೊಡಗಿದ. ಹಾಗೆ ಖರೀದಿಸಿದವರೆಲ್ಲ ಯಥೇಚ್ಛವಾಗಿ ಸರ್ಕಾರಿ ಜಮೀನಿಗೆ ಬೇಲಿ ಸುತ್ತುವ ಅವಕಾಶಗಳಿದ್ದವು. ಸರ್ವೆ ನಂ.174ರಲ್ಲಿರುವ ಈ ಪ್ರದೇಶ 12,260 ಎಕರೆಯಿದೆ. ಅದರಲ್ಲಿ ಬಹುಪಾಲು ನೇಗಿಯಂಥ ಕಳ್ಳಕಾಕರ ಪಾಲಾಗಿದೆ.

ಇಂಥ ಲಾಭದಾಯಕ ನೆಲಕ್ಕೆ ನಾಲಿಗೆಯಿಟ್ಟ ನೇಗಿ ಪಕ್ಕಾ ಅಕ್ರಮಗಳನ್ನೇ ನಡೆಸುತ್ತಾ ಬಂದ. ಇದನ್ನು ಮುಚ್ಚಿಹಾಕಲು ಖಾಕಿ ಖದರು ಬಳಸತೊಡಗಿದ. ಕೊಳ್ಳೇಗಾಲ ಪೊಲೀಸರನ್ನು ರಕ್ಷಣೆಯ ಹೆಸರಲ್ಲಿ ಕರೆಸಿಕೊಂಡ ನೇಗಿ ಅವರಿಂದ ಹಸು, ಕುರಿಗಳನ್ನು ಮೇಯಿಸುವುದರಿಂದ ಮೊದಲ್ಗೊಂಡು ಹೊಲ ಉಳುವವರೆಗೆ ಎಲ್ಲಾ ಚಾಕರಿಗಳನ್ನು ಮಾಡಿಸಿಕೊಂಡ. ಕೆಲ ಪೊಲೀಸರು ಇದರಿಂದ ಮುಜುಗರಕ್ಕೊಳಗಾದರೆ, ಮತ್ತೆ ಕೆಲವರು ನೇಗಿಯ ಪವರ್ ಬಳಸಿ ಹಡೆಬಿಟ್ಟಿ ಹಣ ಹೊಡೆಯುವ ಉದ್ದೇಶದಿಂದ ಭಯಭಕ್ತಿಯಿಂದ ಕೆಲಸ ಮಾಡತೊಡಗಿದರು. ಅಂತೂ ಎಸಿಪಿ ರವಿಕಾಂತೇಗೌಡರು ಈ ಅಸಹ್ಯಕ್ಕೊಂದು ಅಂತ್ಯ ದೊರಕಿಸಿದರಾದರೂ ಇಂದಿಗೂ ಅದು ಮುಂದುವರೆದಿರುವುದು ಸತ್ಯ.

ಇಂಥ ನೇಗಿ ಸಾಹೇಬ ಉನ್ನತ ಪೊಲೀಸ್ ಅಧಿಕಾರಿಯಾಗಿದ್ದಾಗ ಹೇಗಿದ್ದನೋ ಎಂಬ ಕುತೂಹಲದಿಂದ ತಲಾಶ್‌ಗಿಳಿದರೆ ಹಲವಾರು ನಾಚಿಕೆಗೇಡಿನ ವಿಚಾರಗಳು, ಬರೆಯಲೂ ಮುಜುಗರವಾಗುವಂಥ ಸಂಗತಿಗಳೇ ಎದುರಾಗುತ್ತವೆ. ಖಾಕಿಯನ್ನು ತನ್ನ ಖಯಾಲಿಗಳಿಗೆ ತಕ್ಕಂತೆ ಉಪಯೋಗಿಸುತ್ತಾ ಬಂದ ನೇಗಿ ಹಣ ಹೊಡೆಯುವ ಏಕಮಾತ್ರ ಉದ್ದೇಶದೊಂದಿಗೆ 'ಕರ್ತವ್ಯ' ನಿರ್ವಹಿಸಿದಾತ!

ಹೆಚ್ಚಾಗಿ ಉನ್ನತ ಹುದ್ದೆಯಲ್ಲಿರುವ ಭ್ರಷ್ಟ ಪೊಲೀಸ್ ಅಧಿಕಾರಿಗಳು ದಂಧೆ ನಡೆಸಲು ಮೀಡಿಯೇಟರು ಗಳನ್ನಿಟ್ಟುಕೊಳ್ಳುತ್ತಾರೆ. ಆದರೆ ನೇಗಿ ಯಾವುದೇ ಮುಜುಗರಗಳಿಲ್ಲದೆ ನೇರವಾಗಿ ಡೀಲು ಕುದುರಿಸುವುದರಲ್ಲಿ ಎತ್ತಿದ ಕೈಯಾಗಿದ್ದ! ಇಂಥ ನೇಗಿ 2001-02ರ ಹೊತ್ತಿಗೆ ಪೊಲೀಸ್ ಮಹಾನಿರ್ದೇಶಕರ ಕಚೇರಿಗೆ ಡಿಐಜಿ ಆಗಿ ನೇಮಕಗೊಂಡ. ಇದು ಈತನ ಪಾಲಿಗೆ ಹಣ ಹೊಡೆಯುವ ಹೆದ್ದಾರಿಯಾಗಿ ಬದಲಾಯ್ತು.

ಸಬ್‌ಇನ್ಸ್‌ಪೆಕ್ಟರ್‌ಗಳ ನೇಮಕಾತಿ, ವರ್ಗಾವಣೆಗಳೆಲ್ಲ ನೇಗಿಯ ಅಂಡರ್‌ನಲ್ಲೇ ಬರುತ್ತವಾದುದರಿಂದ, ದೊಡ್ಡ ಮಟ್ಟದಲ್ಲಿ ದಂಧೆ ನಡೆಸಿದ. ಈ ಅವಧಿಯಲ್ಲಿ ಎರಡು ಬಾರಿ ಎಸ್‌ಐಗಳ ನೇಮಕಾತಿ ನಡೆಸಿ, ಹೆಚ್ಚುಕಡಿಮೆ 500 ಮಂದಿಯನ್ನು ನೇಮಿಸಿಕೊಂಡ. ಈ ಪೊಲೀಸ್ ನೇಮಕಾತಿ ಪರೀಕ್ಷೆಗೆ ಸಂಬಂಧಿಸಿದಂತೆ ಪ್ರಶ್ನೆಪತ್ರಿಕೆ ತಯಾರಿಸುವ ಅಧಿಕಾರವೂ ಡಿಐಜಿ ಹುದ್ದೆಯ ಅಡಿಯಲ್ಲೇ ಬರುತ್ತಿತ್ತು.



ನೇಗಿ ಅದರಲ್ಲೂ ಗೋಲ್‌ಮಾಲ್ ಸೃಷ್ಟಿಸಿ ಒಂದು ಹುದ್ದೆಗೆ 10ರಿಂದ 20 ಲಕ್ಷ ಫಿಕ್ಸ್ ಮಾಡಿ ಭರ್ಜರಿಯಾಗಿ ಕಮಾಯಿಸಿದ.

ನಂತರ ಐಜಿಯಾಗಿ ಮೈಸೂರಿಗೆ ವರ್ಗಾವಣೆಗೊಂಡ ನೇಗಿ ಅಲ್ಲೊಂದಷ್ಟು ಅಪರಾತಪರಾ ನಡೆಸಿ ಮತ್ತೆ ಎಡಿಜಿಯಾಗಿ ನೇಮಕಗೊಂಡ. ಇಷ್ಟೆಲ್ಲಾ ಆದ ಬಳಿಕ ಎಡಿಜಿ ಪ್ರಿಜನ್ಸ್ ಆಗಿ ನೇಮಕಗೊಂಡ. ಇಡೀ ರಾಜ್ಯದ ಬಂಧಿಖಾನೆಗಳ ದೇಖಾರೇಖಿ, ಉಸ್ತುವಾರಿಗಳೆಲ್ಲ ಇವನ ಇಷಾರೆಯ ಮೇರೆಗೆ ನಡೆಯುವಂತಾಯಿತು. ತನ್ಮೂಲಕ ರಾಜ್ಯದ ಬಂಧಿಖಾನೆ ವ್ಯವಸ್ಥೆಯೇ ಬರ್ಬಾದಾಗಿ ಹೋಯಿತು.

ಜೈಲುಗಳಿಗೆ ಸರಬರಾಜಾಗುವ ಅಕ್ಕಿ, ಊಟ, ಮಾ… ಎಣ್ಣೆ, ಸೋಪು ಮುಂತಾದವುಗಳೆಲ್ಲ ನೇಗಿಯ ಸುಪ… ಗೊಳಪಡುತ್ತಿದ್ದವು. ಇದನ್ನೇ ಲಾಭದಾಯಕ ದಂಧೆಯನ್ನಾ… ಕೊಂಡ ನೇಗಿ ಪರಿವರ್ತನೆಯ ಕೇಂದ್ರದಂತಿರಬೇಕ… ಜೈಲುಗಳನ್ನು ವೈಭೋಗದ ಅಡ್ಡೆಗಳಾಗಿ ಮಾರ್ಪಡಿಸಿ… ದಕಾಯಿತರು, ಕಳ್ಳಕಾಕರಿಗೆಲ್ಲಾ ಜೈಲು ಆಪರೇಟ… ಸೆಂಟರ್‌ನಂತಾಯ್ತು. ಇಂತಿಷ್ಟು ಅಂತ ಕಕ್ಕಿದರೆ ಮೊಬೈ… ನಿಂದ ಮೊದಲ್ಗೊಂಡು, ಹೆಂಡದವರೆಗೆ ಎಲ್ಲಾ ಕುಂತಲ್ಲಿ… ಸಿಗುವ ವ್ಯವಸ್ಥೆಯನ್ನೂ ನೇಗಿ ಸಾಹೇಬ ನೆರವೇರಿಸಿ… ಇದು ಯಾವ ರೀತಿ ವಿಕೋಪಕ್ಕೆ ಹೋಯಿತೆಂದ… ಕೋಲಾರ ಜೈಲಲ್ಲಿ ಕೈದಿಗಳು ಬಾಟಲು ಹಿಡಿ… ಮತ್ತರಾಗಿದ್ದ ವಿಚಾರ ರಾಜ್ಯಾದ್ಯಂತ ಸುದ್ದಿಯಾಗಿತ್ತು… ಜೈಲುಗಳಲ್ಲೂ ನೇಗಿಯ ಶಿಷ್ಯಂದಿರೇ ಅಧಿಕಾರಿಗಳಾಗಿ… ಕೊಂಡು ಒಂದಿಡೀ ವ್ಯವಸ್ಥೆಯನ್ನೇ ಹಾಳುಗೆಡವಿದ… ಅಂಥ ಶಿಷ್ಯಪಡೆಯಲ್ಲಿ ಕಳೆದ ವರ್ಷ ಕಚೇರಿಯ… ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡ ಜೈಲ… ಅಬ್ಬಾಯಿ ಕೂಡಾ ಸೇರಿದ್ದ.

ಅಧಿಕಾರಾವಧಿಯುಗುಂಟ ಯಾವ ರಿ… ತೆಗೆದುಕೊಳ್ಳದೆ ತನ್ಮಯನಾಗಿ ಮೇಯ್ದುಕೊಂ… ನೇಗಿ ತನ್ನ ಸಹೋದ್ಯೋಗಿಗಳಿಗೂ ಕಾಟ ಕೊ… ಉದಾಹರಣೆಗಳಿಲ್ಲ. ಒಳ್ಳೆ ಕೆಲಸಗಳಂತೂ ಈ… ಕಡೆಯಿಂದ ನಡೆದಿಲ್ಲ. ಅಧಿಕಾರಾವಧಿಯಲ್ಲಿ ಸಂಗ… ಸಿದ ಹಡೆಬಿಟ್ಟಿ ದುಡ್ಡನ್ನ ಬೇರೆ ಬೇರೆ ದಂಧೆಗ… ಉಪಯೋಗಿಸಿ ರಿಟೈರ್ಡ್‌ಲೈಫ್ ಅನ್ನು ಚೆಂ… ನಡೆಸುತ್ತಿದ್ದಾನೆ.

ಇಂಥ ನೇಗಿಯ ವೈಭೋಗಕ್ಕೆ ಕೊಳ್ಳೇಗಾಲದ ಜಾ… ರಿಯ ಸರ್ಕಾರಿ ಭೂಮಿ ಬಲಿಯಾಗಿದೆ. ಇಂದಿ… ಈತನ ರಕ್ಷಣೆಗೆ ನೇಮಿಸಲ್ಪಟ್ಟ ಅಧಿಕಾರಿಗಳು … ಕೂಲಿಯಾಳುಗಳಂತೆ ಕೆಲಸ ಮಾಡುತ್ತಿದ್ದಾರೆ. ಲಾಗಾ… ನಿಂದಲೂ ಕೃಷಿ ಮಾಡುತ್ತಿರುವ ಬಡರೈತರನ್ನು ದಾ… ಕೊಡದೆ ಸತಾಯಿಸುತ್ತಿರುವ ಅಧಿಕಾರಿಗಳು ನೇಗಿ… ಭೂಗಳವನ್ನು ಕಂಡೂಕಾಣದಂತೆ ತೆಪ್ಪಗಿದ್ದಾರೆ. ಜಾಗೇರಿ… ಇದೀಗ ಉಳಿದಿರುವ ಸರ್ಕಾರಿ ಜಾಗವೂ ನೇಗಿ… ಸೋಲಾರ್ ಬೇಲಿಯ ವ್ಯಾಪ್ತಿಗೊಳಪಡುವ ಮ… ಸಂಬಂಧಿಸಿದವರು ಎಚ್ಚೆತ್ತುಕೊಳ್ಳಬೇಕಿದೆ.

● ಕೊಳ್ಳೇಗಾಲ ಚಿಕ್ಕಮಾಳಿ…

ನಿರ್ಲಜ್ಜ ನೇಗಿ!



ಧರ್ಮಪಾಲ ನೇಗಿಯ ವೃತ್ತಾಂತವನ್ನೆಲ್ಲ ಗಮನಿಸಿದರೆ ಈತನೊಬ್ಬ ಮಹಾಭ್ರಷ್ಟನೆಂಬ ವಿಚಾರ ಮನದಟ್ಟಾಗುತ್ತದೆ. ಆದರೆ ಈತ ತನ್ನ ಅಧಿಕಾರಾವಧಿಯ ಕೆಲ ಸಂದರ್ಭಗಳಲ್ಲಿ ನಡೆದುಕೊಂಡ ರೀತಿಗಳು ನೇಗಿಯನ್ನು ಪರಮ ನಿರ್ಲಜ್ಜನೆಂದು ಸಾಬೀತುಪಡಿಸುತ್ತವೆ!

ಮೂಲತಃ ನೇಗಿ ಮಣ್ಣಿನ ಮಗ(?) ದೇವೇಗೌಡರ ಖಾಸಾ ಶಿಷ್ಯ. ಈತ ತನ್ನ ಅಧಿಕಾರಾವಧಿಯ ತುಂಬ ಕರ್ತವ್ಯದ ಮೇಲಿರಬೇಕಾದ ನಿಷ್ಠೆಯನ್ನೆಲ್ಲಾ ಗೌಡರ ಪಾದಗಳಿಗೆ ಸಮರ್ಪಿಸಿದ್ದೆ ಹೆಚ್ಚು. ಈತನ ಈ ಸ್ವಾಮಿನಿಷ್ಠೆ ಹೇಗಿದೆ ನೋಡಿ. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಗೌಡರು ಪೊಲೀಸರ ಸಭೆ ಕರೆದರೆ ನೇಗಿ ಯೂನಿಫಾರಂ ಹಾಕಿಕೊಂಡೇ ಗೌಡರ ಕಾಲುಮುಟ್ಟಿ ನಮಸ್ಕರಿಸಿ ನೆಲದ ಮೇಲೆ ಕುಳಿತುಕೊಳ್ಳುತ್ತಿದ್ದ! ಸಹೋದ್ಯೋಗಿಗಳು ಎದುರಿಗಿದ್ದಾರೆ, ತಾನೊಬ್ಬ ಪೊಲೀಸ್ ಅಧಿಕಾರಿಯೆಂಬ ಖಬರಿಲ್ಲ… ಈತ ಖುದ್ದು ಗೌಡರೇ 'ಹೇ, ಮ್ಯಾಲೆ ಕೂತ್ಕಳ್ಳಯ್ಯ' ಅಂದರೂ ನೆಲದಿಂದ ಕುಂಡೆ ಕದಲಿಸುತ್ತಿರಲಿಲ್ಲ!

ಮೇಲ್ಕಂಡ ನಿಷ್ಠೆಗೆ ಬದಲಾಗಿ ಕುಮಾರನ ಅವಧಿಯಲ್ಲಿ ಸಾಕಷ್ಟು ದೋಚಿಕೊಂಡನೆಂಬುದು ಬೇರೆ ವಿಚಾ… ಇನ್ನು ಮೈಸೂರಿನಲ್ಲಿ ನಡೆದ ಮತ್ತೊಂದು ಘಟನೆ ಈತನ 'ಪೌರುಷ'ವನ್ನೇ ಅನುಮಾನಿಸುವಂತಿದೆ. ನೇ… ಮೈಸೂರಲ್ಲಿ ಐಜಿ ಆಗಿದ್ದಾಗ ಕನ್ನಡ ರಣಧೀರ ಪಡೆಯ ಆರೆಸ್ಸೆನ್ ಗೌಡ ಎಂಬಾತನೊಂದಿಗೆ ತಕರಾರೆದ್ದಿತ್ತು… ಅದೊಂದು ದಿನ ತೀರಾ ಕಚೇರಿಗೆ ನುಗ್ಗಿದ ಗೌಡ ನೇಗಿಗೆ ಇಟ್ಟಾಡಿಸಿ ಹೊಡೆದಿದ್ದ. ಆದರೆ ನೇಗಿ ಸಾಹೇಬರು ಮಾ… ಚಾಸುಂಡೆ ಸವರಿಕೊಂಡು ಸುಮ್ಮನಾದರು. ಪ್ರಕರಣ ದಾಖಲಿಸುವುದಿರಲಿ, ಹಲ್ಲೆ ನಡೆಸಿದ ಗೌಡನಿಗೊಂದ… ಆವಾಜ್ ಹಾಕುವ ಧೈರ್ಯವನ್ನೂ ನೇಗಿ ಪ್ರದರ್ಶಿಸಲಿಲ್ಲ!

▶▶ 11

ಕಂಪನಿಯ ಪ್ರಮೋದ್ ಶೇಟ್, ಸ್ವಸ್ತಿಕ್ ಸ್ಟೀಲ್ ಕಂಪನಿಯ ವೇಣುಗೋಪಾಲ್, ಲಕ್ಷ್ಮೀ ಮಿನರಲ್ಸ್ ಕಂಪನಿಯ ಜಾವೇದ್ ಕಟಗಿ, ಮೆಟ್ಟಾಂ ಕಂಪನಿಯ ಶಿವಪ್ರಸಾದ್ ವಿರುದ್ಧ ಡಿಸಿಎಫ್ ಕ್ರಿಮಿನಲ್ ಕೇಸು ಹಾಕಿದ್ದರು. ಆದರೆ ಈ ದರೋಡೆಕೋರರ ಮೇಲೆ ಸ್ಥಳೀಯ ಪೊಲೀಸರು ಯಾವ ಕ್ರಮವೂ ಕೈಗೊಳ್ಳಲಿಲ್ಲ. ಎಸ್ಪಿ ರಮಣ ಗುಪ್ತ ಇಲ್ಲಸಲ್ಲದ ಸಬೂಬು ಹೇಳುತ್ತ ಚೋರರ ಬಂಧಿಸದೇ ಕಾಲ ಹಾಕಹತ್ತಿದ್ದರು.

ಇದರಿಂದ ಕೆರಳಿದ ಡಿಸಿಎಫ್ ಗೋಕುಲ್ ನೇರ ಡಿಐಜಿ ಅಜಯ್‌ಕುಮಾರ್ ಸಿಂಗ್ ಸಾಹೇಬರಿಗೇ ಪತ್ರ ಬರೆದರು. ಡಿಸಿಎಫ್‌ರ ನಿಷ್ಠೂರ ಕ್ರಮದಿಂದ ಪೇಚಿಗೆ ಸಿಲುಕಿದ ಅದಿರುಗಳ್ಳರು ಗೋಕುಲರನ್ನೇ ಸಸ್ಪೆಂಡ್ ಮಾಡಿಸಿ ಸೇಡು ತೀರಿಸಿಕೊಳ್ಳುವ, 250 ಕೋಟಿಯ ಅದಿರು ಅವ್ಯವಹಾರವನ್ನು ದಕ್ಕಿಸಿಕೊಳ್ಳುವ ಷಡ್ಯಂತ್ರಕ್ಕೆ ಇಳಿದರು!

ಪಾಲೇಮಾರ್ ಪ್ರವೇಶ

ಬೇಲೇಕೇರಿ ಬಂದರಿನಲ್ಲಿ ನಡೆದ ಅದಿರು ಲೂಟ್‌ಮಾರ್ ಭಾನಗಡಿಯ ತನಿಖೆ-ಗದ್ದಲ ಜೋರಾದ ಹೊತ್ತಿನಲ್ಲೇ ಬಂದರು ಮಂತ್ರಿ ಕೃಷ್ಣ ಪಾಲೇಮಾರ್ "ಪಿಳ್ಳೆ ನೆಪ" ಹೇಳಿಕೊಂಡು ಬಂದಿದ್ದರು. ಕಾರವಾರ-ಬೇಲೇಕೇರಿ ಬಂದರಿನ ಅಭಿವೃದ್ಧಿ, ಇಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಕಣ್ಣಾರೆ ಕಂಡು ಪರಿಹಾರ ಸೂಚಿಸಿ ಎಂದು ಸ್ಥಳೀಯರು ಗೋಗರೆದರೂ ಇತ್ತ ಒಮ್ಮೆಯೂ ಪಾದ ಬೆಳೆಸದ ಮಂತ್ರಿ ಪಾಲೇಮಾರ್ 250 ಕೋಟಿ ಅದಿರು ಸ್ಕ್ಯಾಂಡಲ್ ನಡೆದ ಹೊತ್ತಲ್ಲೇ ಗಡಿಬಿಡಿಯಲ್ಲಿ ಬೇಲೇಕೇರಿಗೆ ಓಡೋಡಿ ಬಂದುಹೋಗಿದ್ದು ದೊಡ್ಡ ಅನುಮಾನ ಮೂಡಿಸಿತ್ತು.



ಪಾಲೇಮಾರ್ ಬೇಲೇಕೇರಿಗೆ ಅದಿರು ಕಳ್ಳ ಸಾಗಾಣಿಕೆದಾರ ಕುಳಗಳ ರಕ್ಷಿಸಲೆಂದೇ ಬಂದಿದ್ದರೆಂಬುದು ಗುಲ್ಲೆದ್ದಿತ್ತು. ಅದೀಗ ನ್ಯಾ. ಸಂತೋಷ್ ಹೆಗಡೆ ರಾಜೀನಾಮೆ ಕೊಡುವಾಗ ಆಡಿದ ಮಾತುಗಳು ನಿಜವೆಂದು ಬಿಂಬಿಸುತ್ತಿದೆ! ತೀರಾ ಮೊನ್ನೆ-ಮೊನ್ನೆ ಬೇಲೇಕೇರಿಗೆ ಪಾಲೇಮಾರ್ ಬಂದಾಗ ಅದಿರುಗಳ್ಳ ಹನ್ನೊಂದು ರಫ್ತುದಾರರೇ ಆತನ ಆಚೀಚೆ ಗಿರಕಿ ಹೊಡೆಯುತ್ತಿದ್ದರು. ಎಲ್ಲ ಮೇಜುವಾನಿಯೂ ಮಾಡಿದ್ದರು. ಈ ಖದೀಮರು ಮಂತ್ರಿಜೀ ಜತೆಗೊಂದು ಗುಪ್ತ ಸಭೆ ಏರ್ಪಡಿಸಿದ್ದರು. ಆ ಸಭೆಗೆ ಡಿಸಿಎಫ್ ಗೋಕುಲರನ್ನು ಸ್ವತಃ ಮಂತ್ರಿ ಪಾಲೇಮಾರನೇ ಬರುವಂತೆ ಹೇಳಿದ್ದ.

ಆದರೆ ಕಳ್ಳರ ಜತೆ ಕಾಣಿಸಿಕೊಳ್ಳಲು ಗೋಕುಲ್ ಸಿದ್ಧರಿರಲಿಲ್ಲ.

ತಾವೇ ಕೇಸು ಮಾಡಿದ ಕಳ್ಳಸಾಗಣೆದಾರರ ಎದುರು ಮಂತ್ರಿಗಳಿಂದ ಬೋಧನೆ ಕೇಳುವುದಕ್ಕೆ ಅದ್ಯಾವ ಸ್ವಾಭಿಮಾನಿ ಅಧಿಕಾರಿ ಹೋಗುತ್ತಾನೆ? ಗೋಕುಲ್‌ಗೆ ಗೊತ್ತಿತ್ತು ಪಾಲೇಮಾರ್ ಅದಿರುಕಳ್ಳರ ವಿರುದ್ಧ ನಿಷ್ಠುರ ಕ್ರಮ ಕೈಬಿಡಲು ತನಗೆ ಪ್ರೆಷರ್ ಹಾಕುತ್ತಾರೆಂದು. ಹಾಗಾಗಿ ಆತ ಪಾಲೇಮಾರನ ಆ ಅನೈತಿಕ ಗೆಟ್ ಟು ಗೆದರ್‌ಗೆ ಬುದ್ಧಿಪೂರ್ವಕವಾಗಿಯೇ ಹೋಗಲಿಲ್ಲ.

ಅಲ್ಲಿ ಪಾಲೇಮಾರ್‌ಗೆ ಸುಮಾರು 15 ಕೋಟಿಯ ಇನಾಮು ಕೊಡಲು ಅದಿರುಕಳ್ಳರು ತಯಾರಿಯೂ ಮಾಡಿಕೊಂಡಿದ್ದರಂತೆ. ಮಂತ್ರಿ- ದೊಡ್ಡ ಅಧಿಕಾರಿಗ… ಕಸ್ಟಮ್ಸ್ ಕಲೆಕ್ಟರ್, ಪೋರ್ಟ್ ಡೈರೆಕ್ಟರ್, ಪೋ… ವರಿಷ್ಠರು ಇನ್ನಿತರ ಪ್ರಮುಖ ಇಲಾಖೆ… ಅಧಿಕಾರಿಗಳಿಗೆಲ್ಲಾ ಈ 250 ಕೋಟಿ ಅದಿರು ಸಾಗಾಣಿಕೆ ಹಗರಣದಲ್ಲಿ ಬರೊಬ್ಬರಿ 50 … ಮೀಸಲಿಡಲಾಗಿದೆ ಎಂಬ ಸುದ್ದಿ ಈಗ ಬೇಲೇಕೇರಿ… ತೇಲಾಡುತ್ತಿದೆ.

ಪೆದ್ದ ಪಾಲೇಮಾರ್ ಪರಾಕ್ರಮ


ಬಂದರು ಮಂತ್ರಿ ಪಾಲೇಮಾರ್ ಸಚಿವಗಿರಿ… ಉನ್ನತಹುದ್ದೆಗೇರುವ ಯಾವ ಯೋಗ್ಯತೆಯೂ … ಮೂರನೇ ದರ್ಜೆಯ ಪುಢಾರಿ. ಮಂಗಳೂರಿನ ಸು… ಅಮಾಯಕರ, ಬಡವರ ಭೂಮಿ ಕಬಳಿಸಿ ಲಾ… ದಂಧೆ ಮಾಡಿ ಸಂಗ್ರಹಿಸಿದ ಕಳ್ಳ ಕಾಸಿಂದ ಆ… ಡಾನ್‌ಗಳನ್ನು ನಿಭಾಯಿಸುತ್ತಾ ಬಂದ ಪಾಲೇಮಾ… ಮಂತ್ರಿಗಿರಿ ಗಿಫ್ಟ್ ಆಗಿ ಬಂದಿದೆ ಅಷ್ಟೆ. ಕರಾವಳಿ… ದೊರೆ ಕಲ್ಲಡ್ಕರಿಗೆ ಕಾಸುಕೊಟ್ಟೇ ಪ್ರವರ್ಧಮಾನಕ್ಕೆ … ಮೊದ್ಮಣಿ ಈತ. ಅಧಿಕಾರಸ್ಥರಿಗೆಲ್ಲಾ ಬೇಕುಬೇಕಾ… ಸರಬರಾಜು ಮಾಡುತ್ತಿದ್ದ ಪಾಲೇಮಾರ್ ಇವತ್ತು … ಬೇಕಾದ್ದನ್ನು ಕಳ್ಳ ಅದಿರು ಧಣಿಗಳಿಂದ ಪಡೆವ … ತಲುಪಿದ್ದಾನೆ.

ಕರಾವಳಿ: ಕಡಲ್ಕೊರೆತ ಎಂಬ ಲೂಟ್ ಮಾರ್ ದಂಧೆ!



ಕರಾವಳಿಯಲ್ಲಿ ಮುಂಗಾರು ಮಳೆ ಸುರಿಯಿತೆಂದರೆ ...ಕು. ಕಡಲ್ಕೊರೆತ ಎಂಬ ಹೆಮ್ಮಾರಿ ಸಮುದ್ರ ತೀರದ ...ವಾಸಿಗಳ ಹೆಗಲೇರಿ ಸತಾಯಿಸಲಾರಂಭಿಸುತ್ತದೆ! ಕಡಲಿನ ...ತ್ತ ಅಲೆಗಳು ಅದ್ಯಾವ ಕ್ಷಣದಲ್ಲಿ ಜೀವನಾಧಾರವಾದ ...ನೆ-ಮಠ, ತೋಟ-ಗದ್ದೆ, ಬಲೆ-ಬೋಟು ಆಪೋಷನ ...ತೆದುಬಿಡುತ್ತದೊ ಎಂಬ ಆತಂಕ!! ಜೀವ ಕೈಯಲ್ಲಿಡಿದು ...ಂಡು ಬದುಕಬೇಕಾದ ಅನಿವಾರ್ಯ ...ರ್ಮ. ಅದೊಂದು ನರಕಯಾತನೆಯ ...ನಚರಿ...

ಈ ಭೀಭತ್ಸ ಸಮಸ್ಯೆಗೆ ಕಡಿಮೆ ...ಂದರೂ ಕಾಲು ಶತಮಾನದ ಇತಿಹಾಸ ...ಪೆ. ದಕ್ಷಿಣೊತ್ತರ ಕನ್ನಡ ಜಿಲ್ಲೆಯ ...ಲ್ಲೂಕರ್ವೆ, ಪಾವಿನಕುರ್ವೆ, ಬೇಂಗ್ರೆ. ...ಂಡಿಗಳಂತ ಹಳ್ಳಿಗಳನ್ನೇ ಕಡಲಲೆಗಳು ...ಪಾಮತ್ತು ನುಂಗಿ ನೊಣೆದು ಬಿಟ್ಟಿವೆ; ...ಹಳ್ಳಿಗಳ ಯಾವ ಕುರುಹೂ ಕಾಣಿಸ ...ತೆ ಸಮುದ್ರದಲ್ಲಿ ಲೀನವಾಗಿ ಹೋಗಿದೆ. ...ಸಮರ್ಪಕ ಕಡಲು ಅಲೆ ತಡೆಗೋಡೆ ...ರ್ಮಾಣ, ಬಂದರು ನಿರ್ಮಾಣ, ಮಾನವ ...ಚಟುವಟಿಕೆ ಮತ್ತು ಕಾಂಡ್ಲಾ ವನಗಳ ...ವ್ಯಾಹತ ನಾಶದಿಂದ ಸಮುದ್ರ ಕೊರೆತ ಇತ್ತೀಚೆಗೆ ...ಶರೀತವಾಗಿ ಹೋಗಿದೆ! ಪ್ರತಿವರ್ಷ ಕನಿಷ್ಠವೆಂದರೂ ...ದ್ದು ಕಿ.ಮೀ. ಊರು-ಕೇರಿ ಸಮುದ್ರ ಪಾಲಾಗುತ್ತಿದೆ!



ಪಾಲೇಮಾರ್

ಮಂಗಳೂರಿಂದ ಕಾರವಾರವರೆಗಿನ 280 ಕಿ.ಮೀ. ...ದ್ದದ ತೀರದಲ್ಲಿ 246 ಕಿ.ಮೀ. ಪ್ರದೇಶ ಗಂಡಾಂತರದಲ್ಲಿದೆ. ಏರಿಯಾವನ್ನು ಯಾವ ಕ್ಷಣದಲ್ಲಾದರೂ ಸಮುದ್ರ ...ಳಿಸಬಹುದು. ಅಷ್ಟು ದೊಡ್ಡ ಮಟ್ಟದಲ್ಲಿ ಕಡಲ್ಕೊರೆತ ...ಲ್ಲಾಗಿದೆ. ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳ ಶೇ. ...ರಷ್ಟು ಮತ್ತು ಉತ್ತರಕನ್ನಡದ ಶೇ. 8ರಷ್ಟು ಕಡಲ ...ರ ಸಮುದ್ರ ಅಲೆಗಳ ಹೊಡೆತಕ್ಕೆ ಜರ್ಜರಿತವಾಗಿ ...ೋಗಿದೆ! ಅಂದರೆ ಉತ್ತರಕನ್ನಡದ ಶೇ. 73 ಕಿ.ಮೀ. ...ತ್ತು ಉಡುಪಿ-ದಕ್ಷಿಣಕನ್ನಡಗಳ 23.14 ಕಿ.ಮೀ. ...ಯಾದ ಜೀವ ಜಗತ್ತು ಸಮುದ್ರ ಸಮಾಧಿಯ ...ಪುದಲ್ಲಿದೆ.

ಈ ಅಂಕಿ-ಅಂಶ ಕೊಟ್ಟಿರುವುದು ಕೇಂದ್ರ ಭೂ ...ಜ್ಞಾನ ಮಂಡಲದ ಐಸಿಎಮ್‌ಎಮ್ ಯೋಜನಾ ...ನಿರ್ದೇಶನಾಲಯ ಮತ್ತು ಇಂಡಿಯನ್ ನ್ಯಾಷನಲ್ ಸೆಂಟರ್ ...ಆಫ್ ಇನ್‌ಫಾರ್ಮೇಷನ್ ಸರ್ವಿಸ್-ಇನಕೋಯಿಸ್-ಹೈದ್ರಾ...ಬಾದ್ ಸಂಸ್ಥೆ. ಇದೊಂದು ಸೆಟಲೈಟ್ ಸರ್ವೆ. ಇಷ್ಟೊಂದು ...ಮಾನಕ ಸಮಸ್ಯೆ ಎದುರಾಗಿದ್ದರೂ ಆಳುವ ಖೂಳರು ...ಕಡಲ್ಕೊರೆತವನ್ನು ಗಂಭೀರವಾಗಿ ಪರಿಗಣಿಸಿಯೇ ಇಲ್ಲ. ...ಕಡಲ್ಕೊರೆತವೆಂದರೆ ಅಧಿಕಾರಸ್ಥ ಪುಢಾರಿಗಳ ಮತ್ತು ಅಧಿಕಾರಿಗಳ ಪಾಲಿಗೆ ಪ್ರತಿ ವರ್ಷದ ಉದ್ಯಮೋತ್ಸವ! ಭರ್ಜರಿಯಾಗಿ ನುಂಗುವ ಸುಗ್ಗಿ ಹಬ್ಬ!

ಕಡಲ್ಕೊರೆತ ಮನುಷ್ಯನ ಕೈಮೀರಿದ ಪ್ರಕೃತಿ ವಿಕೋಪ. ಇದು ಗೊತ್ತಿದ್ದೂ ಸಮುದ್ರ ಕೊರೆತ ತಡೆಯುವುದಾಗಿ ಜನಪ್ರತಿನಿಧಿಗಳು-ಅಧಿಕಾರಿಗಳು ಜಂಟಿಯಾಗಿ ಪೊಳ್ಳು ಭರವಸೆ ಕೊಡುತ್ತಲೇ ಇದ್ದಾರೆ. ಇದನ್ನು ಅಮಾಯಕ-ಅಸಹಾಯಕ ಕಡಲತಡಿಯ ಮಂದಿ ನಂಬುತ್ತಿರುವುದು ದುರಂತ. ಕಡಲ್ಕೊರೆತ ಜೋರಾದಂತೆ ರಾಜಕಾರಣಿ-ಅಧಿಕಾರಿ-ಗುತ್ತಿಗೆದಾರ ತ್ರಿಕೂಟಕ್ಕೆ ಬಂಪರ್ ಲಾಭ! ತಿರಬೋಕಿಯಂಥ ಕಂಟ್ರಾಕ್ಟರ್-ಇಂಜಿನಿಯರ್‌ಗಳು ಸಮುದ್ರ ಕೊರೆತ ತಡೆ ಕಾಮಗಾರಿಯಿಂದ ಕೋಟ್ಯಾಧೀಶರಾಗಿ ಮೆರೆಯುತ್ತಿದ್ದಾರೆ. ಕಡಲ್ಕೊರೆತ ಮಾತ್ರ ಹಾಗೇ ಮುಂದುವರಿದಿದೆ; ರಾಷ್ಟ್ರ ಮಟ್ಟದಲ್ಲಿ ಸೆನ್‌ಸೇಷನಲ್ ಸುದ್ದಿಯಾಗುತ್ತಿದೆ. ನಿಷ್ಪಾಪಿ ಕಡಲದಂಡೆ ಜನರು ಬದುಕು ಕಳಕೊಂಡು ಬೀದಿಗೆ ಬೀಳುತ್ತಲೇ ಇದ್ದಾರೆ.

ಇದು ಕಡಲ್ಕೊರೆತದ ರೂಟೀನ್ ಕರ್ಮ!! ಮಳೆಗಾಲ ಶುರುವಾಗುತ್ತಿದ್ದಂತೆ ಕಡಲ್ಕೊರೆತದ ಹಾವಳಿಯೂ ಜೋರಾಗುತ್ತದೆ. ಆಸ್ತಿ-ಪಾಸ್ತಿ ಹಾನಿ, ಮತಗಳ ಸ್ಥಳಾಂತರ, ಪರಿಹಾರಕ್ಕೆ ಒತ್ತಾಯ, ಕಾಸು ಬಿಡುಗಡೆ ಭರವಸೆ, ಶಾಶ್ವತ ಪರಿಹಾರದ ವಾಗ್ದಾನ, ಕೊರೆತದ ಭಾಗಕ್ಕೆ ಕಲ್ಲು, ಹೊಯ್ಗೆ ಚೀಲಗಳ ಹಾಕುವ ಕೋಟ್ಯಾಂತರ ರೂಪಾಯಿ ಕಾಮಗಾರಿ... ಒಂದೇ... ಎರಡೇ...ಅಷ್ಟರಲ್ಲಿ ಮಳೆಗಾಲ ಮುಗಿದಿರುತ್ತದೆ. ತುತ್ತಿನ ಚೀಲ ತುಂಬುವ ಕಾಯಕದ ಬಡ ಬೆಸ್ತರು, ರೈತರು, ಇತರ ಕಸುಬಿನ ಮಂದಿ ಹೊಟ್ಟೆಪಾಡಿನಲ್ಲಿ ಕಡಲ ಕೊರೆತದ ಸಮಸ್ಯೆ ತಾತ್ಕಾಲಿಕವಾಗಿ ಮರೆಯುತ್ತಾರೆ. ರಾಜಕಾರಣಿಗಳು-ಅಧಿಕಾರಿಗಳು ಕಾಸು-ಪಬ್ಲಿಸಿಟಿ ಮೈಲೇಜು ಪಡೆದು ಬೇರೆ ಬಿಸಿನೆಸ್‌ನತ್ತ ಹೊರಳುತ್ತಾರೆ. ಮತ್ತೆ ಕಡಲು ಕೊರೆತ ನೆನಪಾಗುವುದು ಮತ್ತೊಂದು ಮಳೆಗಾಲ ಬಂದಾಗಲೇ....

ಕಾರವಾರ-ಮಂಗಳೂರು ನಡುವಿನ 55.8 ಕಿ.ಮೀ. ಕಡಲ ತೀರದಲ್ಲಿ ಯಮಗಾತ್ರದ ಶಿಲೆಕಲ್ಲುಗಳನ್ನು ಹಾಕಿ ಅಲೆ ತಡೆಗೋಡೆ ನಿರ್ಮಿಸಲಾಗಿತ್ತು, ಆದರದು ನೀರಲ್ಲಿಟ್ಟ ಹೋಮದಂತಾಗಿದೆ. ಕಡಲ ತಡಿಯ ಜನರಿಗೆ ಇದರಿಂದ ಯಾವ ಭದ್ರತೆ-ಪ್ರಯೋಜನವೂ ಆಗಲಿಲ್ಲ. ಬದಲಿಗೆ ಅಧಿಕಾರಿಗಳು ಮತ್ತು ರಾಜಕಾರಣಿಗಳು-ಗುತ್ತಿಗೆದಾರರು ಒಳ ಒಪ್ಪಂದ ಮಾಡಿಕೊಂಡು ಸುಖಾಸುಮ್ಮನೆ ಕಡಲ ಒಡಲಿಗೆ ಕೋಟಿ-ಕೋಟಿ ರೂಪಾಯಿಗಳ ಕಲ್ಲು ಸುರಿದರು; ಹೊಯ್ಗೆಗೋಣಿ ಚೀಲ ಹಾಕಿದರು. ಒಂದಕ್ಕೆ ಹತ್ತು ಪಟ್ಟು ಹೆಚ್ಚು ಎಸ್ಟಿಮೇಟು ಮಾಡಿ ದಾಖಲೆ ತಯಾರಿಸಿದರು. ಕೋಟಿ-ಕೋಟಿ ಲೂಟಿ ಮಾಡಿದರು.

ಕರಾವಳಿಯಲ್ಲಿ ಇವತ್ತು ಕಡಲ್ಕೊರೆತ ಮುಗ್ಧ ಜನರಿಗೆ ಜೀವನ್ಮರಣದ ಸಮಸ್ಯೆಯಾಗಿದ್ದರೆ, ಅದನ್ನೇ ಅಧಿಕಾರಿ-ರಾಜಕಾರಣಿ-ಗುತ್ತಿಗೆದಾರರ ಖದೀಮ ತಂಡ ಲಾಭದಾಯಕ ದಂಧೆಯಾಗಿ ಪರಿವರ್ತಿಸಿಕೊಂಡಿದೆ! ಸಮುದ್ರ ಕೊರೆತ ಉದ್ಯಮವಾಗಿ ಮಾರ್ಪಟ್ಟಿರುವುದೇ ಸಮಸ್ಯೆ ಜೀವಂತವಾಗಿರುವುದಕ್ಕೆ ಪ್ರಮುಖ ಕಾರಣ! ಕಡಲು ಕೊರೆತ ತಡೆಗೆ ಈವರೆಗೆ ವ್ಯಯಿಸಿದ ಕೋಟಿಗಳೆಷ್ಟೆಂದು ಲೆಕ್ಕ ಅಧಿಕಾರಿಗಳಿಗೆ ಕೇಳಿದರೆ ಕಕ್ಕಾಬಿಕ್ಕಿಯಾಗುತ್ತಾರೆ. ದಾಖಲೆಯಲ್ಲಿ ಮಾತ್ರ ಲಕ್ಷಗಟ್ಟಲೆ ಟನ್ ಕಲ್ಲುಗಳನ್ನು ಕಡಲುದ್ದಕ್ಕೆ ಹಾಸಲಾಗಿದೆ. ವಾಸ್ತವವೆಂದರೆ, ಕೆಲವೆಡೆ ಕಲ್ಲುಗಳನ್ನೇ ಹಾಕದೇ ನೂರಕ್ಕೆ ನೂರು ಇಂಜಿನಿಯರ್-ರಾಜಕಾರಣಿ-ಗುತ್ತಿಗೆದಾರರು ತಿಂದು ಹಾಕಿದ್ದಾರೆ; ಇನ್ನೂ ಕೆಲವೆಡೆ ಒಂದು ಲೋಡ್ ಕಲ್ಲು ಹಾಕಿ ಹತ್ತು ಲೋಡ್ ಲೆಕ್ಕ ಬರೆಯಲಾಗಿದೆ.

ಕಡಲು ಕೊರೆತದ ಹೆಸರಲ್ಲಿ ಗೋಲ್‌ಮಾಲ್ ನಡೆಸುವುದು ತುಂಬ ಸರಳ-ಸುಲಭ. ಇದೊಂದು ಮನುಷ್ಯನಿಂದ ನಿಯಂತ್ರಿಸಲಾಗದ ಪ್ರಕೃತಿ ವಿಕೋಪವಾದ್ದರಿಂದ ಕಲ್ಲುಗಳನ್ನು ಜಮೆ ಮಾಡಿದಾಕ್ಷಣ ಕೊರೆತ ನಿಲ್ಲುತ್ತದೆಂದು ಹೇಳಲಾಗದು. ಹಾಗಾಗಿ "ಕಲ್ಲು ಕಡಲುದ್ದಕ್ಕೂ ಹಾಕಿದ್ದೇವೆ, ಆದರೆ ಕಡಲ್ಕೊರೆತ ನಿಂತಿಲ್ಲ... ನಾವೇನು ಮಾಡೋದು?!" ಎಂದು ಇಂಜಿನಿಯರ್-ಕಂಟ್ರಾಕ್ಟರ್-ರಾಜಕಾರಣಿ ಹೇಳಿದರೆ ಏನೂ ಮಾಡಲಿಕ್ಕಾಗದು. ಏಕೆಂದರೆ ಈ ಅವ್ಯವಹಾರದ ತನಿಖೆಯು



ಸಮುದ್ರಕ್ಕಿಳಿದು ಕಲ್ಲುಗಳ ಎಣಿಸುವುದು, ಅದರ ತೂಕ ನೋಡುವುದು ಸಾಧ್ಯವೇ ಇಲ್ಲ. ಈ 'ವೈಶಿಷ್ಟ್ಯ'ಕ್ಕಾಗಿ ಕಡಲು ಕೊರೆತ ಕಾಮಗಾರಿ ಸರ್ಕಾರಿ ಚೋರರಿಗೆ ನಿರಾತಂಕವಾದ ಲೂಟಿ ದಂಧೆಯೇ ಆಗಿಹೋಗಿದೆ! ಕಡಲಿನ ಒಡಲಿಗಿಂತ ಸರ್ಕಾರಿ ಕಳ್ಳರ ಹೊಟ್ಟೆ ದೊಡ್ಡದಲ್ಲವೇ? ಹೀಗಿರುವಾಗ ಕಡಲಿಗೆ ಹಾಕಿದ(?) ಕಲ್ಲಿನ ಕಾಸಿನ ಲೆಕ್ಕ ಅದ್ಹೇಗೆ ಸಿಕ್ಕೀತು?

ಯಥಾಪ್ರಕಾರ ಈ ಸಲವೂ ಕರಾವಳಿಯಲ್ಲಿ ಮುಂಗಾರು ಹನಿಯುತ್ತಿದ್ದಂತೆಯೇ ಕಡಲು ಆರ್ಭಟಿಸಲಾರಂಭಿಸಿದೆ. ಇದು ಪ್ರಕೃತಿ ನಿಯಮ ಬಿಡಿ. ಆದರೆ ಇದರೊಂದಿಗೇ ವಿಕಟವ್ಯಂಗ್ಯವೊಂದು ನಡೆಯುತ್ತಿದೆ. ಕಡಲಬ್ಬರಕ್ಕೆ ಕಂಗೆಟ್ಟ ಮಂದಿ ಗುಳೆ ಹೋಗುತ್ತಿದ್ದರೆ, ಆಳುವ ಖಳರು-ಅವರ ಅಧಿಕಾರಿ ಪ್ರಭೃತಿಗಳು ಕಡಲದಂಡೆಗೆ ಸಮುದ್ರ ಕೊರೆತದ ಹಾನಿ ವೀಕ್ಷಿಸಲೆಂದು ಬರುತ್ತಿದ್ದಾರೆ! ಕಡಲ ದಂಡೆ ಮೇಲೆ ನಿಂತು ಹಸಿಹಸೀ ಸುಳ್ಳು ಭರವಸೆ, ಪರಿಹಾರ, ಕಡಲ್ಕೊರೆತ ತಡೆವ ಮಾತಾಡುತ್ತಿದ್ದಾರೆ; ಅಧಿಕಾರಿಗಳು ಲೆಕ್ಕಕ್ಕೆ ಮೀರಿದ ಅಂಕಿ-ಅಂಶ ಬಿತ್ತರಿಸುತ್ತಿದ್ದಾರೆ. ಇದೆಲ್ಲ ನಾಲ್ಕು ದಶಕದ ಕಡಲ್ಕೊರೆತದ ಇತಿಹಾಸದ ಪರಿಪಾಠ-ರಾಜಕಾರಣಿಗಳ ಅಧಿಕಾರಿಗಳ ಮಾಡು-ಭರವಸೆಗೊಂದು ಬದ್ಧತೆ- ಪ್ರಾಮಾಣಿಕತೆ ಕನಿಷ್ಠ ಲಜ್ಜೆಯೆಂಬುದು ಇದ್ದಿದ್ದರೆ ಅದೆಂದೊ ಕಡಲ್ಕೊರೆತ ಸಮಸ್ಯೆ ಪರಿಹಾರವಾಗಿ ಹೋಗುತ್ತಿತ್ತು! ಒಟ್ಟಿನಲ್ಲಿ ಇದೊಂದು ಬಿಸಿನೆಸ್ ಟ್ರಿಕ್-ಅಷ್ಟೇ!

ಕಳೆದ ನಲ್ವತ್ತು ವರ್ಷದಲ್ಲಿ ಕಡಲ್ಕೊರೆತವನ್ನು ಸೀರಿಯಸ್ಸಾಗಿ ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಪರಿಗಣಿಸಿಯೇ ಇಲ್ಲ. ಈ ಸಮಸ್ಯೆಗೊಂದು ಶಾಶ್ವತ ಪರಿಹಾರ ಕೊಡಲು ಯೋಚಿಸಿಲ್ಲ. ಕಡಲು ಕೊರೆತದ ಹೆಸರಲ್ಲಿ ಕೋಟಿ-ಕೋಟಿ ಲೂಟಿಯಾಗುತ್ತಿದ್ದರೂ ತಲೆಕೆಡಿಸಿಕೊಳ್ಳಲಿಲ್ಲ. ರಾಜಕಾರಣಿ-ಅಧಿಕಾರಿ-ಗುತ್ತಿಗೆದಾರರು ಒಳ ಒಪ್ಪಂದ ಮಾಡಿಕೊಂಡು ಹಗಲು ದರೋಡೆ ಮಾಡಿದರೇ ವಿನಃ ಕಡಲತಡಿಯ ಅಸಹಾಯಕರ ಕಷ್ಟಕ್ಕೆ ಪ್ರಾಮಾಣಿಕವಾಗಿ ಸ್ಪಂದಿಸಲೇ ಇಲ್ಲ. ಹಾಗಂತ ಸರ್ಕಾರಿ ಮಂದಿ ಕಡಲು ಕೊರೆತದ ಪರಿಹಾರಾರ್ಥವಾಗಿ ಅಧ್ಯಯನ-ಸೆಮಿನಾರು-ವಿದೇಶಿ ತಂತ್ರಜ್ಞಾನ ನೋಡಲೆಂದು ವಿದೇಶ ಪ್ರವಾಸ... ಇಂಥ ಬೋಗಸ್ ಪ್ರಯಾಣಕ್ಕೇನೂ ಕಡಿಮೆ ಮಾಡಿಲ್ಲ, ಬಿಡಿ.

ಕಡಲ್ಕೊರೆತದ ನೆಪದಿಂದ ರಾಜಕಾರಣಿ-ಅಧಿಕಾರಿಗಳ ದಂಡು-ದಂಡೇ ವಿದೇಶ ಪ್ರವಾಸ ಮಾಡಿಬಂದಿದೆ. ವಿದೇಶದಲ್ಲಿನ ಕಡಲ್ಕೊರೆತ ಮತ್ತು ಅಲ್ಲಿ ಯಾವ ಥರದ ತಂತ್ರಜ್ಞಾನದಿಂದ ತಡೆಗಟ್ಟಲಾಗಿದೆ ಎಂಬುದನ್ನು "ಅಧ್ಯಯನ" ಮಾಡಲೆಂದು ರಾಜ್ಯದ ಹಲವು ಪುಢಾರಿಗಳು ಜರ್ಮನಿ ಮುಂತಾದ ರಾಷ್ಟ್ರಗಳಿಗೆ ಜಾಲಿ ಟ್ರಿಪ್ ಹೋಗಿಬಂದಿದ್ದಾರೆ. ಆದರೆ ಈ ವಿದೇಶಿ ತಂತ್ರಜ್ಞಾನದಿಂದಲೇ ಅದ್ಯಾವ ಕರಾವಳಿ ಭಾಗದ ಕಡಲ್ಕೊರೆತ ತಡೆಗಟ್ಟಲಾಗಿದೆಯೋ ಆ ಸಮುದ್ರ ರಾಜನಿಗೇ ಗೊತ್ತು! ಹಾಗೆಯೇ ಕಡಲುಕೊರೆತ ತಡೆಯುವ ಕುರಿತು ಹಲವು ಅಧ್ಯಯನ ವರದಿಯೂ ತಯಾರಿಸಲಾಗಿದೆ. ಆದರೆ ಇದನ್ನು ತಿರುವಿ ಹಾಕುವ ವ್ಯವಧಾನ ಹೆದ್ದ ಜನಪ್ರತಿನಿಧಿಗಳಿಗಿಲ್ಲ; ಅದರ ಜರೂರತ್ತು ಅವರಿಗಿಲ್ಲ.

ಸಾಹಿತಿ-ಪರಿಸರವಾದಿ-ದಾರ್ಶನಿಕ ದಿವಂಗತ ಶಿವರಾಮ ಕಾರಂತರು-ಕಾಂಡ್ಲಾಕಾಡುಗಳ ನಾಶದಿಂದ ಕಡಲ ಕೊರೆತ ಉಂಟಾಗುತ್ತಿದೆ... ಕಾಂಡ್ಲಾ ವನಗಳ ನಿರ್ಮಾಣದಿಂದ ಸಮುದ್ರ ಕೊರೆತಕ್ಕೆ ಕಡಿವಾಣ ಹಾಕಬಹುದೆಂದು ಹೇಳಿದ್ದರು. ಇದನ್ನು ಖಾಲಿ ಬುರುಡೆ ಆಳುವವರು ಗಂಭೀರವಾಗಿ ಪರಿಗಣಿಸಲೇ ಇಲ್ಲ. ಈಗ ಸರ್ಕಾರಿ ದರೋಡೆಕೋರರಿಗೆ ಅನುಕೂಲವಾಗುವಂಥ ಮತ್ತೊಂದು ಸಮುದ್ರ ಕೊರೆತ ತಡೆವ ಪ್ರಾಜೆಕ್ಟ್‌ಗೆ ಸ್ಕೆಚ್ ಹಾಕಲಾಗಿದೆ. ಈ ಯೋಜನೆಯ ಒಟ್ಟು ಮೊತ್ತ 911 ಕೋಟಿ!! ಜರ್ಮನ್ ತಂತ್ರಜ್ಞಾನ ಮತ್ತು ಎಡಿಬಿ ನೆರವಿನಿಂದ ಈ ಯೋಜನೆಯಡಿ ಮಂಗಳೂರಿನಿಂದ ಕಾರವಾರತನಕದ ಕಡಲ ದಂಡೆಗುಂಟದ ಕಡಲ್ಕೊರೆತದ ವಿವಿಧ ಭಾಗಕ್ಕೆ ವಿವಿಧ ಮೊತ್ತ ನಿಗದಿಸಲಾಗಿದೆ. ದಿನದಿನವೂ ಕಡಲಲ್ಲಿ ಕರಗುತ್ತಿರುವ ಉಳ್ಳಾಲಕ್ಕೆ 283 ಕೋಟಿ ರೂ. ಮೀಸಲಿಡಲಾಗಿದೆ. ಅಂದರೆ ಕಡಲ ಕಿನಾರೆಯ ಮೂರು ಜಿಲ್ಲೆಗಳ ಮೂರೂ ಬಿಟ್ಟ ಸರಕಾರಿ ಮಂದಿಗೆ ಹಬ್ಬವೋ ಹಬ್ಬ!

ಈ ಬಾರಿಯಾದರೂ ಕಡಲುಕೊರೆತದ ದುಡ್ಡು ನಾಯಿ-ನರಿ ಪಾಲಾಗಲು ಬಿಡಬಾರದು. ಸಮುದ್ರದ ರಾಕ್ಷಸ ಅಲೆಗಳೆದುರು ಊಟ-ನಿದ್ದೆ ಬಿಟ್ಟು ಬದುಕು ಕಾಪಾಡಿಕೊಳ್ಳಲು ಹೆಣಗುತ್ತಿರುವ ಕಡಲತಡಿಯ ಕಂಗೆಟ್ಟವರಿಗೆ ಒಂದಿಷ್ಟು ನೆಮ್ಮದಿ ಈ ಎಡಬಿ ಹಣದಿಂದಾದರೂ ಸಿಗುವಂತಾಗಬೇಕು. ಕಡಲು ಕೊರೆತಕ್ಕೆ ತಡೆಗೋಡೆ ಕಟ್ಟುವ ಮೊದಲೇ ಭ್ರಷ್ಟರಿಗೊಂದು ಕಟ್ಟುನಿಟ್ಟಿನ ಗೋಡೆ ಕಟ್ಟಬೇಕಿದೆ. ನಿಷ್ಠುರಿಗಳು-ಪ್ರಾಮಾಣಿಕರು ಇರುವಂಥದೊಂದು "ಕಡಲು ಕೊರೆತ ತಡಗೋಡೆ ಕಾಮಗಾರಿ ಕಣ್ಗಾವಲು" ಟೀಮನ್ನು ನೇಮಕ ಮಾಡಬೇಕು. ಹಾಗಾದರೆ ಮಾತ್ರ ಕಡಲ್ಕೊರೆತ ತಡೆಗೋಡೆ ಗಟ್ಟಿಯಾಗಿ ನಿಲ್ಲಬಹುದು. ಇಲ್ಲದಿದ್ದರೆ ಇದು ಸಮುದ್ರಕ್ಕೆ ಕಲ್ಲು ಹಾಕುವ ದಂಧ ಯೋಜನೆ ಆಗುತ್ತದಷ್ಟೇ.

ಸಮುದ್ರದ ಅಲೆಗಿಂತಲೂ ಭ್ರಷ್ಟಾಚಾರದ ತೆರೆಗಳೇ ಪ್ರಳಯಾಂತಕಾರಿ, ಅಲ್ಲವೇ?

• ನವುಡ

...ಇಂಥಾ ನಪ್ಪಟಾಲ್ ಸಹಜವಾಗಿಯೇ ಅದಿರು ಕಳ್ಳರ ಆಮಿಷಕ್ಕೆ ಬಿದ್ದಿದ್ದಾನೆ. ಜೊತೆಗೆ 'ಹಿರಿಯ' ಗಣಿಮಂತ್ರಿಗಳ ...ಗೂ ಪಕ್ಕಾಗಿದ್ದಾನೆ. ತತ್ಪರಿಣಾಮವಾಗಿ ಆತ ಬೇಲೇಕೇರಿ ಬಂದರಿನ ಅದಿರುಕಳ್ಳರ ಪರ ಕರಾಮತ್ತಿಗಿಳಿದಿದ್ದಾನೆ. ...ರಪ್ತುದಾರ ರೌಡಿಗಳ ಜೊತೆ ಆಯೋಜಿಸಿದ್ದ ಸಭೆಗೆ ಬರದ 'ಉದ್ಧಟ' ಡಿಸಿಎಫ್ ಗೋಕುಲ್ ಮೇಲೆ ...ೇಮಾರ್‌ಗೆ ಅಸಾಧ್ಯ ಕೋಪ ಬಂದಿದೆ. ಕೋಪಾಗ್ನಿಗೆ ಕ್ರಿಮಿನಲ್ ಕೇಸ್ ಹೀರೋಗಳಾದ 11 ಅದಿರುಗಳ್ಳರು ...ಸುರಿದಿದ್ದಾರೆ.

ಬೇಲೇಕೇರಿಯಿಂದ ಮಂಗಳೂರು ತಲುಪಿದ ಕ್ಷಣವೇ ಈ ಹೇತ್ಲಾಂಡಿ ಮಂತ್ರಿ ಪಾಲೇಮಾರ್ ಗೋಕುಲ್‌ರ ...ಮಾನತ್ತಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪತ್ರ ಬರೆದು ಕೃತಾರ್ಥನಾದ. ಅದಿರುಗಳ್ಳರ ಎಂಜಲು ತಿಂದ ...ಣವನ್ನು ನಿಯತ್ತಿನಿಂದ ತೀರಿಸಿದ. ಮೂರ್ಖ ಮಂತ್ರಿ ಪಾಲೇಮಾರ್ ತನ್ನ ವಿರುದ್ಧ ಸಂಚು ನಡೆಸಿರುವುದು ...ಗುತ್ತಲೇ ಒಂಥರಾ ಡಿಸ್ಟರ್ಬ್ ಆದ ಗೋಕುಲ್ ನೇರವಾಗಿ ಲೋಕಾಯುಕ್ತ ಹೆಗಡೆಜೀಗೆ ಫೋನಾಯಿಸಿ ...ಕೊಳಕು ಬೆಳವಣಿಗೆಗಳ ಬಗ್ಗೆ ಅಲವತ್ತುಕೊಂಡಿದ್ದಾರೆ. ತಾನು ತಮ್ಮ ಆದೇಶದಂತೆ ಕರ್ತವ್ಯ ನಿಭಾಯಿಸಿದ್ದಕ್ಕೆ ...ಮಾನತ್ತಿಗೆ ಒಳಗಾಗಬೇಕಾದ ಸಂದರ್ಭ ಸೃಷ್ಟಿಯಾಗುತ್ತಿದೆ ಎಂದು ಗೋಗರೆದಿದ್ದಾರೆ.


ಇದು ಸೂಕ್ಷ್ಮ ಸಂವೇದನೆಯ ನ್ಯಾಯಮೂರ್ತಿ ಸಂತೋಷ್ ಹೆಗಡೆಯವರನ್ನು ಸಂಕಟಕ್ಕೆ ಈಡುಮಾಡಿತು. ...ದದ್ದು ಕಳೆದ ಸೋಮವಾರ (21-06-2010). ಅಂದೇ ಹೆಗಡೆ ಪ್ರಾಮಾಣಿಕ ಅಧಿಕಾರಿಯನ್ನು ರಕ್ಷಿಸಲಾಗದ ...ಕೆ ಲೋಕಾಯುಕ್ತ ಕುರ್ಚಿಯಲ್ಲಿರಬೇಕೆಂದು ಯೋಚಿಸಿದ್ದಾರೆ. ತಕ್ಷಣ ರಾಜೀನಾಮೆಗೆ ಸಿದ್ಧರಾಗಿದ್ದಾರೆ.

...ಇದು ಬಿಜೆಪಿ ಸರ್ಕಾರದ ಕಾರ್ಯಶೈಲಿ! ಶಿಷ್ಟರಿಗೆ ಶಿಕ್ಷೆ; ದುಷ್ಟರಿಗೆ ರಕ್ಷೆ!

...ಗ ಹೇಳಿ ಕರ್ನಾಟಕವನ್ನು ಬಿಡ್ಡಿಗಳ ಆ ಮರ್ಯಾದ ಪುರುಷೋತ್ತಮ ರಾಮಚಂದ್ರನಿಂದಲಾದರೂ ...ಕಾಯಲು ಸಾಧ್ಯವಿದೆಯಾ?

...ಷ್ಟ! ಕಷ್ಟ! ಅಲ್ಲವೇ? •

'ದೇಶ' ವಿದೇನಹಾ! 'ಕಾಲ' ವಿದೇನಹಾ!



● ಇತ್ತೀಚೆಗೆ ಅಲ್ಲಿ ಇಲ್ಲಿ ಹುಡುಕಿ, ತಾಲ್ಲೂಕಾಫೀಸಿನಲ್ಲಿ ಕೊಳೆಯುತ್ತಿರುವ ನೆರೆಪರಿಹಾರದವರ ಬೃಹತ್ ಕಡತದಂತಿರುವ 'ದೇಶ ಕಾಲ'ದ ವಿಶೇಷ ಸಂಚಿಕೆಯನ್ನು ಹೊತ್ತು ತಂದು ನೋಡಿದ್ದಾಯಿತು. ಅದನ್ನು ಓದಿದ ನಂತರ 'ದೇಶ ಕಾಲ'ದ ಲೆಕ್ಕಾಚಾರವನ್ನು ಹೀಗೆ ಕಂಡುಹಿಡಿದೆವು... ಅನಂತಮೂರ್ತಿಯವರಿಂದ ಯಾವೊಂದು ಸ್ಫೂರ್ತಿಯನ್ನೂ ವಿವೇಕವನ್ನೂ ಪಡೆಯದ ಶಾನಭಾಗ, ಕಾಯ್ಕಿಣಿಗಳು ತಮಗನ್ನಿಸಿದ್ದಷ್ಟೇ ಸಾಹಿತ್ಯ ಎಂಬುದರ ಆಧಾರದ ಮೇಲೆ ವಿಶೇಷ ಸಂಚಿಕೆಯನ್ನು ರೂಪಿಸಿದ್ದಾರೆ.

● ಮಂಜುನಾಥ್‌ಲತಾ
manjunathlatha@gmail.com
● ಕೆ.ಎಲ್. ಚಂದ್ರಶೇಖರ್ ಐಜೂರ್
chandrashekiaraijoor@gmail.com

ಉತ್ತರ ಕರ್ನಾಟಕದಲ್ಲಿ ನೆರೆಹಾವಳಿಗೆ ಸಿಕ್ಕಿ ಬದುಕು, ಮನೆ, ಕನಸುಗಳನ್ನೆಲ್ಲ ಆ ಜನ ಕಳೆದುಕೊಂಡು ವರ್ಷವಾಯಿತು. ಅವರ ಒಡಲ ಸಂಕಟಗಳಿಗೆ ಈಗ ವಾರ್ಷಿಕೋತ್ಸವ! ಆ ಜನ ಅಳಿದುಳಿದ ತಮ್ಮ ಬದುಕಿನ ಅವಶೇಷಗಳನ್ನು ಒಟ್ಟುಗೂಡಿಸಿ ಬದುಕುವ ಅನಿವಾರ್ಯ ಆಟವನ್ನು ಮತ್ತೆ ಶುರುಮಾಡಿಕೊಂಡಿದ್ದಾರೆ. ನಮ್ಮೆಲ್ಲ ಆಳುವ ವರ್ಗ ಆ 'ಉತ್ತರ ದೇಶ'ವನ್ನೇ ಮರೆತು ತನ್ನ ಸರ್ಕಾರದ ಗ್ರ್ಯಾಂಡ್ ಪಾರ್ಟಿಗೆ ಸಿದ್ಧವಾಗುತ್ತಿದೆ.

ಆಳುವ ಜನಗಳ ಧೋರಣೆ ಇದಾದರೆ, ಬೆಂಗಳೂರು ನಗರದಲ್ಲೆಲ್ಲ ಸೌಂದರ್ಯವನ್ನೇ ಕಾಣಬಯಸುವ, ಸಂತೋಷವನ್ನೇ ಹುಡುಕುವ 'ಸುಸಂಸ್ಕೃತ ಸಾಂಸ್ಕೃತಿಕ ವರ್ಗ'ವೊಂದು ತನ್ನ ಸೃಜನಶೀಲತೆಯನ್ನು, ಸಂತೋಷ, ಸಂಭ್ರಮ, ಸಾಹಿತ್ಯಕ ಚಪಲಗಳನ್ನೆಲ್ಲ ವಿಶೇಷ ಸಂಚಿಕೆಗಳ ಮೂಲಕ ಉಣಬಡಿಸಲು ಎರಡನೇ, ಮೂರನೇ ಬಾರಿಗೆ ರೆಡಿಯಾಗುತ್ತಿದೆ.

ಇತ್ತೀಚೆಗೆ ಅಲ್ಲಿ ಇಲ್ಲಿ ಹುಡುಕಿ, ತಾಲ್ಲೂಕಾಫೀಸಿನಲ್ಲಿ ಕೊಳೆಯುತ್ತಿರುವ ನೆರೆಪರಿಹಾರದವರ ಬೃಹತ್ ಕಡತದಂತಿರುವ 'ದೇಶ ಕಾಲ'ದ ವಿಶೇಷ ಸಂಚಿಕೆಯನ್ನು ಹೊತ್ತು ತಂದು ನೋಡಿದ್ದಾಯಿತು. ಅದನ್ನು ಓದಿದ ನಂತರ 'ದೇಶ ಕಾಲ'ದ ಲೆಕ್ಕಾಚಾರವನ್ನು ಹೀಗೆ ಕಂಡುಹಿಡಿದೆವು:


ಇವರಿರುವ ಗ್ರಹವೇ ಬೇರೆ. ಈ ಗ್ರಹದಲ್ಲಿ ಮಳೆಗೆ ಸಿಲುಕಿ ಜೋಪಡಿಗಳು ಮುಳುಗುವ, ಬದುಕು ನಾಶವಾಗುವ ದುರಂತಗಳೆಲ್ಲ ಘಟಿಸುವುದಿಲ್ಲ, ನಳನಳಿಸುವ ಹೂತೋಟದಿಂದಲೇ ಶೃಂಗಾರಗೊಂಡಿರುವ ಈ ಗ್ರಹದಲ್ಲಿ ಲಕ್ಷ್ಮೀನಾರಾಯಣ ಭಟ್ಟರ ಗೀತೆಗಳನ್ನೂ, ಎಚ್ಚೆಸ್ವೀಯವರ ಕವಿತೆಗಳನ್ನೂ, ಲಕ್ಷ್ಮಣರಾಯರ 'ಜಾಲಿಬಾರಿನಲ್ಲಿ ಕೂತ ಪೋಲಿ ಗೆಳೆಯರ' ಹಾಡುಗಳನ್ನು ತುಂಬಿದೆದೆಯ ಪಾಪ್ ಗಾಯಕಿಯೊಬ್ಬಳೋ, ಕ್ರಿಕೆಟಿಗನೊಬ್ಬನೋ ರಾಗವಾಗಿ ಹಾಡುತ್ತಾರೆ; 'ಪಾಡಿ ಪೊಗಳಲ್ ಅದು ಅತಿಮೋದವೆನಿಪುದು!'

ಇರಲಿ, ಇಲ್ಲೊಂದು ಬಡವರ, ಶೋಷಿತರ ಮ್ಯೂಸಿಯಮ್ ಇದೆ. ಅವರನ್ನು ಯಾವತ್ತಿಗೂ ಮುಟ್ಟಿ ನೋಡಿ ಮಾತನಾಡಿಸಲು ಅಷ್ಟಾಗಿ ಇಷ್ಟಪಡದ ಇಲ್ಲಿನ ವಿಶ್ವವಿಖ್ಯಾತ ಲೇಖಕರು ಪ್ರವೇಶದರ ಎಷ್ಟೇ ದುಬಾರಿಯಾದರೂ ಸರಿ; ತೆತ್ತು ಬಡವರನ್ನು, ಶೋಷಿತರನ್ನು ವೀಕ್ಷಿಸಿ ಮರುಕಪಟ್ಟು ಕಿರುಬೆರಳಿನಿಂದ ಕಣ್ಣೀರು ಕೆಡವುತ್ತಾರೆ. ಇವರಿಗೆ ಹಸಿದವರ ಬಗ್ಗೆ ದುಃಖ, ಸಂಕಟಗಳಲ್ಲಿರುವವರ ಬಗ್ಗೆ ಕತೆ, ಕಾವ್ಯ ಕಾದಂಬರಿ ಬರೆಯುವ ಶತಶತಮಾನಗಳ ಚಟ. ಹೀಗಾಗಿ ಇವರು ತಾವು ಮ್ಯೂಸಿಯಮ್‌ನಲ್ಲಿ ನೋಡಿಬಂದ ಬಡವರ ಕುರಿತು ಕಂಪ್ಯೂಟರ್ ಮುಂದೆ ರೋದಿಸುತ್ತಾ ಸಾಹಿತ್ಯ ಕೃಷಿಗೆ ತೊಡಗುತ್ತಾರೆ. ಅವಮಾನಿತರು, ಬಡವರು, ನಿಕೃಷ್ಟರು, ರೋಗಪೀಡಿತರು, ಗಾಯಗೊಂಡವರು.... ಈ ಯಾರೊಬ್ಬರೂ ಕಾಣದ ಈ ಗ್ರಹದಲ್ಲಿ ಅಳುವನ್ನು ನಿಷೇಧಿಸಲಾಗಿದೆ; ಅಥವಾ ಅಳುವನ್ನು ಕೂಡ ಕತೆ, ಕಾವ್ಯದ ಮೂಲಕ ಸೃಜನಶೀಲ ನಗುವಾಗಿ ಪರಿವರ್ತಿಸಲಾಗುತ್ತಿದೆ. ಆ ನಗುವಿನಂಥ ಅಳು ಬೆಂಗಳೂರು ಕೇಂದ್ರಿತ, ಶನಿವಾರ-ಭಾನುವಾರ ಮಾತ್ರ ಫ್ರೀ ಇರುವ 'ಜಾಗತೀಕರಣದ ಸಖ'ರಿಗೆ ಸುಖ ತರುವಂತಿದ್ದರೆ ಸಾಕು. 'ಸಾಮಾಜಿಕತೆ'ಯೂ 'ವ್ಯಥೆ'ಯೂ ಅದರಿಂದ ಹುಟ್ಟುವುದು ಬೇಡ!

ಇದು ಈ ಕಾಲದ್ದಲ್ಲ ಪ್ಲಾನು!

ಮೂರು ವರ್ಷಗಳ ಹಿಂದೆ ಹಿಂದೂತ್ವದ ಜೊತೆಗೆ ವೈದಿಕ ವಿಷವನ್ನು ಸಮಪ್ರಮಾಣದಲ್ಲಿ ಬೆರೆಸಿ ಓದುಗರಿಗೆ ಉಣಬಡಿಸುತ್ತಿದ್ದ ಕನ್ನಡದ ದಿನಪತ್ರಿಕೆಯೊಂದರಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ರಚನೆಯಾದ ಕೃತಿಗಳನ್ನು ಟಾಪ್-20 ಹೆಸರಿನಲ್ಲಿ ಪೇರಿಸಿಡುವ ಹೊಸಬಗೆಯ ಕಾಯಿಲೆ ಶುರುವಾಯಿತು. ಈ ಕಾಯಿಲೆಯನ್ನು ಕಂಡುಹಿಡಿದ ಖ್ಯಾತಿ ಆ ಪತ್ರಿಕೆಯ ಸಂಪಾದಕರಿಗೆ ಸಲ್ಲುತ್ತದೆ. ಈ ಕಾಯಿಲೆಗೆ ತುತ್ತಾದ ಬಹುಪಾಲು ಲೇಖಕರು ಬದುಕನ್ನು ಕಾಣುವ ಒಳಗಣ್ಣನ್ನು ಕಳೆದುಕೊಂಡು ನರಳುತ್ತಿದ್ದವರು ಮತ್ತು ಬಹುತೇಕ ಒಂದೇ ಕೋಮಿಗೆ ಸೇರಿದವರಾಗಿದ್ದುದು ಆಕಸ್ಮಿಕವೇನಲ್ಲ, ಇವರಲ್ಲಿ ಕೆಲವರು ಸಿದ್ಧಾಂತ, ಬದ್ಧತೆ, ಮಾನವೀಯ ಕಾಳಜಿಯೆಲ್ಲ ಬಸವನಗುಡಿಯ ಕಡಲೆಕಾಯಿ ಪರಿಷೆಯಂತೆ ಎಂದುಕೊಂಡವರು; ಅವೆಲ್ಲಕ್ಕಿಂತ ತಮ್ಮ ಸಾಹಿತ್ಯ ತುರಿಕೆಯೇ ಶ್ರೇಷ್ಠ ಎಂಬ ನಿಲುವಿನವರು. ಅಂತಹ ಲೇಖಕರನ್ನು ಆರಿಸಲು ಇದ್ದ ವಿದ್ವಾಂಸರೂ ಕೂಡ ಅವರ ಸ್ವಬಂಧುಗಳೇ ಆಗಿದ್ದುದೂ ಆಕಸ್ಮಿಕವೇನಲ್ಲ! ಹೀಗೆ ಅಕ್ಕಪಕ್ಕ ಕುಳಿತುಕೊಂಡ ಲೇಖಕರು ಮತ್ತು ವಿದ್ವಾಂಸರು 'ನಿನ್ನ ಬೆನ್ನು ನಾನು ಕೆರೀತೀನಿ; ನನ್ನ ಬೆನ್ನು ನೀನು ಕೆರೆ' ಎಂದು ಪರಸ್ಪರ ಅಂಗಿ ಬಿಚ್ಚಿ ಬೆನ್ನು ಕೆರೆದು ತಮ್ಮ ಸಾಹಿತ್ಯದ ತುರಿಕೆ ನಿವಾರಿಸಿಕೊಂಡರು. ಹೀಗೆ ಬೆನ್ನು ಕೆರೆಯುವ ತಂತ್ರದ ಹಿಂದೆ ಇನ್ನೂ ಒಂದು ಅಜೆಂಡಾ ಇತ್ತು. ಬೆನ್ನು ಕೆರೆಯಬೇಕೆಂದರೆ ಅಂಗಿ ಬಿಚ್ಚಬೇಕು ತಾನೆ? ಹಾಗೆ ಅಂಗಿ ಬಿಚ್ಚಿದವರ ಮೈಯಲ್ಲಿ ದಾರವೇನಾದರೂ ಅಂಟಿಕೊಂಡಿದೆಯೇ ಎಂಬುದನ್ನು ಸುಲಭವಾಗಿ ಪತ್ತೆ ಹಚ್ಚಲಾಯಿತು. ಬೆನ್ನು ಕೆರೆಯುವಾಗ ದಾರ ಕೈಗೆ ಸಿಕ್ಕವರನ್ನು ಒಂದು ಕಡೆ ಆಸನವಿಟ್ಟು ಕೂರಿಸಲಾಯಿತು. ಕೊನೆಗೆ ದಾರ-ನೂಲು ಏನೂ ಇಲ್ಲದೆ ಉಳಿದ ನಾಲ್ಕು ಮಂದಿ ಲೇಖಕರಲ್ಲಿ ದಲಿತರು, ಶೂದ್ರರು, ಮಹಿಳೆಯರು, ಅಲ್ಪಸಂಖ್ಯಾತರನ್ನು ಆಯ್ಕೆ ಮಾಡಲಾಯಿತು; ಸಾಹಿತ್ಯದಲ್ಲಿ ಕನಿಷ್ಠವಾದರೂ ಮಾನವೀಯ ಕಾಳಜಿ ಇರುತ್ತದೆಯಲ್ಲವೆ ಎಂಬ ಕಾರಣಕ್ಕೆ!

ಈ 'ಪರಸ್ಪರ ಬೆನ್ನು ಕೆರೆಯುವ ವಿಶೇಷ ಕಾಯಿಲೆ' ವಿವೇಕ ಶಾನಭಾಗ, ಜಯಂತ ಕಾಯ್ಕಿಣಿ ಮತ್ತು ಅವರ ಸಾಹಿತ್ಯದ ಒಡನಾಡಿಗಳಿಗೆ 'ದೇಶ ಕಾಲ'ದ ವಿಶೇಷ ಸಂಚಿಕೆಯನ್ನು ರೂಪಿಸುವ ಸಂದರ್ಭದಲ್ಲಿ ಮಿಂಚಿನಂತೆ ಹೊಳೆದಿದೆ! ಅದನ್ನೇ ಮಾಡೆಲ್ಲಾಗಿಟ್ಟುಕೊಂಡು ತಯಾರಾದ ವಿಶೇಷವೇ 'ದೇಶ ಕಾಲ' ಸ್ಪೆಷಲ್! ಮಣ್ಣು-ಬೇರು ಇಲ್ಲದ ಸಾಹಿತ್ಯ, ಜಾಗತೀಕರಣದ ಸ್ಪೆಷಲ್ ಕ್ವಾಲಿಟಿಯ ಥಿಯರಿ ಮತ್ತು ಸಾಫ್ಟ್‌ವೇರ್‌ನ ವೈದಿಕತೆ ಸೇರಿಕೊಂಡರೆ ಒಂದು 'ದೇಶ ಕಾಲ'ದ ವಿಶೇಷ ಸಂಚಿಕೆಯನ್ನು ರೂಪಿಸಬಹುದೆಂಬುದು ಇವತ್ತಿನ ಸಾಹಿತ್ಯಿಕ ಪತ್ರಿಕೆಗಳಿಗೊಂದು ಹೊಸ ಫಾರ್ಮುಲಾ.



ಈ ವಿಶೇಷ ಸಂಚಿಕೆಯನ್ನು ಕೈಗೆತ್ತಿಕೊಳ್ಳುತ್ತಿದ್ದಂತೆಯೇ ಸ್ವರ್ಗದಲ್ಲಿ ತಾಂಬೂಲವುಂಡು ಸುಖವಾಗಿರುವ ವೈದಿಕ ಆತ್ಮಗಳು ಧರೆಗಿಳಿದು ಬಂದು 'ದೇಶ ಕಾಲ'ದ ಪ್ರವೇಶದ್ವಾರದಲ್ಲೇ ನಿಂತು ಓದುಗರ ಕೈಕುಲುಕುತ್ತವೆ.

ಡಾಲರ್ಸ್ ಕಾಲನಿ, ವಿಕ್ಟೋರಿಯನ್ ವಿಲ್ಲಾ ಮನೆಗಳ ಮೂಲಕ ಹೊರಜಗತ್ತನ್ನು ಕಂಡವರು, ವಿದ್ಯಾರ್ಥಿಭವನದ ಮಸಾಲೆ ದೋಸೆಯ ಘಮದೊಂದಿಗೆ, ಕಾಫಿಹೌಸಿನ ಟೇಬಲ್ಲುಗಳಲ್ಲಿ ಸಜ್ಜನಿಕೆಯ ಕೃತಕ ನಗೆ ಬೀರಿದವರು, ಗಾಂಧಿ ಬಜಾರಿನ ಪ್ರಕಾಶಕರುಗಳ ಪುಸ್ತಕ ಬಿಡುಗಡೆ ಕಮ್ ಉಪನಯನದ ಆರ್ಕೆಸ್ಟ್ರಾಗಳಲ್ಲಿ ಆಗಾಗ್ಗೆ ಕಾಣಿಸಿಕೊಂಡವರು, 'ದೇಶ ಕಾಲ'ದ ಆಸ್ಥಾನ ವಿದ್ವಾಂಸರಿಂದ ಮುನ್ನುಡಿ, ಬೆನ್ನುಡಿ ಬರೆಸಿಕೊಂಡವರು ಮತ್ತು ಆ ಅರ್ಹತೆ ಪಡೆಯಲು ಸರತಿ ಸಾಲಿನಲ್ಲಿ ನಿಂತವರು, 'ದೇಶ ಕಾಲ'ದ ಚೆಂದಕಿಂತ ಚೆಂದದ ಚಂದಾದಾರರು, ಖಾಕಿ ನಿಕ್ಕರು ತೊಟ್ಟವರು – ಇವರೆಲ್ಲರನ್ನೂ ಕನ್ನಡದ 21ನೇ ಶತಮಾನದ ಬರಹಗಾರರೆಂದು ಪಟ್ಟಿ ಮಾಡಿ 'ದೇಶ ಕಾಲ'ದ ಆತ್ಮಗಳು ಸಖತ್ ಖುಷಿಪಟ್ಟಿವೆ. ಅಷ್ಟೇನೂ ಮಹತ್ವದ ಬರಹಗಾರರಲ್ಲದಿದ್ದರೂ ಪರವಾಯಿಲ್ಲ; 'ಫೋಟೋಜೆನಿಕ್ ಫೇಸ್' ಇದ್ದರೆ ಸಾಕು, ಅಂತಹವರೂ 21ನೇ ಶತಮಾನದ ಬರಹಗಾರರ ಪಟ್ಟಿಯಲ್ಲಿ ಮಿಂಚಿದ್ದಾರೆ.

'ದೇಶ ಕಾಲ' ವಿಶೇಷ ಸಂಚಿಕೆ ರೂಪಿಸುವ ಕೆಲವು ತಿಂಗಳುಗಳ ಮುನ್ನ ಆಯ್ದ ಅನೇಕ ಲೇಖಕರಿಗೆ ಬರಹಗಳನ್ನು ರಚಿಸಿಕೊಡುವಂತೆ '21ನೇ ಶತಮಾನದ ವಿಶೇಷ ಗರ್ಭಧಾರಣೆಯ ಇಂಜೆಕ್ಷನ್' ಒಂದನ್ನು 'ದೇಶ ಕಾಲ'ದ ವೆಚ್ಚದಲ್ಲಿ ಕೊಡಿಸಲಾಗಿತ್ತು, ಕೆಲವರಿಗೆ ಕೆಲವೇ ದಿನಗಳಲ್ಲಿ ಗರ್ಭ ಫಲಿಸಿ ಅರ್ಜೆಂಟಾಗಿ ತಮ್ಮ ಕಾವ್ಯವನ್ನೋ, ಕತೆಯನ್ನೋ, ಪುಡಿ ಲಹರಿಯನ್ನೋ ಹಡೆದು ಕೊಟ್ಟರು. ಕೆಲವರು ಗರ್ಭಪಾತಕ್ಕೀಡಾಗಿ, ಮತ್ತೆ ಗರ್ಭ ಧರಿಸುವ ಯಾವ ಸಾಧ್ಯತೆಗಳೂ ಇಲ್ಲವಾಗಿ ಪುಚಾರಿಲ್ಲದೆ ಮಲಗಿಬಿಟ್ಟರು. ಮತ್ತೆ ಕೆಲವರು 'ಗುಪ್ತ ಸಮಾಲೋಚನೆ'ಯ ಸಲಹೆಗಳನುಸಾರ ಚೆಲ್ಲಾಪಿಲ್ಲಿಯಾದ ಭ್ರೂಣದ ತುಂಡುಗಳನ್ನೇ ಕೊಲಾಜ್ ಕಲಾಕೃತಿಯನ್ನಾಗಿ ರೂಪಿಸಿಕೊಟ್ಟರು. ಹಾಗೆ ಹಲವು ಬಗೆಯ ಸ್ವ-ಪ್ರಯತ್ನ, ವಿಶೇಷ ಪ್ರಯತ್ನ, ಕೃತಕ ಪ್ರಯತ್ನ ಮುಂತಾದವುಗಳ ಮೂಲಕ ಮೈತಳೆದ 'ದೇಶ ಕಾಲ'ದ ವಿಶೇಷ ಸಂಚಿಕೆ ಸ್ವಜಾತಿಗೆ ಹುಟ್ಟಿದ ಅಂಗವಿಕಲ ಕೂಸಿನಂತೆ ಕನ್ನಡ ಸಾಹಿತ್ಯದ ಅಂಗಳದಲ್ಲಿ ಈಗ ಅಡ್ಡಾಡಿಕೊಂಡಿದೆ!

ಏನಂದ್ರಿ ಸಾರ್? ಎನ್ನಾರೈ ಪತ್ರಿಕೆಯಾ?

ಮೊನ್ನೆ ಬೆಂಗಳೂರಿನ ಮಾನವ ಮಂಟಪದ ಕಾರ್ಯಕ್ರಮದಲ್ಲಿ ಸಿಕ್ಕ ಡಾ.ರಾಜೇಂದ್ರ ಚೆನ್ನಿಯವರನ್ನು "ಏನ್ಸಾರ್, ನೀವು ಕೂಡ 21ನೇ ಶತಮಾನ 'ದೇಶ ಕಾಲ'ದ ಬ್ರಾಹ್ಮಣರದು ಎಂದು ಹೇಳಲು ಹೊರಟಿರಾ?" ಎಂದು ಪ್ರಶ್ನಿಸಿ ಮಾತಿಗೆಳೆದಾಗ ಅವರು "ಕನ್ನಡದ ಸಾಹಿತ್ಯಕ ಪತ್ರಿಕೆಗಳಿಗೆ ಇಂತಹ ಸ್ಟಂಟುಗಳು ಬೇಕಿರಲಿಲ್ಲ, ಇದು ನಿಜಕ್ಕೂ vulgar display. ಇದಿ ವಿಶೇಷಾಂಕ ರೂಪಿಸಿರುವುದು ಕನ್ನಡದ ಮನಸ್ಸುಗಳಿಗಲ್ಲ; ಎನ್ನಾರೈ ಮನಸ್ಸುಗಳಿಗೆ. ನಿಮ್ಮ ಇಷ್ಟದ ಕವಿಯೊಬ್ಬರ ಕುರಿತು ಒಂದೆರಡು ಪ್ಯಾರಾಗಳಲ್ಲಿ ಟಿಪ್ಪಣಿ ಬರೆದುಕೊಡಿ ಅಂದಿದ್ದರು. ಬರೆದುಕೊಟ್ಟೆ. ಅದು 21ನೇ ಶತಮಾನದ ಆಯ್ಕೆ ಎಂದು 'ದೇಶ ಕಾಲ'ದ ಯಾರೊಬ್ಬರೂ ನನಗೆ ಹೇಳಲೇ ಇಲ್ಲ, ನನಗಂತೂ ವಿಶೇಷಾಂಕ ಕಂಡಮೇಲೆ ತೀವ್ರ ಬೇಸರವಾಯಿತು. ಇಂತಹ ಅಧ್ವಾನದೊಳಗೆ ನನ್ನ ಹೆಸರು ಬಂದದ್ದು ಮುಜುಗರಕ್ಕೀಡುಮಾಡಿದೆ, ನನ್ನ ಅನೇಕ ಮಿತ್ರರಿಗೆ ಇದನ್ನು ಹೇಳಿ ಹೇಳಿ ಸಾಕಾಗಿಹೋಗಿದೆ" ಎಂದು ಹೇಳಿ ತಾವು ಬರೆದುದಕ್ಕೆ ಕೈಕೈ ಹಿಚುಕಿಕೊಂಡರು.

ಡಾ. ರಾಜೇಂದ್ರ ಚೆನ್ನಿಯವರಂತೆ ಅನೇಕರಿಗೆ ಇದೇ ಬಗೆಯ ಅನುಭವಗಳಾಗಿರುವ ಸಂಗತಿ ಒಂದೊಂದಾಗಿ ಬೆಳಕಿಗೆ ಬರತೊಡಗಿವೆ. ಸಂಚಿಕೆಗೆ ಬರೆಯುವುದಕ್ಕೂ ಮುಂಚೆ ತಮಗೆ 'ದೇಶ ಕಾಲ'ದಿಂದ ಬಂದ 'ಸ್ಪೆಷಲ್ ಆಫರ್'ನ ರೋಮಾಂಚನದಿಂದಲೇ ಮೂರ್ಛೆ ಹೋಗಿದ್ದ ಕೆಲ ಶೂದ್ರ, ದಲಿತ ಲೇಖಕರು, ಸಂಚಿಕೆ ಹೊರಬರುತ್ತಲೇ ಈಗ ಅದರೊಳಗಿಂದ ಹೊರಹೊಮ್ಮುತ್ತಿರುವ ಜಾತೀಯತೆಯ ಪರಿಮಳಕ್ಕೆ ಮೂರ್ಛೆ ಹೋಗತೊಡಗಿದ್ದಾರೆ.

ಇಂತಹ 'ದೇಶ ಕಾಲ'ವನ್ನು ಶ್ರದ್ಧೆಯಿಂದ ಕೂತು ಜಪಮಣಿಯ ಹಾಗೆ ಪೋಣಿಸಿರುವ ತಪಸ್ವಿಗಳು ಯಾರು ಎಂದು ನೋಡಲು ಹೊರಟರೆ ಅವರು 'ದೇಶ ಕಾಲ'ದ ಹೊಸ್ತಿಲಲ್ಲೇ 'ಪಕ್ಕ ಚುಕ್ಕ'ರಂತೆ ಕುಂತ ವಿವೇಕ ಶಾನಭಾಗ ಮತ್ತು ಜಯಂತ ಕಾಯ್ಕಿಣಿ. ಈ ಇಬ್ಬರೂ ತಮ್ಮ ಪಕ್ಕದಲ್ಲೇ ಇರುವ ಯು.ಆರ್. ಅನಂತಮೂರ್ತಿಯವರಿಂದ ಏನನ್ನೂ ಕಲಿಯದಿದ್ದರೂ ಕನ್ನಡದಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿ ಮತ್ಯಾರಿಗೂ ಬರೆಯಲು ಬರುವುದಿಲ್ಲ ಎಂಬ ಸುಪ್ತಮನಸ್ಸಿನ ಸನಾತನಿಗಳು ರಚಿಸಿರುವ ವೈದಿಕ ಪಾಠಗಳನ್ನು ಉರುಹೊಡೆದು ಕಲಿತುಕೊಂಡಂತಿರುವುದರ ವಿಶೇಷ ಪರಿಣಾಮವನ್ನು 'ದೇಶ ಕಾಲ'ದ ಪ್ರತಿಪುಟದಲ್ಲೂ ಕಾಣಬಹುದಾಗಿದೆ. ಎಷ್ಟೇ ಟೀಕೆಗಳಿದ್ದರೂ ಅನಂತಮೂರ್ತಿಯವರು ಈ ಮಣ್ಣಿನ ಕಷ್ಟಸುಖಗಳ ಬಗ್ಗೆ ಲೇಖಕರಾಗಿ ಸಾರ್ವಜನಿಕವಾಗಿ, ಬದ್ಧತೆಯಿಂದ ಮಾತನಾಡಿದ್ದಾರೆ. ಮಾತನಾಡುತ್ತಲೂ ಇದ್ದಾರೆ. ಅನಂತಮೂರ್ತಿಯವರ ವಿವೇಕ ಈ ಹಾದಿಯಲ್ಲಿ ಅವರನ್ನು ಇವತ್ತಿಗೂ ಜೀವಂತವಾಗಿಟ್ಟಿದೆ.

ಅಂತಹ ಅನಂತಮೂರ್ತಿಯವರಿಂದ ಯಾವೊಂದು ಸ್ಫೂರ್ತಿಯನ್ನೂ ವಿವೇಕವನ್ನೂ ಪಡೆಯದ ಶಾನಭಾಗ, ಕಾಯ್ಕಿಣಿಗಳು ತಮಗನ್ನಿಸಿದ್ದಷ್ಟೇ ಸಾಹಿತ್ಯ ಎಂಬುದರ ಆಧಾರದ ಮೇಲೆ ವಿಶೇಷ ಸಂಚಿಕೆಯನ್ನು ರೂಪಿಸಿದ್ದಾರೆ. 'ದೇಶ ಕಾಲ'ದಲ್ಲಿ ಬರೆಯುವವರನ್ನೂ ಮೀರಿಸುವಂತೆ ಇವತ್ತು ದಲಿತ ಶೂದ್ರರಿಗೆಲ್ಲ ಬರೆಯಲು ವಸ್ತು, ಸರಕು ಮತ್ತು ಶಕ್ತಿ ದೊರಕುತ್ತಿರುವುದು 'ದೇಶ ಕಾಲ' ಬಳಗದ ನಿದ್ರೆಗೆಡಿಸಿರುವ ಮಾಹಿತಿಗಳಿವೆ. ಆರೀಫ್ ರಾಜಾನಂತಹ ಮನುಷ್ಯ ಸಂವೇದನೆಯ ಕವಿಯ ಪಕ್ಕದಲ್ಲೇ ಯೋಗರಾಜ ಭಟ್ಟನಂಥ ಸಿನಿಮೀಯ ಮನುಷ್ಯನನ್ನು ಕವಿಯೆಂದು ಕರೆದು 21ನೇ ಶತಮಾನದ ಕವಿಗಳ ಪಟ್ಟಿಯ ಪಕ್ಕದಲ್ಲೇ ನಿಲ್ಲಿಸಿ ಫೋಟೋ ತೆಗೆಸಲಾಗಿದೆ. ಇದರ ಮರ್ಮವೇನೆಂದು ಕೇಳಿದರೆ ಅದಕ್ಕೆ ಕಾಯ್ಕಿಣಿಯವರಿಂದ ಬರಬಹುದಾದ ಉತ್ತರ: 'ಅನಿಸುತಿದೆ ಯಾಕೋ ಇಂದು... ಭಟ್ಟರೆಲ್ಲ ಕವಿಗಳೇ ಎಂದು!'

'ದೇಶ ಕಾಲ'ದ ತುಂಬಾ 'ನಮ್ಮನಮ್ಮವರೇ' ತುಂಬಿಕೊಂಡರೆ ಮತ್ತೆ ಯಾರಾದರೂ 'ರೋಸ್ಟರ್ ಪದ್ಧತಿ'ಯ ಕುರಿತು ಪ್ರಶ್ನೆ ಎತ್ತುವರೆಂಬ ಭೀತಿಯಲ್ಲಿ ಒಲ್ಲದ ಮನಸ್ಸಿನಿಂದಲೇ ಇಲ್ಲಿ ಮೊಗಳ್ಳಿ ಗಣೇಶ್, ಅಮರೇಶ ನುಗಡೋಣಿ, ಬಿ.ಟಿ.ಜಾಹ್ನವಿ, ಕಲಿಗಣನಾಥ ಗುಡದೂರು, ಆರೀಫ್ ರಾಜಾ, ರವಿ ದ್ರಾವಿಡ, ಅರುಣ್ ಜೋಳದಕೂಡ್ಲಿಗಿ ಮುಂತಾದ ಕೆಲವರನ್ನು ಕುಳ್ಳಿರಿಸಿ 'ದೇಶ ಕಾಲ'ದ ಜಗಲಿ, ಪಡಸಾಲೆಗಳಲ್ಲಿ ಉಳಿದಿದ್ದ ಖಾಲಿಜಾಗವನ್ನು ಭರ್ತಿ ಮಾಡಿಕೊಳ್ಳಲಾಗಿದೆ. 'ದೇಶ ಕಾಲ'ದ ಸಾಹಿತ್ಯಯಾಗಗಳಿಗೆ ತುಪ್ಪ, ಸಮಿತ್ತು ಸುರಿಯುವ ಪವಿತ್ರ ಕೈಂಕರ್ಯವನ್ನು ಅಲ್ಲಲ್ಲಿ ಟಿ.ಪಿ. ಅಶೋಕ, ಓ.ಎಲ್. ನಾಗಭೂಷಣಸ್ವಾಮಿ, ಸಿ.ಎನ್. ರಾಮಚಂದ್ರನ್ ತರಹದ ವಿದ್ವಜ್ಜನ ಸಮರ್ಥವಾಗಿ ನಿಭಾಯಿಸಿದ್ದಾರೆ.

ಸಾಮಾನ್ಯವಾಗಿ ಮುಖ್ಯಕೃತಿಯೊಂದನ್ನು ಗುರುತಿಸಿ ಪರಿಚಯಿಸುವಾಗ ಆ ಕೃತಿಯ ಲೇಖಕರ ಫೋಟೋವನ್ನು ಪ್ರಕಟಿಸುವುದು ರೂಢಿ. ಆದರೆ 'ದೇಶ ಕಾಲ'ದಲ್ಲಿ ಆ ಲೇಖಕರನ್ನು ಪರಿಚಯಿಸಿರುವ ವಿದ್ವಾಂಸರ ಚಿತ್ರ ಹಾಕಲಾಗಿರುವುದು 21ನೇ ಶತಮಾನದ ವಿಶಿಷ್ಟ ಸಾಂಸ್ಕೃತಿಕ ಸಂಗತಿಗಳಲ್ಲೊಂದು. ಹಾಗಾಗಿ ಇಲ್ಲಿ ಟಿ.ಪಿ. ಅಶೋಕ ಪದೇ ಪದೇ ಮುಖದೋರುತ್ತಾರೆ. ಈ ಇಪ್ಪತ್ತೊಂದು ಬರಹಗಾರರಲ್ಲಿ ತಮ್ಮವೇ ಒಲವು-ನಿಲುವುಗಳುಳ್ಳ ಸಾಹಿತ್ಯಮುಖಗಳನ್ನು ಕೊಂಡಾಡುವ, ಅಕಸ್ಮಾತ್ ಉದ್ದವಾಗಿರುವ ಚಿಡ್ಡಿಗಳನ್ನು ತಮ್ಮ ಆಕಾರಗಳಿಗೆ ತಕ್ಕಂತೆ ಕತ್ತರಿಸಿ 'ಸರಿಯಾದ ಚಿಡ್ಡಿ'ಗಳನ್ನಾಗಿಸುವ ಸಂಸ್ಕಾರ ಕಾರ್ಯವೂ ಅಲ್ಲಲ್ಲಿ ನಡೆದಿದೆ.

ಕನ್ನಡದ ಬಹುತೇಕ ಪತ್ರಿಕೆಗಳ ವಿಶೇಷಾಂಕಗಳಲ್ಲಿ ಸಾಕಷ್ಟು ಬರೆದು ಶತಮಾನದಷ್ಟು ಅನುಭವ ದಕ್ಕಿಸಿಕೊಂಡಿರುವ ವಿವೇಕ ಶಾನಭಾಗ ಮತ್ತು 'ಭಾವನಾ'ತ್ಮಕವಾಗಿಯಷ್ಟೇ ಪತ್ರಿಕೆಯನ್ನು ರೂಪಿಸಿ ಗೊತ್ತಿರುವ ಜಯಂತ ಕಾಯ್ಕಿಣಿಯವರು 'ದೇಶ ಕಾಲ'ದ ವಿಶೇಷ ಸಂಚಿಕೆಯನ್ನು ತಮ್ಮ ನೆಂಟರಿಷ್ಟರ ಅಗ್ರಹಾರವನ್ನಾಗಿಸುವುದರಲ್ಲಿ ಸಾಕಷ್ಟು ಯಶಸ್ವಿಯಾಗಿದ್ದಾರೆ.

ಎರಡನೇ ದಿಬ್ಬಣಕ್ಕೆ ಹೊರಟ 'ದೇಶ ಕಾಲ'ಕ್ಕೆರಡು ಕಿವಿಮಾತು:

ಇಷ್ಟೆಲ್ಲ 'ಸ್ಪೆಷಾಲಿಟಿ'ಗಳ 'ದೇಶ ಕಾಲ' ಈಗ ಎರಡನೇ ಮುದ್ರಣದ ದಿಬ್ಬಣಕ್ಕೆ ಸಜ್ಜಾಗುತ್ತಿರುವ ಸಮಾಚಾರ ಬುಲ್‌ಟೆಂಪಲ್‌ನ ಅಕ್ಕಪಕ್ಕದ ರಸ್ತೆಗಳಿಂದ ಹಿಡಿದು ಅಮೆರಿಕದ 'ಅಕ್ಕ'ನವರೆಗೂ ತಲುಪಿದೆಯಂತೆ. ಹಾಗಾಗಿ ಮುಂದಿನ ಸಂಚಿಕೆಗೆ ಒಂದೆರಡು ಕಿವಿಮಾತುಗಳನ್ನು ಹೇಳುವುದು ನಮ್ಮ 'ಸಾಂಸ್ಕೃತಿಕ ಜವಾಬ್ದಾರಿ' ಯೆಂದು ನಾವು ಭಾವಿಸಿದ್ದೇವೆ.

▸▸ 18

ಮಾತು ಸೋತ ಕರ್ನಾಟಕ

ವಿಶೇಷ ಲೇಖನ


• ಜೆ. ರಾಜಶೇಖರ

ಇತ್ತೀಚೆಗೆ ಪ್ರಕಟವಾದ ಅನಂತಮೂರ್ತಿಯವರ ಒಂದು ಪ್ರಬಂಧ ...ತಲೆಬರಹದ ಹೆಸರು "ಮಾತು ಸೋತ ಭಾರತ." ಮಾತು ಲೇಖಕರಿಗೆ ...ಸುವ ಒಂದೇ ಒಂದು ಮಾಧ್ಯಮ. "ಅಹುದಹುದೆನ್ನಿಸುವಂತೆ" ಮಾತನ್ನು ...ಸುವ ನೈಪುಣ್ಯವೇ ಲೇಖಕನ ಅಸಲು ಕಸುಬು. ಹಾಗಿರುತ್ತ ಕನ್ನಡದ ...ಸತ್ವದ ಲೇಖಕರೊಬ್ಬರಿಗೆ ಮಾತು ಸೋತಿದೆ ಎನ್ನಿಸುವುದು, ಅವರ ...ಾದದ ಅಗಾಧತೆಯನ್ನು ಸೂಚಿಸುತ್ತದೆ. ಮಾತು ಅನುಭವವನ್ನು ಹೇಳಲು ...ೀಲುವುದು ಎಂದರೆ ಕಡಲಿನ ನೀರು ತನ್ನ ಉಪ್ಪಿನ ಗುಣವನ್ನೇ ...ಮಕೊಂಡಂತೆ; ಹತಾಶೆಯ ಆತ್ಯಂತಿಕ ಸ್ಥಿತಿ ಇದು. ಈ ಸ್ಥಿತಿ ತಲುಪಿದ ...ಖಕರಲ್ಲಿ ಅನಂತಮೂರ್ತಿ ಮೊದಲನೆಯವರೇನೂ ಅಲ್ಲ, ಶತಮಾನಗಳ ...ಹಿಯೇ ಅಲ್ಲಮ ಶಬ್ದಸೂತಕದ ಬಗ್ಗೆ ಹೇಳಿದ. 'ಪದ' ಮತ್ತು 'ಪದಾರ್ಥ'ದ ...ವಿನ ಜೈವಿಕ ಸಂಬಂಧ ನಾಶವಾಗಿ ಸೂತಕದ ಒಂಟಿತನ ಅನುಭವಿಸುವುದು ...ಶಃ ಎಲ್ಲ ಕಾಲದಲ್ಲೂ ಪ್ರತಿಭಾವಂತ ಲೇಖಕರ ಪಾಡು. ಆದರೆ ...ತು ಸೋತಿದೆ ಅನ್ನಿಸುವಾಗಲೂ ಲೇಖಕನಿಗೆ ಮಾತು ಬಿಟ್ಟು ಬೇರೆ ... ಇಲ್ಲ, ಶಬ್ದ ಸೂತಕವನ್ನು ಸಹ ಶಬ್ದಗಳಲ್ಲೇ ಆತ ಹೇಳಬೇಕು. ಈ ...ವಾರ್ಯತೆಯಲ್ಲೇ ಲೇಖಕ ತನಗೆ ತಾನೇ ಮಾತಾಡಿಕೊಳ್ಳುವಂತೆ ...ಯುವುದು.

...ಓದುಗರನ್ನು ಉದ್ದೇಶಿಸಿ ಬರೆಯುವಾಗ ಬರುವ ಭಂಗಿ, ವರಸೆ ಮತ್ತು ...ಭಾವಗಳನ್ನೆಲ್ಲ ಕಳಚಿಕೊಂಡು ಮಾತು "ಸ್ಫಟಿಕದ ಸಲಾಕೆಯಂತೆ" ...ದರ್ಶಕವಾಗುವುದು ಕೂಡ ಅಂತಹ ಕ್ಷಣಗಳಲ್ಲೇ. ಹಾಗಾಗಿ ಲೇಖಕನೊಬ್ಬನ ...ಶೆಯ ಸ್ವಗತವೂ, ತನ್ನ ಸಮುದಾಯದ ಜೊತೆ ಆತ ನಡೆಸುವ ಸಂವಾದವೇ ...ು. ಮಾತು ಸೋತಿದೆ ಅನ್ನಿಸಿದಾಗಲೂ ಅದರಲ್ಲಿ ಶ್ರದ್ಧೆ ಕಳೆದುಕೊಳ್ಳದೆ ...ು ಮುಂದುವರಿಸುವುದು ಲೇಖಕ ಮತ್ತು ಓದುಗರ ನಡುವೆ ಏರ್ಪಡುವ ...ು good faith ನ ಒಡಂಬಡಿಕೆ. ಇದು ಸಾಧ್ಯವಿಲ್ಲದ ಸಮಾಜಗಳಲ್ಲಿ ...ರ ಸಾಹಿತ್ಯವಷ್ಟೇ ಇರುತ್ತದೆ; ಸಾಹಿತ್ಯ ಭೂಗತವಾಗುತ್ತದೆ. ಕನ್ನಡ ...ತ್ಯ ಸದ್ಯಕ್ಕೆ ಆ ಪಾತಾಳವನ್ನು ತಲುಪಿಲ್ಲ, ಲೇಖಕರ ಬಾಯಿಬಡಿದು ...ನಿರಿಸುವ, ವಿವಿಧ ಮತ ಪಂಥ ಮತ್ತು ಪಕ್ಷಗಳ ಕರಪತ್ರ ವಿತರಕರ ...ಳಿಯೂ ನಮ್ಮಲ್ಲಿ ಈವರೆಗೆ ಅಷ್ಟಾಗಿ ಕಾಣಿಸದು.

...ಆದರೆ ಈಗ ರಾಜ್ಯದಲ್ಲಿ ಅತ್ಯಧಿಕ ಪ್ರಸಾರದ ದಿನಪತ್ರಿಕೆಯೂ, ಬಿಜೆಪಿಯ ...ೋಷಿತ ಕರಪತ್ರವೂ ಆಗಿರುವ ವಿಜಯ ಕರ್ನಾಟಕ, ಆ ಪಕ್ಷದ ...ತವನ್ನು ವಿರೋಧಿಸುವ ಲೇಖಕರನ್ನು ಅಪರಾಧಿಗಳ ಹಾಗೆ ಚಿತ್ರಿಸಿ, ...ಗರನ್ನು ಬ್ರೇನ್‌ವಾಶ್ ಮಾಡುತ್ತಿದೆ. ಭಿನ್ನಮತವನ್ನು ಹೊಸಕಿ ಹಾಕುವ ...ಪತ್ರಿಕೆಯ ರೋಡ್ ರೋಲರ್ ಕಾರ್ಯಾಚರಣೆಗೆ ಮತ್ತೆ ಮತ್ತೆ ...ಯಾಗಿರುವವರು ಅನಂತಮೂರ್ತಿ. ಈಗ ಅವರ ಮೇಲೆ ವಿಜಯ ...ಟಕ ಇನ್ನೊಂದು ಕಂತಿನ ದಾಳಿ ನಡೆಸಿದೆ. ತಮ್ಮ ಬಳಿ ಮಾತು ...ಸುವ ಯಂತ್ರಗಳಿವೆ ಎಂಬ ಒಂದೇ ಒಂದು ಕಾರಣಕ್ಕೆ ಅನಂತಮೂರ್ತಿ ... ಏನು ಬೇಕಾದರೂ ಪ್ರಕಟಿಸಿ ಬಚಾವಾಗಬಹುದು ಎಂದು ಈ ...ದಕರು ಭಾವಿಸಿರುವ ಹಾಗಿದೆ. ದಡ್ಡರಿಗೆ ಧೈರ್ಯ ಜಾಸ್ತಿ ಎಂದು ...ುವುದು ಸುಳ್ಳಲ್ಲ.

...ವಿಜಯ ಕರ್ನಾಟಕ, ಅನಂತಮೂರ್ತಿಯವರ ಮೇಲೆ ನಡೆಸಿದ ಈ ...ಗೆ ತಕ್ಷಣದ ಕಾರಣ ಕನ್ನಡದ ಇನ್ನೊಂದು ಜನಪ್ರಿಯ ಪತ್ರಿಕೆ ಪ್ರಜಾವಾಣಿಯಲ್ಲಿ ...ವಾಗಿರುವ ಅವರ ಒಂದು ಲೇಖನ. ('ಮಾವೋವಾದ: ಚರಿತ್ರೆಯಲ್ಲಿ ... ಬಾವಿ'. ತಾ. 9.6.10 ಪುಟ 6). ನಕ್ಸಲ್ ಹಿಂಸೆಗೆ ಸ್ಫೂರ್ತಿ ಕೊಟ್ಟ ಮಾವೋವಾದ ಮತ್ತು ಆ ಹಿಂಸೆಗೆ ಕಾರಣಗಳನ್ನು ಒದಗಿಸಿದ ವ್ಯವಸ್ಥೆಯ ಪಾಪ ಕೃತ್ಯಗಳನ್ನು ಪರಿಶೀಲಿಸುವ ಈ ಲೇಖನ ನಕ್ಸಲರು ತಮ್ಮ ಬಗ್ಗೆ ತಾವೇ ಕೊಟ್ಟು ಕೊಳ್ಳುವ ನಿರೂಪಣೆಗಳನ್ನು ತಿರಸ್ಕರಿಸುತ್ತದೆ. ಖಡಾಖಂಡಿತವಾಗಿ ಮಾತಾಡುವುದು ಅನಂತಮೂರ್ತಿಯವರ ಶೈಲಿಯೇ ಅಲ್ಲ, ನಕ್ಸಲ್ ಹಿಂಸೆಯನ್ನು ಮಾತ್ರ ತಮ್ಮ ಲೇಖನದಲ್ಲಿ ಅವರು ಓದುಗರಿಗೆ ಆ ಬಗ್ಗೆ ಚೂರು ಸಂಶಯ ಉಳಿಯದಂತೆಯೆ ಖಂಡಿಸಿದ್ದಾರೆ. ಆದಾಗ್ಯೂ ವಿಜಯ



ಕರ್ನಾಟಕದ ಅಂಕಣ ಪತ್ರಕರ್ತ ರೊಬ್ಬರು, ಅನಂತಮೂರ್ತಿಯವರ ಈ ಲೇಖನಕ್ಕೆ ಪ್ರತಿಕ್ರಿಯೆಯಾಗಿ ಬರೆದ ತನ್ನ ಬರಹ "ಅನಂತಮೂರ್ತಿಯವರೇ ಮಾವೋ ಏನು ಮಹಾತ್ಮಾ ಗಾಂಧಿಯೇ?" ಎಂಬ ಶೀರ್ಷಿಕೆ ಕೊಟ್ಟಿದ್ದಾರೆ! (ವಿಜಯ ಕರ್ನಾಟಕ ತಾ. 12.6.10, ಪುಟ 6). ಅನಂತಮೂರ್ತಿ ತನ್ನ ಲೇಖನದಲ್ಲಿ ಎಲ್ಲೂ ಹಾಗೆ ಹೇಳಿಲ್ಲ; ಅವರನ್ನು ಹಾಗೆ ಅಪಾರ್ಥ ಮಾಡಿಕೊಳ್ಳಲು ಆಸ್ಪದ ಕೊಡದಷ್ಟು ಖಚಿತವಾಗಿ ಅವರು ತನ್ನ ಲೇಖನದಲ್ಲಿ ಮಾವೋವಾದ ಹಾಗೂ ಅದು ಪ್ರೇರಿಸುವ ಹಿಂಸೆಯನ್ನೂ ಖಂಡಿಸಿದ್ದಾರೆ. ಚೀನಾದಲ್ಲಿ ಮಾವೋ ಬದುಕಿದ್ದಾಗ ನಡೆದ ನರಮೇಧ, ಸಾಂಸ್ಕೃತಿಕ ಕ್ರಾಂತಿಯ ಉತ್ಪಾತಗಳು, ಮಾವೋ ನಂತರ ಚೀನಾ ಆಯ್ದುಕೊಂಡ ಪಶ್ಚಿಮ ಪ್ರಣೀತ ಅಭಿವೃದ್ಧಿ ಮಾದರಿಯ ಹಿಂಸೆ- ಇವೆಲ್ಲವನ್ನೂ ಅನಂತಮೂರ್ತಿ ದಶಕಗಳಿಂದಲೂ ಖಂಡಿಸುತ್ತಲೇ ಬಂದಿದ್ದಾರೆ. ಅವರ ಬಗ್ಗೆ ವಿಜಯ ಕರ್ನಾಟಕದ ಅಂಕಣಕಾರ ಬರೆದಿರುವುದನ್ನು ಓದಿದರೆ, ಅನಂತಮೂರ್ತಿಯವರ ಬರಹಗಳ ಪ್ರಾಥಮಿಕ ಜ್ಞಾನವೂ ಇವರಿಗೆ ಇಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಹಾಗಿದ್ದೂ ಇವರು ಅನಂತಮೂರ್ತಿ ಬಗ್ಗೆ ತನ್ನ ಮನಸ್ಸಿಗೆ ತೋಚಿದ್ದನ್ನೆಲ್ಲ ಬರೆಯುತ್ತಾರೆ ಎಂದರೆ ಇವರು ದಡ್ಡರಷ್ಟೇ ಅಲ್ಲ; ಮೂರ್ಖರೂ ಹೌದು. ವಿಜಯ ಕರ್ನಾಟಕದ ಸಂಪಾದಕರ ಹಾಗೆ ಅದರ ಅಂಕಣಕಾರರಿಗೂ ಎಲ್ಲಿಲ್ಲದ ಧೈರ್ಯ. ತನ್ನ ಸುಳ್ಳನ್ನು ಇವರು ಲೇಖನದ ಶೀರ್ಷಿಕೆಯಿಂದಲೇ ಪ್ರಾರಂಭಿಸುತ್ತಾರೆ. ಲೇಖನದ ಉದ್ದಕ್ಕೂ ಅನಂತಮೂರ್ತಿಯವರ ಬಗೆಗಿನ ತನ್ನ ಅಜ್ಞಾನ, ಅರೆಬರೆ ಜ್ಞಾನ ಮತ್ತು ಅಸೂಕ್ಷ್ಮತೆಗಳನ್ನು ಎಗ್ಗಿಲ್ಲದ ಮಾತುಗಳಲ್ಲಿ ಬಿತ್ತರಿಸಿದ್ದಾರೆ.

ಸಂಘಪರಿವಾರದ ವಿರೋಧಿಗಳನ್ನು ಬಗ್ಗುಬಡಿಯಲು ವಿಜಯ ಕರ್ನಾಟಕ, ಸೆನ್ಸಾರ್ ಶಿಪ್, ಅಪಪ್ರಚಾರ ಮತ್ತು ತೇಜೋವಧೆಗಳಂತಹ ಪಾಪಕೃತ್ಯಗಳನ್ನು ಹಿಂದಿನಿಂದಲೂ ಮಾಡುತ್ತ ಬಂದಿದೆ. ಅನಂತಮೂರ್ತಿ ವಿರುದ್ಧ ಓದುಗರ ವತಿಯಿಂದ ಎಸ್.ಎಂ.ಎಸ್. ದಾಳಿಯನ್ನು ಸಂಘಟಿಸಿ ಕನ್ನಡ ಪತ್ರಿಕಾ ಪ್ರಪಂಚದಲ್ಲಿ ಒಂದು ದಾಖಲೆ ಯನ್ನೇ ನಿರ್ಮಿಸಿದ ಹೆಗ್ಗಳಿಕೆಯೂ ಆ ಪತ್ರಿಕೆಗೆ ಇದೆ. ಕನ್ನಡ ಸಂಸ್ಕೃತಿಯ ಜೀರ್ಣಾಗ್ನಿ ಇಂತಹ ವಿಕಾರಗಳನ್ನೂ ಅರಗಿಸಿಕೊಂಡಿತು. ಅನಂತಮೂರ್ತಿಯವರಾದರೂ ಸಂಖ್ಯಾಬಲದವರ ಇಂತಹ ಹೀನಚೇಷ್ಟೆಗಳಿಂದ ಧೃತಿಗೆಡದೆ ತಮ್ಮ ವೃತ್ತಿಯನ್ನು ನಡೆಸಿಕೊಂಡು ಬಂದಿದ್ದಾರೆ. ಹಿಂಸೆ ಮತ್ತು ಸರ್ವಾಧಿಕಾರಗಳನ್ನು ಅವರು ಎಡ-ಬಲ ಎಂದು ಪಕ್ಷಪಾತ ಮಾಡದೆ, ತನ್ನ ವೃತ್ತಿಜೀವನದ ಮೊದಲಿನಿಂದಲೂ ವಿರೋಧಿಸುತ್ತಿದ್ದಾರೆ. ಅವರ ಒಂದು ಪ್ರಬಂಧದ ಶೀರ್ಷಿಕೆಯೇ "ಹಿಂಸೆಯ ಎಡ-ಬಲ." ಪ್ರತಿನಿತ್ಯ ಮನೆ ಗುಡಿಸಿ, ನೆಲ ಒರೆಸಿ, ರಂಗೋಲಿ ಇಕ್ಕಿ ಒಲೆ ಉರಿಸುವ ಗೃಹಿಣಿಯ ಕಾಯಕದಂತೆ ಅವರ ಬರವಣಿಗೆ. ನಾಡಿನ ಸ್ಥಿತಿಯ ಬಗ್ಗೆ ತನ್ನ ಆತಂಕವನ್ನು ಹೇಳುವ ಪ್ರಬಂಧಗಳ ಜೊತೆ ಮೋಹಕವಾದ ಕತೆ, ಕವಿತೆ ಮತ್ತು ಅನುವಾದಗಳನ್ನೂ ಅವರು ನಮಗೆ ಕೊಟ್ಟಿದ್ದಾರೆ. ಕಳೆದ ಐವತ್ತು ವರ್ಷಗಳಿಂದ ಅನಂತಮೂರ್ತಿಯವರ ಓದುಗ ಸಮುದಾಯ, ಅವರ ಜೊತೆ ಸಮ್ಮತಿ, ಭಿನ್ನಮತ ಮತ್ತು ಒಮ್ಮೊಮ್ಮೆ ಜಗಳದ ನಂಟು ಬೆಳೆಸಿಕೊಂಡಿದೆ. ಬ್ರಾಹ್ಮಣವಾದಿ, ಬ್ರಾಹ್ಮಣ ದ್ವೇಷಿ, ಪ್ರಚ್ಛನ್ನ ಕಮ್ಯುನಿಸ್ಟ್, ಸಾಫ್ಟ್ ಹಿಂದೂತ್ವವಾದಿ, ಹುಸಿ ಲಿಬರಲ್, ಲೋಹಿಯಾ ಸಮಾಜವಾದಿ-ಹೀಗೆ ಅವರ ಹೆಸರಿಗೆ ಹಲವು ವಿಶ್ಲೇಷಣಗಳು; ಮತ್ತು ಅವುಗಳಲ್ಲಿ ಪ್ರತಿಯೊಂದೂ ಮತ್ತೊಂದನ್ನು ಹೊಡೆದು ಹಾಕುವಂತಹದ್ದು. ಅನಂತಮೂರ್ತಿಯವರ ಯೋಚನೆಗಳು ಅಕ್ಷರಶಃ ತೆರೆದ ಪುಸ್ತಕ ಹಾಗಿರುತ್ತ ಇವರ ನಿಲುವುಗಳ ಬಗ್ಗೆ ಹಸಿಹಸಿ ಸುಳ್ಳು ಹೇಳುವ ಸದ್ರಿ ಅಂಕಣಕಾರರ ಬುದ್ಧಿಗೇಡಿತನವನ್ನು ಹೊಟ್ಟೆಗೆ ಹಾಕಿಕೊಳ್ಳೋಣ; ಆದರೆ ಅದನ್ನು ಹಾಗೆ ಹಾಗೆಯೇ ಪ್ರಕಟಿಸುವ ಪತ್ರಿಕೆಯ ಸಂಪಾದಕರಿಗೂ ಬುದ್ಧಿ ಬೇಡವಾ?

ವಿಜಯ ಕರ್ನಾಟಕ


ಹಾಗೆ ನೋಡಿದರೆ ವಿಜಯ ಕರ್ನಾಟಕದ ಸಂಪಾದಕರ ಅವಿವೇಕ ಅಂತಹ ದೊಡ್ಡ ಸಮಸ್ಯೆ ಏನಲ್ಲ, ಕನ್ನಡಿಗರು ಆತಂಕಪಡಬೇಕಾದದ್ದು ಅವರ ಫ್ಯಾಸಿಸ್ಟ್ ಅಜೆಂಡಾ ಬಗ್ಗೆ. ಅನಂತಮೂರ್ತಿ ಬಗ್ಗೆ ಈ ಸಂಪಾದಕರಿಗಾಗಲೀ, ಅಂಕಣಕಾರರಿಗಾಗಲೀ ವೈಯಕ್ತಿಕ ದ್ವೇಷವೇನೂ ಇಲ್ಲ; ಇಬ್ಬರೂ ಮಾಡುತ್ತಿರುವುದು ಹಿಂದೂತ್ವದ ಕೈಂಕರ್ಯವನ್ನು. ಆ ಸಿದ್ಧಾಂತಕ್ಕೆ ಜನರನ್ನು ಒಲಿಸಿಕೊಳ್ಳಲು, ಸುಳ್ಳು ಹೇಳಿದರೆ ಅವರ ಪ್ರಕಾರ ಅದು ಸುಳ್ಳಲ್ಲ; ಬದಲಿಗೆ ಅದು ತಂತ್ರಗಾರಿಕೆ, ಸ್ಟ್ರೇಟಜಿ. ಎಡ-ಬಲ ಎರಡೂ ಸಿದ್ಧಾಂತಗಳಲ್ಲಿ ಈ ತಂತ್ರಗಾರಿಕೆಗೆ ಪ್ರಧಾನ ಸ್ಥಾನವಿದೆ. ಈ ಸಿದ್ಧಾಂತಗಳ ಸ್ವಯಂಸೇವಕರಿಗೆ, ತಮ್ಮ ತಮ್ಮ ಸಿದ್ಧಾಂತದ ಬಗ್ಗೆ ಮಾತ್ರವಲ್ಲ ಜಗತ್ತಿನ ಯಾವ ಸಂಗತಿಯ ಬಗ್ಗೆಯೂ ಚೂರೂ ಸಂದೇಹವಿರುವುದಿಲ್ಲ. ತಮ್ಮ ಸಿದ್ಧಾಂತ ಸೃಷ್ಟಿಸುವ ಹಿಂಸೆಯ ಬಗ್ಗೆ ಇವರಿಗೆ ಪಶ್ಚಾತ್ತಾಪ ಬಿಡಿ ಪರಿವೆ ಕೂಡ ಇರುವುದಿಲ್ಲ. ಎಂತಹ ನರಮೇಧಕ್ಕೂ ಈ ಸ್ವಯಂ ಸೇವಕರು ಕಾರಣ ಕೊಟ್ಟು ಅದು ಚಾರಿತ್ರಿಕ ಅನಿವಾರ್ಯತೆಯಾಗಿತ್ತು ಎಂದು ಕೈ ತೊಳೆದುಕೊಳ್ಳಬಲ್ಲರು. ಇವರಿಗೆಲ್ಲ ಅಂತಿಮ ಸತ್ಯಗಳೂ ಗೊತ್ತಿವೆ. ಆದರೆ ಅನಂತಮೂರ್ತಿ ಮತ್ತು ಅವರಂತಹ ಲೇಖಕರಿಗೆ ಯಾವ ಅಂತಿಮ ಸತ್ಯವೂ ಗೊತ್ತಿರುವುದಿಲ್ಲ. ಅವರು ಸದಾ ಸತ್ಯದ ಹುಡುಕಾಟದಲ್ಲಿ ತೊಡಗಿಕೊಂಡವರು. ಸಂದೇಹ, ಸಂದಿಗ್ಧತೆ, ತೊಳಲಾಟ, ಧರ್ಮಸಂಕಟ, ಇಬ್ಬಂದಿತನ, ಆತ್ಮಾವಲೋಕನ-ಇವು ಅನಂತಮೂರ್ತಿಯವರ ಯಾವತ್ತೂ ಬರವಣಿಗೆಯ ಮುಖ್ಯ ಲಕ್ಷಣಗಳು. ಮೇಲೆ ಉಲ್ಲೇಖಿಸಲಾಗಿರುವ ಪ್ರಜಾವಾಣಿಯ ತಮ್ಮ ಲೇಖನವನ್ನೂ ಕೂಡ ಅವರು ಬರೆದಿರುವುದು ಆತ್ಮ ಪರೀಕ್ಷೆಯ ವಿಷಾದದಲ್ಲಿ, ನಕ್ಸಲ್ ಹಿಂಸೆ, ಹಿಂದೂತ್ವದ ಹಿಂಸೆ ಹಾಗೂ ನಾವೆಲ್ಲರೂ ಪುರಸ್ಕರಿಸುವ ಅಭಿವೃದ್ಧಿ ಮಾದರಿಯ ಹಿಂಸೆಗಳನ್ನು ವಿಶ್ಲೇಷಿಸುವ ಈ ಬರಹ, ವಿಜಯ ಮಲ್ಯರಂತಹವರು ಜನಪ್ರತಿನಿಧಿಗಳಾಗಿ ಆಯ್ಕೆಯಾಗುವ ನಮ್ಮ ಪ್ರಜಾಪ್ರಭುತ್ವದ ವಿಘಟನೆಯನ್ನೂ, ಅದನ್ನು ಸಹಿಸಿಕೊಳ್ಳುವ ನಮ್ಮ ಜಡತ್ವವನ್ನೂ ನಮ್ಮ ಮುಂದೆ ಇಡುತ್ತದೆ. ಹೀಗೆ ಲೇಖಕನ ಈ ಸ್ವಗತ, ಓದುಗನ ಸ್ವಗತವೂ ಆಗುತ್ತದೆ. ಅದು ತನ್ನ ಆದ್ಯಕರ್ತವ್ಯವೆಂಬಂತೆ ಎಲ್ಲ ಬಗೆಯ ಹಿಂಸೆಯನ್ನೂ ಪ್ರತಿಭಟಿಸುತ್ತಿದ್ದ ದಿ. ಕೆ.ವಿ. ಸುಬ್ಬಣ್ಣ ಗುಜರಾತ್ ಹಿಂಸೆಯ ಬಗ್ಗೆ ಅವರು ಬರೆದ ದೀರ್ಘ ಲೇಖನಕ್ಕೆ ಕೊಟ್ಟ ಶೀರ್ಷಿಕೆ- "ಗುಜರಾತ್ ಸ್ವಗತ". ಆ ಶೀರ್ಷಿಕೆಯೇ ಅವರ ವಿಷಾದ ಮತ್ತು ಹೊಣೆಗಾರಿಕೆಯ ಪ್ರಜ್ಞೆಯ ನಿರೂಪಣೆಯಾಗಿದೆ. ಹಿಂದೂತ್ವ ಮತ್ತು ಅಭಿವೃದ್ಧಿಯ ಹಿಂಸೆ ಬಗ್ಗೆ ಅನಂತಮೂರ್ತಿ ಬರೆದಿರುವುದು ಕೂಡ ಇಂತಹದ್ದೇ ವಿಷಾದ ಮತ್ತು ಹೊಣೆಗಾರಿಕೆಗಳಲ್ಲಿ, ನಾವು ಯಾರೂ ಈ ಸನ್ನಿವೇಶಕ್ಕೆ ಹೊರಗಿನವರೂ ಅಲ್ಲ; ನೋಡುಗರೂ ಅಲ್ಲ; ನಾವೆಲ್ಲ ಇದರಲ್ಲಿ ಭಾಗಿಗಳು ಎಂದು ತನಗೆ ತಾನೇ ನೆನಪಿಸಿಕೊಳ್ಳುವಂತೆ ಅನಂತಮೂರ್ತಿ ತಮ್ಮ ಲೇಖನವನ್ನು ಬರೆದಿದ್ದಾರೆ. ಆದರೆ ವಿಜಯ ಕರ್ನಾಟಕದ ಮತ ಪ್ರಚಾರಕರಿಗೆ ಇದು ಯಾವುದೂ ತಲೆಗೆ ಹೋಗುವುದಿಲ್ಲ. ಜೆ.ಸಿ.ಬಿ ಯಂತ್ರವೊಂದಕ್ಕೆ ಕಿರುಚುವ ಮೈಕ್ ಕಟ್ಟಿದರೆ ಹೇಗಿರುತ್ತದೋ, ಹಾಗೆ ಇವರ ಮಟ್ಟಿಗೆ ಭಾಷೆ.

ಅನಂತಮೂರ್ತಿ ನಕ್ಸಲ್ ಹಿಂಸೆ ಬಗ್ಗೆ ಬರೆಯುವುದಾದರೆ ಅದರ ಬಗ್ಗೆ ಮಾತ್ರ ಬರೆಯಬೇಕು; ಹಿಂದೂತ್ವವನ್ನು ಯಾಕೆ ಅದರಲ್ಲಿ ಎಳೆದು ತರಬೇಕು ಎಂಬುದು ವಿಜಯ ಕರ್ನಾಟಕದ ಈ ಯಂತ್ರಮಾನವರ ತಕರಾರು. ನಿಜ ಜೀವನದಲ್ಲಿ ಎಲ್ಲ ಬಗೆಯ ಹಿಂಸೆಗಳೂ ಒಂದು ಇನ್ನೊಂದಕ್ಕೆ ಕಾರಣವೂ ಪರಿಣಾಮವೂ ಆಗಿ ಬೇರ್ಪಡಿಸಲಾಗದಂತೆ ಬೆರೆತುಕೊಂಡಿರುವಾಗ ಬರವಣಿಗೆಯಲ್ಲಿ ಅದನ್ನು ಕಾಣಿಸಬಾರದು ಎಂದರೆ ಹೇಗೆ? ವಿಜಯ ಕರ್ನಾಟಕದ ಅಂಕಣಕಾರ, ತನ್ನ ಬರಹದಲ್ಲಿ ನಕ್ಸಲೀಯರು ಇತ್ತೀಚೆಗೆ ನಡೆಸಿದ ಕೊಲೆಗಳ ಐಟಂವಾರು ಪಟ್ಟಿಕೊಟ್ಟಿದ್ದಾರೆ. ಅನಂತಮೂರ್ತಿ ತನ್ನ ಲೇಖನದಲ್ಲಿ ಈ ಕೊಲೆಗಳನ್ನು ಸಮರ್ಥಿಸಿಲ್ಲ; ಮಾತ್ರವಲ್ಲ ಇವಕ್ಕೆ ಸೈದ್ಧಾಂತಿಕ ವಿವರಣೆ ಕೊಟ್ಟು ಸಮರ್ಥಿಸುವುದರ ಅನೈತಿಕತೆಯನ್ನು ಸಹ ಖಂಡಿಸಿದ್ದಾರೆ. ಆದರೆ ವಿಜಯ ಕರ್ನಾಟಕದ ಅಂಕಣ ಬರಹದಲ್ಲಿ ಎಲ್ಲಿಯೂ ಭಾರತ ಅಂಗೀಕರಿಸಿರುವ ಅಭಿವೃದ್ಧಿ ಮಾದರಿಯಿಂದ ಆದಿವಾಸಿಗಳು ಮತ್ತು ಗ್ರಾಮೀಣ ಬಡವರ ಮೇಲೆ ನಡೆದ ಹಿಂಸೆಯ ಪ್ರಸ್ತಾಪವೇ ಇಲ್ಲ. ಈಗ ನಕ್ಸಲ್ ಚಳುವಳಿಗೆ ತಕ್ಷಣದ ಕಾರಣವಾಗಿರುವ, "ಅದಿರು ಶ್ರೀಮಂತ" ಜಾರ್ಖಂಡ್, ಛತ್ತೀಸ್‌ಗಡ ಮತ್ತು ಒರಿಸ್ಸಾಗಳಲ್ಲಿ ಆದಿವಾಸಿಗಳ ಸಾಮೂಹಿಕ ಒಕ್ಕಲೆಬ್ಬಿಸುವಿಕೆಯನ್ನು ಸಹ ಈ ಲೇಖನ ಗಮನಿಸುವುದಿಲ್ಲ.

ಯಾವ ಸಾಮಾಜಿಕ ಸನ್ನಿವೇಶದಲ್ಲಿ ಹಿಂಸ ತಲೆದೋರುತ್ತದೆ ಎಂದು ಪರಿಶೀಲಿಸುವುದು, ಅದರ ಕಾರಣಗಳನ್ನು ಅರಸುವುದು ಮತ್ತು ಹಿಂಸೆಯನ್ನು ಸಮರ್ಥಿಸುವುದು- ಇವು ಒಂದೇ ಬಗೆಯ ಕ್ರಿಯೆಗಳಲ್ಲ. ಅನಂತಮೂರ್ತಿ ತಮ್ಮ ಲೇಖನದಲ್ಲಿ ನಕ್ಸಲ್ ಹಿಂಸೆ ಕಾಣಿಸಿಕೊಂಡ ನಮ್ಮ ಸಾಮಾಜಿಕ ಸಂದರ್ಭವನ್ನು ವಿವರಿಸಲು ಪ್ರಯತ್ನಿಸಿದ್ದಾರೆ; ಆ ಹಿಂಸೆಯನ್ನು ಸಮರ್ಥಿಸಿಲ್ಲ. ವಿಜಯ ಕರ್ನಾಟಕದ ಅಂಕಣಕಾರ ಹಿಂಸೆಯ ಈ ವ್ಯಾಕರಣವನ್ನೇ ಅರಿಯದ ಅಪಾಂಗ. ಇಂತಹವರು ಜನರ ತಲೆ ತೊಳೆಯಲು ಹೊರಟರೆ ಅದು ಭಾಷೆ ಮತ್ತು ವಾಗ್ವಾದಗಳ ಜೊತೆ ನಾಗರಿಕತೆಯ ಅವಸಾನಕ್ಕೂ ಒಂದು ಮುನ್ಸೂಚನೆ. ವಿಜಯ ಕರ್ನಾಟಕ ಎತ್ತಿ ಹಿಡಿಯುವ ಹಿಂದೂತ್ವ ಸಿದ್ಧಾಂತ, ಹಿಟ್ಲರ್‌ನ ನಾಝಿವಾದದ ಸೋದರ ಸಂಬಂಧಿ. ಅನಂತಮೂರ್ತಿಯವರನ್ನು ಹೀಗಳೆಯುವ ತನ್ನ ಬರಹದಲ್ಲಿ ಆ ಪತ್ರಿಕೆಯ ಅಂಕಣಕಾರ, ನಾಝಿಗಳು ಕೊಂದ ಯಹೂದಿಗಳ ಸಂಖ್ಯೆಯನ್ನು ಎರಡು ದಶಲಕ್ಷ ಎಂದು ನಮೂದಿಸಿದ್ದಾರೆ. ಇವರ ಅಜ್ಞಾನವು ಇವರ ಉಡಾಫೆಗೆ ತಕ್ಕ ಹಾಗಿದೆ.

ವಾಸ್ತವವಾಗಿ ನಾಝಿಗಳು ಕೊಂದ ಯಹೂದಿಗಳು ಹತ್ತಿರ ಹತ್ತಿರ ಆರು ದಶಲಕ್ಷ. ಅದಕ್ಕೆ ಒಂದು ದಶಲಕ್ಷ ಕಮ್ಯುನಿಸ್ಟರು, ಜಿಪ್ಸಿಗಳು ಮತ್ತು ಪೋಲೆಂಡಿನ ಪ್ರಜೆಗಳನ್ನೂ 2,75,000 ಸ್ವದೇಶಿ (ಅಂದರೆ ಜರ್ಮನ್ ಹಾಗೂ ಕ್ರಿಶ್ಚಿಯನ್) ಮನೋರೋಗಿಗಳು, ವಿಕಲಾಂಗರು ಮತ್ತು ಸಲಿಂಗಕಾಮಿಗಳನ್ನೂ ಸೇರಿಸಿಕೊಳ್ಳಬೇಕು. ಒಂದು ಇಡೀ ಧಾರ್ಮಿಕ ಸಮುದಾಯದ ಜೊತೆಗೆ ತಮ್ಮ ಸಮಾಜದ ಅಂಚಿನಲ್ಲಿ ಬದುಕುವ ತಮ್ಮದೇ ಸಮುದಾಯದ ಜನಗಳನ್ನೂ ಅಪರಾಧಿಗಳಂತೆ ನಡೆಸಿಕೊಳ್ಳುವುದರಲ್ಲಿ ಹಿಂದೂತ್ವಕ್ಕೂ ನಾಝಿವಾದಕ್ಕೂ ನಡುವೆ ವ್ಯತ್ಯಾಸವೇ ಇಲ್ಲ. ಹಿಂದೂತ್ವದ ಅನಧಿಕೃತ ವಕ್ತಾರನಂತಿರುವ ವಿಜಯ ಕರ್ನಾಟಕ ಪ್ರತಿ ಸಂಚಿಕೆಯಲ್ಲೂ, ತಾನು ಒಲ್ಲದ ಜನರ ಬಗ್ಗೆ ತೋರಿಸುವ ಅಸಹನೆ, ನಾಝಿಗಳ ಪ್ರಚಾರ ತಂತ್ರವನ್ನೇ ನೆನಪಿಸುತ್ತದೆ. ಉದಾಹರಣೆಗೆ ಈ ದೇಶದ ಒಬ್ಬ ಮಾನವ ಹಕ್ಕು ಹೋರಾಟಗಾರನ ಹೆಸರನ್ನೂ ಹೇಳದೆ ಅವರೆಲ್ಲರೂ ದೇಶದ್ರೋಹಿಗಳು ಎಂಬಂತೆ ಪತ್ರಿಕೆ ಅಪಪ್ರಚಾರ ಮಾಡುತ್ತದೆ; ಕಲೆಯ ಗಂಧಗಾಳಿ ಗೊತ್ತಿಲ್ಲದವರು ಎಂ.ಎಫ್. ಹುಸೇನ್ ಬಗ್ಗೆ ಎಲ್ಲ ಗೊತ್ತಿರುವವರಂತೆ ಬರೆಯುತ್ತಾರೆ. ಇನ್ನು ಆ ಪತ್ರಿಕೆಯ ಅಂಕಣಕಾರರ ಮಾತಿಗೆ ಬಂದರೆ, ಅರೆಬರೆ ಓದಿನಿಂದ ಬರುವ ಧಾಡಸೀತನವೇ ಅವರ ಬಂಡವಾಳ. ಹಾಗಾಗಿ ಅನಂತಮೂರ್ತಿಯವರ ಮೇಲೆ ವಿಜಯ ಕರ್ನಾಟಕದ ಒರಟರು ನಡೆಸಿರುವ ಈ ದಾಳಿ ದೇಶದ ನಾಗರಿಕತೆಯ ವಿರುದ್ಧ ಸಂಘಪರಿವಾರದ ಕಾಲುಗಳು ನಡೆಸಿರುವ ಆಕ್ರಮಣದ ಭಾಗವೆಂದೇ ನಾವು ತಿಳಿಯಬೇಕಾಗಿದೆ. ●

ಅಸ್ಮಿತೆ



ಕತೆ

• ಡಾ.ಸಬಿಹಾ ಭೂಮೀಗೌಡ

"ಹಲೋ, ಇದು ಕಮಲಾಕ್ಷಮ್ಮ ಅವರ ಮನೇನಾ?" ಎಂದೆ.

"ಹಲೋ, ನೀವು ಯಾರು?" ಎಂದು ಆ ತುದಿಯಿಂದ ಪ್ರಶ್ನಿಸಿತು ಗಡುಸು ಧ್ವನಿ.

"ನಾನು ಶಿವಮೊಗ್ಗ... ಕಾಲೇಜಿನ ಅಧ್ಯಾಪಕಿ...."

"ಏನ್ ಬೇಕಿತ್ತು?"

"ಕಮಲಾಕ್ಷಮ್ಮ ಇದ್ದಾರಾ? ನಿನ್ನೆ ನಾನು ಫೋನ್ ಮಾಡಿದ್ದೆ... ಇವತ್ತು ಬರ್ತೀನಿ ಅಂತ. ಇಲ್ಲಿ ದಾರಿಯಲ್ಲಿ ಮಾವಿನ್‌ಕಟ್ಟೆ ಹತ್ರ ನಾವು ಬಸ್ ಇಳ್ದು..."

"ಅವ್ರು ಯಾಕ್ ಬೇಕಿತ್ತು?" ಮತ್ತೆ ಅಸಹನೆಯ ಪ್ರಶ್ನೆಯೊಂದು ಅತ್ತಲಿಂದ ಬಂತು. ನನಗಂತೂ ಮೈಪರಚಿಕೊಳ್ಳುವಂತಾಯ್ತು. ಆದರೆ, 'ಈಗ ನೀನು ಸಹನೆ ಕಳಕೊಂಡ್ರೆ ಕೆಲಸ ಕೆಡುತ್ತೆ' ಅಂತ ವಿವೇಕ ಎಚ್ಚರಿಸಿತು. ಹೀಗಾಗಿ ಬಂದ ಸಿಟ್ಟನ್ನೆಲ್ಲ ನುಂಗಿಕೊಂಡು ಮತ್ತೆ ವಿನಯದಿಂದ, "ಸರ್, ಇದು ಕಮಲಾಕ್ಷಮ್ಮ ಅವ್ರ ಮನೇನೇ ತಾನೆ. ನಾವು ಅರ್ಧದಾರೀಲಿ ನಿಂತಿದ್ದೀವಿ. ನಿಮ್ ಮನೆ ದಾರಿ ಯಾವ್ದು ಅಂತ ಹೇಳ್ತೀರಾ? ಅಥವಾ ಅವರಿದ್ರೆ ಅವರಿಗೆ ಫೋನ್ ಕೊಡ್ತೀರಾ?"

"ಅವಳಿಲ್ಲ.... ನೀವೇನು ಅವ್ರ ಸಂದರ್ಶನ ಮಾಡೋಕೆ ಬಂದಿರೋರಾ? ಇದ್ದೆಲ್ಲ ಅವಳ್ ಹತ್ರ ಬಿಡುವಿಲ್ಲ" ಎಂದು ಫೋನನ್ನು ಅತ್ತಲ್ಲಿಂದ ಕುಕ್ಕಿಬಿಟ್ಟದ್ದು ಕೇಳಿತು.

ನಾನು ಕಕ್ಕಾಬಿಕ್ಕಿಯಾದರೆ, ನನ್ನ ಬಳಿಯೇ ನಿಂತಿದ್ದ ಗೆಳತಿ ಬಿಡುಗಣ್ಣಾಗಿ ನನ್ನನ್ನೇ ನೋಡುತ್ತಿದ್ದಳು. ಅವಳನ್ನು ನೋಡಿ, ನನ್ನ ಆತಂಕವನ್ನು ನಿಯಂತ್ರಿಸಿಕೊಂಡೆ. ಮೊದಲೇ ಹೆದರುಪುಕ್ಲಿ, ಈಗ ಹೀಗೆ ಅಪರಿಚಿತ ಜಾಗಕ್ಕೆ ಅಪರಿಚಿತ ವ್ಯಕ್ತಿಯನ್ನು ಹುಡುಕಿಕೊಂಡು ಬಂದಿದ್ದಕ್ಕೆ ಅವಳು ಪರಿತಪಿಸುತ್ತಿರುವಂತೆ ಕಂಡಿತು.

"ನೋಡೇ ವಿಜಿ... ಏನೂ ಆಗಿಲ್ಲ, ಅದು ಕಮಲಾಕ್ಷಮ್ಮ ಅವರ ಮನೇನೇ. ಅದ್ರಲ್ಲಿ ಸಂಶಯ ಇಲ್ಲ, ಫೋನ್ ತೆಗ್ದವ್ರು ಮಾತ್ರ ಸ್ವಲ್ಪ ಲೂಸ್‌ಕೇಸ್ ಅನ್ಸುತ್ತೆ. ಈ ಹಳ್ಳೀಲಿ ಮನೆ ಹುಡ್ಕೋದೂ ಒಂದ್ ಕಷ್ಟನಾ? ಬಾ... ಬಾ... ಮರಳಿ ಯತ್ನವ ಮಾಡು ಅಂತ ನಾಣ್ನುಡಿನೇ ಇದೆಯಲ್ಲ."

"ನಂಗ್ಯಾಕೋ ಭಯ ಆಗ್ತಾ ಇದೆ. ಇದು ಯಾವ್ ಊರೋ, ಇಲ್ಲೀ ಜನಾ ಎಂಥವ್ರೋ ಒಂದೂ ಗೊತ್ತಿಲ್ಲ. ನಿನ್ ಮಾತ್ ನಂಬಿ ಜೊತೆಗೆ ಬಂದೆ. ಈಗ್ ನೋಡಿದ್ರೆ ಅತ್ತ ದರಿ ಇತ್ತ ಪುಲಿ ಅನ್ನೋ ಸ್ಥಿತಿ.... ಅಷ್ಟು ದೂರ್‌ದಿಂದ ಕಮಲಾಕ್ಷಮ್ಮನ್ನ ಮಾತಾಡ್ಸೋಕೆ ಅಂತ ಕರ್ಕೊಂಡ್‌ಬಂದೆ... ದಾರಿ ಕೇಳೋಣ ಅಂತ ಫೋನ್ ಮಾಡಿದ್ರೆ.... ಹೀಗೆ..." ಎನ್ನುವಷ್ಟರಲ್ಲಿ ಅವಳ ಕಣ್ತುಂಬಿ ಬಂದಿತ್ತು. "ಏ ಪುಕ್ಲಿ... ಇಂಥಾ ನಿನ್ ಪುಕ್ಕಲ್‌ತನ ನೋಡೀನೇ ನಿನ್‌ಗಂಡ ನಿನ್ ಮೇಲೆ ಅಷ್ಟು ರೋಪ್ ಹೊಡಿಯೋದು... ಸ್ವಲ್ಪ ನೀನೂ ರಫ್ ಆಗ್ಬೇಕು.... ಅಂಥಾದ್ದೇನು ಆಯ್ತೀಗ.... ಇರೋ ಮೂರು ದಾರೀಲಿ ಯಾವ್ದಲ್ಲಿ ಹೋಗ್ಬೇಕು ಅಂತ ತಾನೇ ಸಮಸ್ಯೆ... ಒಂದ್ರಲ್ಲಿ ಹೋಗಿನೋಡೋಣ... ಒಂದಲ್ಲ ಒಂದ್ ಮನೆ ಸಿಗತ್ತೆ... ಕೇಳಿನೋಡೋಣ... ಕಮಲಾಕ್ಷಮ್ಮ ಈ ಸುತ್ತೆಲ್ಲ ಹಳ್ಳಿ ಔಷಧಿ ಕೊಡೋದ್ರಲ್ಲಿ ಹೆಸರುವಾಸಿ. ಹೀಗಾಗಿ ಏನೂ ಕಷ್ಟ ಆಗಲ್ಲ ಬಾ..." ಎಂದು ಗೆಳತಿಗೆ ಧೈರ್ಯ ಹೇಳಿ 'ಯಾರು ಹಿತವರು ನಿನಗೆ ಈ ಮೂವರೊಳಗೆ' ಎಂಬಂತೆ ನಿಂತಿದ್ದ ರಸ್ತೆಗಳಲ್ಲಿ ಬಲಗಡೆಯ ರಸ್ತೆಗೆ ಹೊರಳಿದೆ.

ಗಟ್ಟಿಯಾಗಿ ಅವಳಿಗೇನೋ ಧೈರ್ಯ ಹೇಳಿದೆ. ಆದ್ರೆ ನಂಗೆ ಒಳಗೊಳಗೇ ಒಂದು ಬಗೆಯ ಅಳುಕು ಬೇಸರ. 'ಎಂಥಾ ಕೆಲ್ಸ ಆಯ್ತು... ಯಾಕಾದ್ರೂ ಕಮಲಾಕ್ಷಮ್ಮನ ಸಂದರ್ಶನ ಮಾಡೋ ಹುಚ್ಚು ಬಂತು. ಯಾರ್ನಾದ್ರೂ ಜೊತೆಗೆ ಕರ್ಕೊಂಡೂ ಬಂದಿಲ್ಲ! ಬೆಳಿಗ್ಗೆ ಮನೆ ಬಿಟ್ಟವ್ರು ಇಲ್ಲಿಗೆ ಬರೋವಷ್ಟರಲ್ಲಿ ಮಧ್ಯಾಹ್ನ ಆಗಿದೆ... ಇಷ್ಟ್ ದೂರ ಬಂದು, ಅವರ್ನ ಭೇಟಿ ಆಗ್ದೇ ಹೋಗೋದಾ? ಅದೇನೋ ಅಂತಾರಲ್ಲ ಹೊಳೆತನಕ ಬಂದು ಹೊಳೆ ನೀರು ಕುಡೀಲಿಲ್ಲ ಅಂತ ಹಂಗಾಗ್ತದೆ ಅಷ್ಟೆ. ನಾನು ಒಬ್ಬೇ ಆಗಿದ್ರೂ ಸೋಲನ್ನ ಒಪ್ಕೋತ್ತಿದ್ದೆನೇನೋ..... ಗಂಡನ್ ಕಟ್ಟುನಿಟ್ಟಲ್ಲೇ ಬದುಕಿ, ಒಂದಿಷ್ಟು ಹಾಯಾಗಿ ಇರೋಣ ಅಂತ ಬಂದಿರೋ ವಿಜಯನ್ನೂ ಬದುಕು ಹೇಗಿರುತ್ತೆ ತೋರಿಸ್ತೀನಿ ಬಾ ಅಂತ ಜೊತೆಗ್ ಬೇರೆ ಕರ್ಕೊಂಡು ಬಂದಿದ್ದೀನಿ. ಅವಳ ಎದ್ರು ಸೋತ್ರೆ.... ಉಹೂಂ.... ಅದು ಮಾತ್ರ ಸಾಧ್ಯವಿಲ್ಲ' ಎಂದುಕೊಳ್ತಾ ದಾರಿ ಸವೆಸ್ತಾ ಇದ್ದೆ.

"ಓ... ಅಲ್ಲೊಂದು ತೋಟ... ಒಂದ್ ಸಣ್ ಗುಡಿಸ್ಲೂ ಇದೆ. ಅಲ್ಲಿ ಕೇಳಿದ್ರೆ ಹೇಗೆ?" ವಿಜಯಾಳ ಮಾತು ಕೇಳಿ ಆ ಕಡೆ ನೋಡಿದೆ. ಅಲ್ಲಿ ಯಾರೂ ಇರಲಿಲ್ಲ, ಮತ್ತಷ್ಟು ಮುಂದೆ ಹೋದಾಗ ಐದಾರು ಮನೆಗಳು ಕಣ್ಣಿಗೆ ಬಿದ್ದು ನೆಮ್ಮದಿ ಆಯ್ತು. "ಮಾವಿನ್‌ಕಟ್ಟೆ ಕಮಲಾಕ್ಷಮ್ಮ ಅವ್ರ ಮನೆ ಯಾವ್ದು?" ಎಂದೆವು. "ಓ.... ಆ ಕಡೆ... ಅಲ್ಲಿ ಕೊನೇ ಮನೇನೇ ಅವ್ರದು" ಎಂದಾಗ ನಿರಾಳವಾಯಿತು. ನಮ್ಮ ಹೆಜ್ಜೆ ಚುರುಕಾಗುತ್ತಿದ್ದಂತೆ ಕೊನೇಮನೆ ಮುಂದೆ ಐವತ್ತೈದು-ಅರವತ್ತು ವರ್ಷದ ಮಹಿಳೆ ನಿಂತಿದ್ದರು. "ಕಮಲಾಕ್ಷಮ್ಮ ಅವ್ರು..." ಎನ್ನುತ್ತಿದ್ದಂತೆ, "ನಾನೇ ಕಮಲಾಕ್ಷಮ್ಮ. ನೀವೇನಾ ಆಗ ಫೋನ್ ಮಾಡಿದವ್ರು... ನಮ್ ಯಜಮಾನ್ರು ಮಾತಾಡಿದ್ದು... ನೀವೇನೂ ಬೇಜಾರ್ ಮಾಡ್ಕೋಬೇಡಿ.... ಬನ್ನಿ ಬನ್ನಿ..." ಎಂದರು. ಅವರಿಗೆ ಏನು ಹೇಳಬೇಕು ಎಂದು ತೋಚದೆ ಇಬ್ಬರೂ ಮುಖಮುಖ ನೋಡಿಕೊಂಡೆವು.

"ತುಂಬ ಕಷ್ಟ ಆಯ್ತಾ ಮನೆ ಹುಡ್ಕೋಕೆ.... ಇಲ್ಲಿ ಯಾರ್ನ ಕೇಳಿದ್ರೂ ಹೇಳ್ತಾರೆ... ಅದ್ರೂ ನೀವು ಪರಊರವ್ರು..." ಕಮಲಾಕ್ಷಮ್ಮ ಅವ್ರ ದನಿಯಲ್ಲಿ ಗಂಡನ ವರ್ತನೆ ಬಗ್ಗೆ ಕ್ಷಮೆಯಾಚನೆ ಇದ್ದಂತಿತ್ತು.

"ನೀವು ಮನೇಲಿ ಇರ್ಲಿಲ್ವಾ? ಮೂರ್‌ದಾರೀಲಿ ಯಾವ್‌ಕಡೆ ಬರ್ಬೇಕು ಅಂತ ಗೊತ್ತಾಗ್ದೆ ಫೋನ್ ಮಾಡಿದ್ದೆ, ಎಷ್ಟು ಕೇಳಿದ್ರೂ ನಮ್ ಮಾತು ಕೇಳ್ಸಿಕೊಳ್ಳೋ ಸ್ಥಿತೀಲೇ ಅವ್ರು ಇರ್ಲಿಲ್ಲ... ಸದ್ಯ ನೀವ್ ಸಿಕ್ರಲ್ಲ ಸಾಕು... ನಾವು ಎಲ್ಲಿ ಕೆಲ್ಸ ಕೆಟ್ಟೋ ಅಂತ..."

"ನಾನು ಮನೇಲೇ ಇದ್ದೆ... ಅವ್ರು ನಂಗೆ ಫೋನ್ ಕೊಡ್ಲೇ ಇಲ್ಲ... ನೀವೇ ಇರ್ಬೇಕು ಅಂತ್ಲೇ ಅನ್ನಿಸ್ತು... ಹೆಚ್ಗೆ ಮಾತಾಡಿದ್ರೆ ರೇಗಾಡ್ತಾರೆ ಅಂತ ಸುಮ್ನಾದೆ. ಅದ್ಕೇ ಆಗ್ಲಿಂದ ದಾರೀಲಿ ನಿಮ್ಗಾಗಿ ಕಾಯ್ತಾ ಇದ್ದೆ. ಅವ್ರ ಮಾತ್ನ ಮನ್ಸಿಗೆ ಹಚ್ಕೋಬೇಡಿ.... ಬನ್ನಿ... ಅದು ನನ್ ಮನೆ. ಅವ್ರು ಊಟ ಮಾಡಿ ಮಲ್ಕೊಂತಾರೆ... ಇದು ನನ್ ನಾದ್ನಿ ಮನೆ. ಇಲ್ಲೇ ಕೂತು ಮಾತಾಡೋಣ. ಅದೇನ್ ಕೇಳ್ಬೇಕೋ ಕೇಳೀರಂತೆ" ಎಂದರು. ನಮ್ಮ ದನಿ ಕೇಳಿ ಅವರ ನಾದಿನಿ ಗಂಗಾಭವಾನಮ್ಮ ಹೊರಗೆ ಬಂದರು. ಕೈಯಲ್ಲಿದ್ದ ಮಜ್ಜಿಗೆ ಲೋಟವನ್ನು ನೀಡಿ, ಚಾಪೆ ಹಾಸಿದರು. "ಏನ್ ಅತ್ಗೆ, ಇವ್ರಿಗೆ ಅಣ್ಣ ಸಿಕ್ಕಿಲ್ಲ ತಾನೆ" ಎಂದರು ಗಂಗಾಭವಾನಮ್ಮ. "ಏನ್ ಹೇಳ್ಲಿ... ಇವ್ರು ದಾರಿ ಗೊತ್ತಾಗ್ದೆ ಫೋನ್ ಮಾಡಿದ್ರೆ, ನಿಮ್ಮ ಅಣ್ಣನೇ ತಗೊಂಡು.... ಮಾಮೂಲಿ ಗೊತ್ತಲ್ಲ ನಿಂಗೆ..." "ಅಯ್ಯೋ ಪಾಪ. ನೀವ್ ಏನೂ ಅಂದ್ಕೋಬೇಡಿ. ಅಣ್ಣನ್ನು ಸ್ವಲ್ಪ ಹಾಗೇನೇ... ಅತ್ಗೆ ಅನುಸರಿಸಿಕೊಂಡು ಹೋಗ್ತಾಳೆ ಅಷ್ಟೆ" ಎನ್ನುತ್ತ ಮಜ್ಜಿಗೆ ಲೋಟ ಎತ್ತಿಕೊಂಡು ಹೊರಟರು. ತಂಪಾಗಿ ಬೀಸುತ್ತಿದ್ದ ಗಾಳಿ, ತಣ್ಣನೆಯ ಮಜ್ಜಿಗೆ, ಅತ್ತಿಗೆ-ನಾದಿನಿಯರ ಉಪಚಾರ ನಮ್ಮ ಮನದ ಬೇಸರವನ್ನು ಹೇಳಹೆಸರಿಲ್ಲದಂತೆ ಮಾಡಿದವು.

ಕಮಲಾಕ್ಷಮ್ಮ ಅವರ ದಿನಚರಿ ಬೆಳಗಿನ ಐದು ಗಂಟೆಯಿಂದಲೇ ಆರಂಭವಾಗುತ್ತಿತ್ತು, ಕೊಟ್ಟಿಗೆಯಲ್ಲಿದ್ದ ದನಗಳ ಹಾಲು ಕರೆದು, ಕೊಟ್ಟಿಗೆಯ ಸೆಗಣಿ ಬಾಚಿ, ಸ್ವಚ್ಛಗೊಳಿಸುವುದರಿಂದ ತೊಡಗಿ, ಹಿತ್ತಲಲ್ಲಿ ಬೆಳೆದ ವಿವಿಧ ಔಷಧೀಯ ಸಸ್ಯಗಳಿಗೆ, ಮುಂದಿನ ಅಂಗಳದಲ್ಲಿ ನೆಟ್ಟ ವಿವಿಧ ಬಣ್ಣದ ಹೂಗಿಡಗಳಿಗೆ ನೀರುಣಿಸುವುದು, ತಿಂಡಿ, ಅಡುಗೆ ಮಾಡಿ ಆಳುಕಾಳುಗಳಿಗೆ ಕಾಲಕಾಲಕ್ಕೆ ಒದಗಿಸು ವಷ್ಟರಲ್ಲಿ ಮಧ್ಯಾಹ್ನ ಕಳೆಯುತ್ತಿತ್ತು, ಮನೆಗೆ ಅಂಟಿಕೊಂಡೇ ಇದ್ದ ಒಂದಿಷ್ಟು ಭೂಮಿಯಲ್ಲಿ ಕೃಷಿ ಮಾಡುತ್ತಿದ್ದರು. ಹೀಗಾಗಿ ಕೃಷಿ, ಪಶು ಸಂಗೋಪನೆ, ಆಹಾರ, ವೈದ್ಯ ಮುಂತಾದ ವಿಚಾರಗಳ ಕುರಿತ ಅವರ ತಿಳಿವಳಿಕೆಗಳನ್ನು ದಾಖಲಿಸಲೆಂದು ಹೋದ ನಮಗೆ ಸಮೃದ್ಧ ಜ್ಞಾನ ಹೊಂದಿದ ವಕ್ತ ದೊರಕಿದ್ದಕ್ಕೆ ಖುಷಿಯಾಯಿತು. ನಮ್ಮೆಲ್ಲ ಪ್ರಶ್ನೆಗಳಿಗೂ ಪಟಪಟನೆ ಅವರು ಉತ್ತರಿಸುತ್ತಿದ್ದರೆ, ಅವರ ಕೈಮಾತ್ರ ಬಿಡುವಿಲ್ಲದೆ ಬತ್ತಿ ಹೊಸೆಯುವುದರಲ್ಲಿ ನಿರತವಾಗಿತ್ತು. ಈ ಇಳಿವಯಸ್ಸಲ್ಲೂ ಆಯಾಸದ ಚಿಹ್ನೆ ಮುಖದಲ್ಲಿ ಕಾಣುತ್ತಿರಲಿಲ್ಲ, ಅವರ ಮಾತಿನ ವೇಗಕ್ಕೆ ನನ್ನ ಪೆನ್ ಪುಸ್ತಕದ ಮೇಲೆ ಓಡಲು ಪ್ರಯಾಸ ಪಡುತ್ತಿತ್ತು, ನೋಡನೋಡುವಷ್ಟರಲ್ಲಿ ಎರಡು ಗಂಟೆಗಳು ಸರಿದಿದ್ದವು. ಅಷ್ಟರೊಳಗೆ ಎರಡು ಬಾರಿ ಅವರ ಗಂಡ ಬಂದು ಇಣುಕಿಹೋಗಿದ್ದರು. ಅವರ ಒರಟುತನಕ್ಕೆ ಬೇಸತ್ತಿದ್ದ ಮನಸ್ಸು, ಅವರ ಅಸ್ತಿತ್ವವನ್ನೇ ಉಪೇಕ್ಷಿಸುವಂತೆ ಮಾಡಿತ್ತು, ಮೂರನೇ ಬಾರಿಗೆ ಬಂದು "ಏನು ಸಂದರ್ಶನ ಮಾಡ್ತಾ ಇದ್ದೀರಾ? ಇದನ್ನೆಲ್ಲ ಕೇಳಿ ನೀವು ಲೇಖನ ಬರ್ದು ಪ್ರಚಾರ ತಗೋತೀರಿ. ಅವಳಿಗೇನ್ ಸಿಗುತ್ತೆ?" ಎಂದರು.

ಉತ್ತರಿಸಬೇಕು ಎನ್ನುವಷ್ಟರಲ್ಲಿ ಕಮಲಾಕ್ಷಮ್ಮ ಕಣ್ಸನ್ನೆ ಮಾಡಿ ನಾನು ಬಾಯಿ ಮುಚ್ಚಿದೆ. "ಅವಳ್ಗೆ ಇಂಥಾ ಬಿಟ್ಟೀ ಕೆಲ್ಸಕ್ಕೆ ಬೇಕಾ... ಸಮಯ ಇದೆ... ಅದೇನ್ ಹೇಳ್ತಾಳೋ... ಅದೇನ್ ನೀವ್ ಬರೀತೀರೋ... ಕೆಲ್ಸ ಇಲ್ಲ ನಿಮ್ಗೆಲ್ಲ... ಆ ಸಂಘ ಈ ಸಂಘ ಅಂತ ಯಾರ್ಯಾರೋ ಬಂ... ಸನ್ಮಾನ, ಪ್ರಶಸ್ತಿ ಅಂತ ಕೊಟ್ಟು ಕೊಟ್ಟು ಅವಳ್ ಕಾಲು ನೆಲ್ದ ಮೆ... ನಿಂತ್ಕೊಳ್ಳೋದಿಲ್ಲ ಈಗ.... ಈ ಮನೇಲಿ ನಾನೂ ಒಬ್ಬ ಇದೀನಿ... ಯಾರ್ದೂ...." ಎತ್ತರದಿಂದ ಆರಂಭಗೊಂಡ ದನಿ ಕ್ಷೀಣವಾಗುತ್ತಾ ಹೋಯ... "ಅಣ್ಣಾ ಅವ್ರು ದೂರ್‌ದಿಂದ ಬಂದಿದ್ದಾರೆ. ಅದೇನ್ ಮಾತಾಡ್ಬೇಕೋ ಮಾತಾ... ಬಿಡು. ನಿಂಗೆ ಕಾಫಿ ಮಾಡಿಕೊಡ್ತೀನಿ ಬಾ" ಎಂದು ಗಂಗಾಭವಾ... ಅಣ್ಣನನ್ನು ಕರೆದೊಯ್ದರು. ಅವರು ಅತ್ತ ಹೋಗುವುದನ್ನೇ ನಾನೂ, ವಿಜ... ನೋಡ್ತಾ ಇದ್ವಿ.

"ನಿಮ್ಗೆ ಇನ್ನೇನ್ ಮಾಹಿತಿ ಬೇಕು? ಕೇಳೋದ್ ಕೇಳ್‌ಬಿಡಿ. ... ದೂರ್‌ದಿಂದ ಬಂದಿದ್ದೀರಿ" ಎಂದು ಕಮಲಾಕ್ಷಮ್ಮ ಮಾತಿಗೆ ತೊಡಗಿ... ಈ ನಡುವೆ ಅಲ್ಲಿ ಏನೂ ನಡೆದಿಲ್ಲ ಎಂಬಂತಿತ್ತು ಅವರ ಮುಖಭಾವ...

"ಸೋಮವಾರ, ಗುರುವಾರ ಬರ್ಬೇಡಿ ಅಂದ್ರಲ್ಲ, ಯಾಕೆ ಕಮಲಾಕ್ಷಮ...

"ಆ ದಿವ್ಸ ದೂರ್‌ದೂರ್ದಿಂದ ಜನ್ರು ಔಷ್ಧಿಗಾಗಿ ಬರ್ತಾರೆ. ನಿಮ್ಮ ಜ... ಮಾತಾಡೋಕೆ ಬಿಡುವು ಇರಲ್ಲ ಅಂತ ಹಾಗಂದೆ."

"ಅಂದ್ರೆ ಆ ಎರಡು ದಿವ್ಸ ಮಾತ್ರ ಔಷಧಿ ಕೊಡ್ತೀರಾ?"

"ಹೌದು."

"ಯಾಕೆ? ಆ ದಿನಾನೇ ಕೊಡ್ಬೇಕು ಅಂತ ಶಾಸ್ತ್ರ ಏನಾದ್ರೂ ಇದೆಯ...

"ಶಾಸ್ತ್ರೀಸ್ತ್ರ ಅಂತ ಏನೂ ಇಲ್ಲ, ಅವ್ರು ದಿನಾ ಬಂದ್ರೆ ನಂಗೆ ನನ್... ಮಾಡೋಕೆ ಆಗಲ್ಲ, ಅದ್ಕೇ ವಾರ್‌ದಲ್ಲಿ ಎರಡು ದಿವ್ಸ ಆದ್ರೆ ನಂಗೆ ಬಿಡು... ಇಡ್ಕೋಳ್ಳೋಕೆ ಅನುಕೂಲ ಆಗುತ್ತೆ ಅಂತ."

ಕಮಲಾಕ್ಷಮ್ಮ ಅವರ ಸಮಯದ ನಿರ್ವಹಣೆಯ ಅಚ್ಚುಕಟ್ಟುತ... ಬೆರಗಾಯಿತು. "ಬನ್ನಿ... ಈಗ ಹೇಳ್‌ದ್ನಲ್ಲ ಗಿಡಮೂಲಿಕೆಗಳು ಅವು ಯಾ... ಅಂತ ತೋರಿಸ್ತೀನಿ... ಬನ್ನಿ" ಎಂದರು. ಅವರ ಹಿತ್ತಲಿಗೆ ಹೋದ... ಒಂದೊಂದೇ ಗಿಡ ತೋರಿಸ್ತಾ ಅದರ ಹೆಸರು, ಉಪಯುಕ್ತತೆ ಹೇ... ಹೋದರು. ನಾನು ಪಟಪಟನೆ ಬರೆದುಕೊಳ್ಳಲು ಒದ್ದಾಡ್ತಿದ್ರೆ ಅವ್ರು ಮಾತ... ಮಾತಾಡ್ತಾ ಗಿಡಗಳಿಗೆ ನೀರುಣಿಸುತ್ತಿದ್ದರು. ಒಂದು ಕ್ಷಣವೂ ವ್ಯರ್ಥಮಾ... ಒಂದು ಕ್ಷಣವೂ ಕೆಲಸವಿಲ್ಲದೆ ಕೂರದ ಅವರನ್ನು ಕಂಡು ನಮಗೆ ನ... ನಮ್ಮ ವಯಸ್ಸಿನ ಬಗ್ಗೆ ಕೆಲಸದ ವಿಧಾನದ ಬಗ್ಗೆ ಯೋಚಿಸುವಂತಾಯಿ...

ಬಿಸಿಲಿಗೆ ಇಟ್ಟಿದ್ದ ಹಪ್ಪಳ, ಸಂಡಿಗೆ, ಬಾಳಕಗಳು ಕಣ್ಣಿಗೆ ಬಿದ್ದ... ಮೆಣಸಿನಕಾಯಿ, ಹಾಗಲಕಾಯಿಯ ಮತ್ತು ತರತರದ ಬಾಳಕಗಳು, ವಿ... ಬಣ್ಣ ಆಕಾರಗಳ ಸಂಡಿಗೆ, ಹಪ್ಪಳಗಳು ಬಿಸಿಲಿಗೆ ಮೈಯೊಡ್ಡಿದ್ದವು. ... ಅವರೇ ಮಾಡಿದ್ದು ಎಂದು ತಿಳಿದಾಗ, "ಇವನ್ನ ಮಾಡಿ ಮಾರಾಟ ಮಾಡ್ತೀರ... ಎಂದೆ. "ಮಾರಾಟ ಏನಿಲ್ಲ... ಮನೆಗೆ ಬರೋರು ಹೋಗೋರೂ ಇರ್ತಾರ... ಹಂಚೋಕೆ ಬೇಕಲ್ಲ" ಎಂದು ನಕ್ಕರು. ಮಾತಾಡಲು ಸರಕು ಅವರ... ಇನ್ನೂ ಇತ್ತು, ಸೂರ್ಯ ಇಳಿಮುಖನಾಗಿ ಸಾಗಿದ್ದು ಕಂಡು ನಾವೇ ಸಂದರ್... ಕೊನೆಗೊಳಿಸಬೇಕಿತ್ತು,

"ಇದು ಮೊಡವೆಗೆ ಒಳ್ಳೇದು, ಇದು ಬಾಣಂತಿ ಲೇಹ್ಯ ಇದು ಮುಟ್... ದಿನಗಳಲ್ಲಿ ಬರೋ ಹೊಟ್ಟೆನೋವಿಗೆ ಔಷಧಿ, ಇವಿಷ್ಟು ಹಪ್ಪಳ, ಸಂಡಿ... ಬಾಳಕ ಮನೇಲೇ ಮಾಡಿದ್ದು.... ಉಪಯೋಗಿಸಿ ನೋಡಿ.... ನಾನೇ ಹಾಕಿದ... ಕಸೂತಿ.... ನಿಮ್ಗೆ ನೆನಪಿಗೆ.... ತಗೊಳ್ಳಿ" ಎಂದು ಮುಂದಿಟ್ಟರು. ನಾ... ಮೂಕರಾದೆವು. ಎಲ್ಲಿದೆ ಈ ತಾಯಿಗೆ ಇಷ್ಟು ಶಕ್ತಿ ಇಂಥ ಉತ್ಸಾಹ... ಚಿಲುಮೆ ಈಕೆಗೆ ಎಲ್ಲಿಂದ ಬರುತ್ತದೆ? ಯಾವ, ಯಾರ ಪ್ರೋತ್ಸಾಹ ಇವ... ಈ ಶಕ್ತಿ ತುಂಬುತ್ತದೆ ಎಂಬ ಪ್ರಶ್ನೆಗಳು ನನ್ನಲ್ಲಿ ಪುಟಿದೇಳುತ್ತಿದ್ದವು.

"ಕಮಲಾಕ್ಷಮ್ಮ ಅವರೇ, ಒಂದ್ ಮಾತ್ ಕೇಳ್ಲಾ?"

"ಏನ್ ಕೇಳಿ."

"ನಿಮ್ ಗಂಡ ನಿಮ್ಮ ಕೆಲ್ಸದಲ್ಲಿ ಸಹಾಯ ಮಾಡ್ತಾರಾ? ನಿಮಗೆ ಬೆ... ನೀಡ್ತಾರಾ?"

"ನೀವೇ ನೋಡಿದ್‌ರಲ್ಲ ಇವತ್ತು, ಅಷ್ಟೇ. ಅವರಿರೋದೇ ಹಾಗೆ."

"ದೇಸಿ ಔಷಧ ತಯಾರಿಗೆ ಯಾರು ಸಹಾಯ...?"

"ನಾನೇ ಮಾಡ್ತೀನಿ. ಅದ್ರಿಂದ ನಂಗೆ ಖುಷಿ ಸಿಗುತ್ತೆ, ಅದ್ಕೇ ಮಾಡ್ತೀನಿ..."

"ಅದ್ಕೇನು ಅವ್ರು ಅಡ್ಡಿ ಮಾಡಲ್ಲವ?"

"ನನ್ ಹುಡಿಕ್ಕೊಂಡು ಎಲ್ಲೆಲ್ಲಿಂದ್ಲೋ ಜನ ಬರ್ತಾರಲ್ಲ... ಅವ್ರಿಗೆ ಸಹಜವಾ... ಕಸಿವಿಸಿ ಆಗತ್ತೆ, ಇದೆಲ್ಲ ಏನ್ ರಗಳೆ... ಎಲ್ಲ ಬಿಡು. ಅದ್ರಿಂದ ನೀನ್ ಬದು... ನಡಸ್ಬೇಕಾಗಿಲ್ಲ ಏನಿಲ್ಲ ಅಂತ ಜೋರು ಮಾಡ್ತಾ ಇರ್ತಾರೆ."

"ಅಷ್ಟಿದ್ರೂ... ನೀವು... ಅದ್ಹ್ಯಾಗೆ..." ವಿಜಿಯ ಪ್ರಶ್ನೆ ಅಯಾಚಿತವಾ... ಎದ್ದಿತ್ತು, ಅದಕ್ಕೆ ನಸುನಕ್ಕ ಕಮಲಾಕ್ಷಮ್ಮ,

"ವಿರೋಧ ಮಾಡಿದ್ರೆ ಏನಂತೆ? ಅವ್ರೇನ್ ನನ್ನ ಮೂರು ಹೊ... ಕಾಯ್ತಾ ಕೂತಿರ್ತಾರಾ? ಏನಾದ್ರೂ ಪಿರಿಪಿರಿ ಮಾಡಿದ್ರೆ ಕಿವಿಮೇಲೆ ಹಾಕ್ಕೊಳ್ಳ... ಅಷ್ಟೇ... ಅವ್‌ರ್ದು ಅವ್ರಿಗೆ ನನ್ದು ನನ್ಗೆ."

"ಬರೋ ರೋಗಿಗಳ್ ಜೊತೆ ಅವ್ರು ಒರಟಾಗಿ ಮಾತಾಡಿ... ಬರೋ... ಬರ್ದೆ ಇರೋ ಹಂಗೆ ಏನೂ ಆಗಿಲ್ವ" ಎಂದೆ.

"ನಿಮ್ ಮನ್ಸಿಗೆ ಬೇಜಾರ್ ಎಷ್ಟ್ ಆಗಿದೆ ಅಂತ ತಿಳೀತಿದೆ. ಆದ್ರೆ ನಾ... ಅಸಹಾಯಕಿ. ಹಾಗಂತ ಯಾರೂ ಬರೋದ್ನ ಬಿಟ್ಟಿಲ್ಲ.... ನಾನೂ ಅಷ್ಟೆ..." ಎಂದು ಎದ್ದರು. ನಾವೂ ಏಳುತ್ತ ಅವರಿಗೆ ಕೊಡಬೇಕಾದ ಮಾಹಿತಿದಾ... ಸಂಭಾವನೆ ನೀಡಹೋದಾಗ ನಿರಾಕರಿಸಿದರು. "ಉಹೂಂ... ಇದು ನಿ... ಹಣ. ನಿಮ್ ಸಮಯ ನಮ್ಗೆ ನೀಡಿದ್ದಕ್ಕೆ ಸಂಸ್ಥೆ ಕೊಡೋ ಹಣ ತಗೊ..." ಎಂದು ಒತ್ತಾಯದಿಂದ ಅವರ ಕೈಗಿತ್ತು ವಾಪಸ್ ಹೊರಟೆವು.

"ಸ್ವಲ್ಪ ಇರಿ, ನನ್ ಮಗ ಭವಾನಿಶಂಕರ ಬಂದಿದ್ದಾನೆ. ಅವ್ನ ನಿಮ್... ಬಸ್‌ತನ್ಕ ಬಿಟ್‌ಬರ್ತಾನೆ, ಕತ್ಲೆ ಆಗ್ತಿದೆ, ದಾರಿ ತಪ್ಪೀತು" ಎಂದರು. ನಾ... ಉತ್ತರಕೊಡುವ ಮೊದಲೇ ವಿಜಯಾ, "ದಾರಿ ಯಾಕೆ ತಪ್ಪೀತು? ಈ ಕತ್ಲೆಗ... ಭಯಾನೂ ಇಲ್ಲ ಏನಿಲ್ಲ" ಎಂದಾಗ ಬೆರಗಿನಿಂದ ಅವಳತ್ತ ನೋಡಿ... ಅದೊಂದು ಬಗೆಯ ಧೈರ್ಯ, ಆತ್ಮವಿಶ್ವಾಸ, ಗೆಲುವು ಅವಳ ಮುಖದ... ಕುಣಿಯುತ್ತಿದ್ದವು.

ಹೆಚ್‌ಟಿ ಕೃಷ್ಣಪ್ಪನ ಸಬಿಗೆ ಅಂಬರೀಸ ಬರಲಿಲವಂತೆ!

ಮುಂಗಾರು ಮಳೆ ಬಿದ್ದ ಕೂಡಲೆ ನೇಗಿಲು ನೊಗ ...ಕುತ್ತ ಉಳುಮೆ ಸಾಮಗ್ರಿಯೊಂದಿಗೆ ಓಡಾಡುವ ... ಹೊರಟುಹೋಗಿ ಜನ ಟ್ರ್ಯಾಕ್ಟರಿಗಾಗಿ ಕಾಯುತ್ತ ...ದ್ದರು! ಇನ್ನು ಕೆಲವರು ಪರಂಪರೆಯ ಕಸುಬನ್ನು ...ತೆ ದನ ಇದ್ದವರ ಮನೆಗೆ ಹೋಗಿ ಬೇಡಿ ಅವರ ...ತಂದು ತಮ್ಮ ಹೊಲ ಉಳುತ್ತಿದ್ದರು. ಒಂಟಿ ದನ ...ವರು ಇನ್ನೊಂದು ದನ ಹುಡುಕುತ್ತ ಪರದಾಡುತ್ತಾ ...ಬ. ಜನಗಳ ಇಂತಹ ದಿಕ್ಕುತಪ್ಪಿದ ದೈನೇಸಿ ಬದುಕನ್ನು ... ಗಾಢವಾಗಿ ಯೋಚಿಸುತ್ತಿದ್ದ ಕಾಳಮಾವನಿಗೆ ಗೊಬ್ಬಳಿ

ಯ ಲು ಸೀ ಮೆ
ಕಷ್ಟಪುರಾಣ
▶ಬಿ. ಚಂದ್ರೇಗೌಡ

...ಕ್ಕಿ ಅಂಟಿದ್ದ ಭರಣಿ ಹುಳದ ಸದ್ದು ನಿರಂತರವಾಗಿ ...ಂಗಾರು ಉಳುಮೆ ಕಾಲವನ್ನು ಕಣ್ಮುಂದೆ ...ದುತ್ತಿತ್ತು. ನಿಧಾನಕ್ಕೆ ಬಾಯಿಬಿಟ್ಟ ಕಾಳಮಾವ,

"...ಯಾರೇ ಆಗ್ಲಿ, ಒಂದು ಸತಿ ಯವಸಾಯದ ಕಸುಬ ... ತಿರಗ ಮಾಡಕ್ಕಾಗದಿಲ್ಲ ಕಂಡ್ಯ" ಎಂದ.

"...ನಿಜ ಕಣ ಮಾವ, ಯವಸಾಯದ ಕಸುಬ ಮಧ್ಯದಲ್ಲಿ ...ಕ್ಕೆ ಬರದಿಲ್ಲ" ಎಂದ ಉಗ್ರಿ.

"ಅದ್ಯಂಗ್ಲ?" ಎಂದಳು ಜುಮ್ಮಿ.

"ಅದ್ಯಂಗೆ ಅಂದ್ರೆ ನಿನಿಗೆ ಗೊತ್ತಾಗದಿಲವೇನೆ. ...ಸಾಯ ಮಾಡೊ ರೈತನ ಮನೇಲಿ ದನ, ಕರ, ... ಕುರಿ ಇರತವೆ. ಅವ ನಿಗಾ ನೋಡಬೇಕು ಅಂದ್ರೆ ...ದ ಅನುಭೋಗ ಇರಬೇಕು. ಇನ್ನು ಯವಸಾಯದ ... ಸುಮ್ಮನೆ ಆದತೆ? ಕಾಲಕಾಲಕೆ ಹುಕ್ಕೆ ವಡಿಬೇಕು, ... ಚಲ್ಲಬೇಕು, ಕಳೆ ಕೀಳಬೇಕು, ಬ್ಯಳದ ಮ್ಯಾಲೆ ... ಬಡಿಬೇಕು, ತೂರುಬೇಕು, ಕೇರುಬೇಕು, ಮನಿಗೆ ... ತುಂಬಿಕಬೇಕು. ಈ ಕ್ಯಲಸವ ಸಣ್ಣದರಿಂದ ...ಕಂಡು ಬಂದೋರು ಮಾಡ್ತರೆ ವರತೂ ...ತರದಲ್ಲಿ ಕಲಿಯಕ್ಕಾಗದಿಲ್ಲ."

"ಅದು ನಿಜ ಬುಡು. ಈಗ ನನ್ನ ಕೈಲೆ ಏಟೋ ...ಗದಿಲ್ಲ."

"...ಅಂತ ಕ್ಯಲಸವ ಈ ತಲಿಮಾರಿನ ಹುಡುಗ್ರು ಬುಡ್ತಾ ...ರಿ. ಬುಟ್ರೆ ಹೋದಂಗೆಯ, ತಿರಗ ವ್ಯೆ ...ಗದಿಲ್ಲ."

"ಕಳ್ಳ ಬಿದ್ದ ಮ್ಯಾಲೆ ಮ್ಯೆ ಬಗ್ಯತೇನ್ಲ? ನಾನೆ ಇಲವೆ ಇಲ್ಲಿ" ಎಂದ ಸೀರ.

"ನೋಡು, ನಾವು ಹ್ವಸಾ ತಲಿಮಾರಿನ ಜನಗಳ ಬಗ್ಗೆ ಮಾತಾಡ್ತಯಿದ್ರೆ ಮಾವ ಇಲ್ಲೆ ಕುಂತವ್ರುನೆ" ಎಂದ ಉಗ್ರಿ.

"ಮಾಡೋ ಕಾಲ್ದಲ್ಲಿ ಮಾಡಿದ, ಈಗ ಸುಮ್ಮನೆ ಕುಂತವ್ರುನೆ" ಎಂದಳು ಜುಮ್ಮಿ.

"ಇಂಥೋರು ಮತ್ತು ಇವುರ ಮಕ್ಕಳು ಯಾಕೆ ಯವಸಾಯ ಬುಡ್ತಾ ಅವುರೆ ಗೊತ್ತೇನೆ? ಬ್ಯಾಸಾಯದ ಕಸುಬಿನಿಂದ ಆದಾಯಿಲ್ಲ ಅಂತ ಗೊತ್ತಾಯ್ತಾ ಅದೆ. ಅದ್ಕೆ ಸುಮ್ಮನಾಗಿ ಬ್ಯಾರೆ ಕ್ಯಲಸ ಹುಡುಕ್ತಾ ಅವುರೆ. ಕಷ್ಟಪಟ್ರು ಸುಖಿಲ್ಲ ಅನ್ನದಾದ್ರೆ ಯಾರು ಕಷ್ಟಪಡಕ್ಯೋಯ್ತರೆ" ಎಂದ ಉಗ್ರಿ.

"ಎಜ್ಜಾಕ್ಟ್ಲಿ ಕರಟ್ ಕಣೊ ಉಗ್ರಿ" ಎನ್ನುತ್ತ ವಾಟಿಸ್ಸೆ ಬಂದ.

"ಯರಡು ಮೂರು ದಿನದಿಂದ ಎಲ್ಲಿಗೋಗಿದ್ಲ?" ಎಂದಳು ಜುಮ್ಮಿ.

"ನಮ್ಮ ಓಲ್ಡ್‌ಫ್ರೆಂಡ್ ಕೃಷ್ಣಪ್ಪಾರ ಬರ್ತಡೇ ಇತ್ತು ಕಣಕ್ಕ, ಅದ್ಕೆ ಹೋಗಿದ್ದೆ."

"ಕಿಸ್ಣಪ್ಪ ಈ ವಯಿಸಲಿ ಬರತಡೇ ಮಾಡಿಕಂಡ್ರೇ?!"

"ಪಿ, ಅವುರ್‍ಯಾಕ್ ಮಾಡಿಕಂಡರೇ. ಅವುರಭಿಮಾನಿಗಳು ಸೇರಿ ಮಾಡಿರತರೆ ಅಷ್ಟೆಯಾ" ಎಂದ ಉಗ್ರಿ.

"ಕಿಸ್ಣಪ್ಪನಿಗೆ ವಯಿಸೇಟಾಯ್ತೊ?" ಎಂದ ಕಾಳಮಾವ.

"ನಿನಿಗಿಂತ ಒಂದೊರ್ಸಕ್ಕೆ ದೊಡ್ಡೊರು ದ್ವಡಪ್ಪ, ಆದ್ರೆ ಹೆಲ್ತ ವಿಸಿಯದಲ್ಲಿ ನಿನಿಗಿಂತ್ಲೂ ಚನ್ನಾಗ್ಯವ್ರುರೆ."

"ಆಟೊಂತರ ಕುಡುದು, ಸಿಗರೇಟ್ ಸೇದಿದ್ರು ಹೆಲ್ತು ಚನ್ನಾಗ್ಯದೆ ಅಂದ್ರೆ ನಂಬಕ್ಕಾಗದಿಲ್ಲ" ಎಂದ ಉಗ್ರಿ.

"ದ್ಯಾವೇಗೌಡ್ರು ನಿನ್ನಂಗೆ ಅಂದನಂತೆ ಕಣೊ ಉಗ್ರಿ. ಅಷ್ಟೇ ಅಲ್ಲ, ಕಿಷ್ಣಪ್ಪ ಇನ್ನೂ ಇದ್ದನೇ ಅಂದನಂತೆ. ಇದಕ್ಕೇನೇಳ್ತೀ?"

"ಹೇಳದಿನ್ನೇನು? ನಿನ್ನಂಥೊನೆ ಇನ್ನ ಇರುವಾಗ ಪಾಪ ಕಿಷ್ಣಪ್ಪ ಇರಬಾರದೆ ಅನ್ನಬೇಕಷ್ಟೆಯಾ."

"ದ್ಯಾವೇಗೌಡ ಕಿಷ್ಣಪ್ಪನಿಗಿಂತ ಹಿರಿಯೋನೋ, ಕಿರಿಯೋನೋ ಹೇಳ್ಳ." ಎಂದ ಕಾಳಮಾವ.

"ಅದು ಗೊತ್ತಾಗಬೇಕಾದ್ರೆ ಪರಪೆಕ್ಟಾಗಿ ಡೇಟಾಪ್ ಬರ್ತು ಸಿಗಬೇಕು ದ್ವಡಪ್ಪ, ದ್ಯಾವೇಗೌಡನ ಡೇಟಾಬರ್ತು ಯಾವನಿಗ್ಗೊತ್ತು, ಆದ್ರು ನನಿಗಿನ್ನ ಯಂಬತ್ತಾಗಿಲ್ಲ ಅಂತನೆ. ತಿನ್ನೊ ಮಾತ್ರೆ ನೋಡಿದ್ರೆ ಎಂಬತ್ತನಾಲ್ಕು ಗ್ಯಾರಂಟ ಅನ್ನಂಗೆ ಕಾಣ್ತನೆ."

"ವಯಿಸೇಟಾದ್ರೇನ್ಲ ಆರೋಗ್ಯ ಚನಾಗಿರದು ಮುಖ್ಯ."


"ಸಾಮಾನ್ಯವಾಗಿ ಕುಡುದು ತಿನ್ನೊರು ಅರವತ್ತೇವರ್ಸಕ್ಕೆ ನ್ಯಗದು ಬಿದ್ದು ಹೋಯ್ತರೆ. ಈ ಕೃಷ್ಣಪ್ಪ ಅವ್ಯರಡನ್ನ ಮಾಡಿಕೊಂಡು ಆರಾಮಾಗ್ಯವ್ರುರೆ ಅಂದ್ರೆ ವಂಡ್ರುಪುಲ್ಲು."

"ಆಗೊಂದು ಸತಿ ಓಟು ಕೇಳಕ್ಕೆ ಬಂದಾಗ ಸರಿಯಾಗಿ ಅಂದು ಕಳಿಸಿದ್ದೆ ಕಂಡ್ರ ನಾನು" ಎಂದ ಕಾಳಮಾವ.

"ಯಾವ ತರ ಅಟ್ಯಾಕ್ ಮಾಡಿದ್ದೆ ಹೇಳು ದ್ವಡಪ್ಪ."

"ಅದೆ ಆಗ ಯಲಕ್ಷನ್ನಿಗೆ ನಿಂತಿದ್ರು. ಆನೆ ಗುರುತು. ಅವುರು ಒಂಥರ ಮರಿಯಾನೆ ಇದ್ದಂಗೆ ಇದ್ರು. ಊರು ಮುಂದೆ ಕಾರು ಬತ್ತು, ಇದೇ ನಮ್ಮ ಛೇರಮನಿ ಪಟೇಲ ಹಿಂಗೆ ಯಾರ್‍ಯಾರೊ ನಿಂತಿದ್ದೊ, ಕಿಷ್ಣಪ್ಪ ಬಂದು ಕೈಮುಗುದು 'ಕೈಬುಡಬ್ಯಾಡಿ ಅಂದ.'....."

"ನಿನ್ನ ಮಾತಿಗೆ ಅಡ್ಡಬತ್ತಿನಿ ದ್ವಡಪ್ಪ, ಸಿಟ್ಟಾಗಬ್ಯಾಡ. ಈಚಿಗೆ ರಾಜಕಾರಣಿಗಳು ಕೈಮುಗಿತಾಯಿಲ್ಲ, ಯಾಕೆ ಗೊತ್ತಾ? ದುಡ್ಡು ಕೊಟ್ಟಿರತನೆ, ಡ್ರಿಂಕ್ಸ್‌ನೂ ಕಳಿಸಿರತನೆ,



ಅದ್ಕೆ ಈಗ ಪೊಲಿಟೀಸಿಯನ್ ಕೈಮುಗಿಯದಿಲ್ಲ, ಭಾಷಣನೂ ಮಾಡದಿಲ್ಲ, ಕಂಟಿನ್ಯೂ ಮಾಡು ದ್ವಡಪ್ಪ."

"ಸರಿ, ಕೃಷ್ಣಪ್ಪ, ಆ ಕಡೆ ಗ್ವಾಡೆ ಮರಿಗೆ ಕರದು 'ಗೌಡ್ರೆ ಏನಾರ ತಗತಿರ' ಅಂದರು. ಅಷ್ಟಂದಿದ್ದೇ ಸಾಕು, ಎಲ್ಲಿತ್ತೊ ಕ್ವಾಪ, 'ಏನ್ ಕಿಷ್ಣಪ್ಪಾರೇ, ನಮ್ಮನ್ನ ಅಂಗೆ ತಿಳಕಂಡ್ರ? ಇವತ್ತಿಗೂ ಒಂದನಿ ಕುಡದಿಲ್ಲ ನಾನು. ನನ್ನನ್ನ ಅದೆಂಗೆ ಆ ತರಾ ತಿಳಕಂಡ್ರಿ ನೀವು' ಅಂತ ಜಾಡಿಸಿಬಿಟ್ಟೆ.

ಪಾಪ, ತಪ್ಪಾಯ್ತು ಅಂತ ಹೇಳಿ ಮುಖ ಇಳೆ ಬಿಟ್ಕುಕೊಂಡೋದ್ರು. ಆಮೇಲೇನಾಯ್ತು ಅಂದ್ರೇ ಛೇರಮನಿ, ಪಟೇಲನೂ ನನಿಗೆ ಸರಿಯಾಗಿ ಬೋದ್ರು. 'ಅಲ್ಲಾ ಕಣೊ ಕಾಳಣ್ಣ ಪಾಪ ಕಿಷ್ಣಪ್ಪಾರು ವಳ್ಳೆದೊಂದು ಬಾಟ್ಲ ತಕ್ಸಿ, ಅಲ್ಲಿರಿ ಅಂದಿದ್ರು, ಅದ ತಗಿಯಕ್ಕೆ ಅವ್ರುಕಾಸ ಕೊಡದಂಗೆ ಬೋದು ಕಳಿಸಿದಲ್ಲಾ, ಈಗ ನಾವೇನು ಮಾಡನ?' ಅಂದ್ರು. ಆಗ ನಾನು ಸಿದ್ದಮ್ಮನ ಮನೆ ಸರಾಪ ತರಿಸಿ ಕೊಟ್ಟೆ ಅತ್ತಗೆ. ಅಗೊ ನೋಡಂಗಾಗಿತ್ತು" ಎಂದ ಕಾಳಮಾವ.

"ಕಿಷ್ಣಪ್ಪನ ಪಂಕ್ಷನ್ನಿಗೆ ಯಾರ್‍ಯಾರು ಬಂದಿದ್ರುಲಾ?" ಎಂದಳು ಜುಮ್ಮಿ.

"ಕೃಷ್ಣಪ್ಪನಿಂದ ಉಪಯೋಗ ಪಡದೋರು, ಮನೆ ಕಟ್ಟಿಗಂಡೋರು, ಗಾಡಿ ತಗಂಡೋರು, ಕ್ಯಲಸಕ್ಕೆ ಸೇರಿಕಂಡೋರು, ಭೂಮಿ ತಗಂಡೋರು, ಇವತ್ತಿಗೂ ಅವುರಿಂದ್ಲೆ ಅನ್ನ ತಿಂತಾ ಇರೋರು ಬುಟ್ರು ಇನ್ಯಲ್ಲ ಬಂದಿದ್ರು ಕಣಕ್ಕ."

"ಅಂಬುರೀಸ್ ಬತ್ತನೆ ಅಂದಿದ್ರಲ್ಲ ಬಂದಿದ್ನೆ?"

"ಕೃಷ್ಣಪ್ಪನಂಥೋರ ಪಂಕ್ಷನ್ನಿಗೆ ಅಂಬರೀಸ್ ಬತ್ತನೇನಕ್ಕ? ಅವುನೇನಿದ್ರು ಕಾಶ್ಮೀರದ ಅಬ್ದುಲ್ಲನ ಬರ್ತಡೇ, ದುಬಾಯಿ ಸಾಬಿ ಬರ್ತಡೇ, ಅಮ್ಯಾಲೆ ಸಿಂಗಾಪುರದ ಮಂಗನ ಮದುವೆ, ಈ ತರ ಅಲಿತನೇ ವರತು ಪಾಪ ಎಜಡ್‌ಪರಸನ್ ಕೃಷ್ಣಪ್ಪನಿಂದ ಅವುನಿಗೇನಾಗಬೇಕು."

"ಅದ್ಯಾಕ್ಲ ಅಂಗಂತಿ?"

"ಇನ್ನೇನಕ್ಕ ಮತ್ತೆ? ಪಾಪ, ಎಚ್.ಟಿ. ಕೃಷ್ಣಪ್ಪ ಈ ವಯಿಸಲ್ಲಿ ಅವುನ ಮನೆ ಬಾಗಲಿಗೋಗಿ ಗಂಟೆಗಟ್ಲೆ ಕಾದಿದ್ರು, ಹೇಳಿ ಬಂದ್ರಂತೆ. ಆದ್ರು ಬರಲಿಲ್ಲ ಅಂದ್ರೆ ಬೇಜಾರಾಗದಿಲವೆ, ನೀನೆ ಹೇಳು?"


"ಶೂಟಿಂಗಿತ್ತಂತೆ ಕಣೊ" ಎಂದ ಉಗ್ರಿ.

"ಶೂಟಿಂಗ್ ಇದ್ರೆ ಅಂಗಂತ ಹೇಳಬೇಕು. ಇನ್ನ ಓಲ್ಡ್ ಫ್ರುಟ್‌ರಗ್ ಡಿ.ಬಿ. ಚಂದ್ರೇಗೌಡ ಬರಲಿಲ್ಲ, ಅವುನ್ಯಾಕ್ ಬರಲಿಲ್ಲ ಅಂತ ಯಾರೂ ಕೇಳಲಿಲ್ಲ, ಆದ್ರೆ ಜನ ಸೇರಸಕ್ಕೆ ಅಂಬರೀಸ್ ಹೆಸರಾಯ್ಕಂಡವ್ರುರೆ ಅನ್ನೊ ತರ ಆಯ್ತು ಈ ಅಂಬರೀಸ್ ಮಾಡಿದ್ದು."

"ಲೈ, ಅವುರನ್ಯಲ್ಲ ಯಾಕ್ಲ ಕರಿಬೇಕು? ಅವುನ್ನ ಶ್ರೀರಂಗಪಟ್ಣದ ಜನ, ಮಂಡೇವ್ರುದ ಜನ 'ನೀನು ಮನಿಗೋಗಪ್ಪ, ನಿನಿಗೆ ರಾಜಕಾರಣ ಆಗದಿಲ್ಲ' ಅಂತ ಹೇಳಿ ಕಳಿಸಿರುವಾಗ, ಇವ್ನ್ಯಾಕೋಗಿದ್ದೊ ಅವುನ್ನ ಕರಿಯಕ್ಕೆ?"

"ನನ್ನ ಮಾತನ್ನ ನೀನೇಳಿದ್ಕೆ ಥ್ಯಾಂಕ್ಸ್ ದ್ವಡಪ್ಪ" ●

ಮಹಾ ಶಿಲ್ಪಿಗಳು



ಬಹಳ ಜನ ವಿಶಿಷ್ಟ ವ್ಯಕ್ತಿಗಳ ಜೀವನದಲ್ಲಿ ಒಂದು ಮುಖ್ಯ ಸಂಗತಿ ನಡೆದಿರುತ್ತದೆ. ಅವರು ಚಿಕ್ಕವರಾಗಿದ್ದಾಗ, ಹೊರಪ್ರಪಂಚ ಅವರಲ್ಲಿ ತನ್ನ ಮೊಹರು ಒತ್ತುತ್ತ ಚಕಿತಗೊಳಿಸುತ್ತಿದ್ದಾಗ ಉತ್ತಮ ಅಧ್ಯಾಪಕರೊಬ್ಬರು ಸಿಗುತ್ತಾರೆ. ಪ್ರಖ್ಯಾತ ಫ್ರೆಂಚ್ ಸಾಹಿತಿ ಆಲ್ಬರ್ಟ್ ಕ್ಯಾಮು ಜೀವನದಲ್ಲಿ ಇದಾಯಿತು. ಆಗ ಕ್ಯಾಮುಗೆ ಐದು ವರ್ಷ. ಆಲ್ಜೀರಿಯಾದ ಅತ್ಯಂತ ಬಡ ಕುಟುಂಬದಲ್ಲಿ ಹುಟ್ಟಿದ ಕ್ಯಾಮು ಪ್ರಾಥಮಿಕ ಶಾಲೆ ಸೇರಿದ. ಅಲ್ಲಿ ಲೂಯಿ ಜರ್ಮೇನ್ ಎಂಬ ಅಧ್ಯಾಪಕನಿದ್ದ. ಮಗು ಕ್ಯಾಮುಗೆ ಅಕ್ಷರ ಅಭ್ಯಾಸದೊಂದಿಗೆ ಪ್ರಕೃತಿ, ಚಿಟ್ಟೆ, ಹಕ್ಕಿ, ಮುಖ್ಯ ಪುಸ್ತಕಗಳು-ಎಲ್ಲದರ ಬಗ್ಗೆ ಮಾತಾಡುತ್ತಾ ಕಲಿಸುತ್ತಾ ಹೋದ ಜರ್ಮೇನ್. ಕ್ಯಾಮುನಲ್ಲಿ ಪ್ರಕೃತಿಯ ಬಗ್ಗೆ ಪ್ರೀತಿ, ಪುಸ್ತಕಗಳ ಬಗ್ಗೆ ಒಲವು, ಜೀವನದ ನಿಗೂಢತೆಯ ಬಗ್ಗೆ ಕುತೂಹಲ ಹುಟ್ಟಿದ್ದೇ ಆಗ, ಅಧ್ಯಾಪಕ ಲೂಯಿ ಜರ್ಮೇನ್‌ನ ಮಾರ್ಗದರ್ಶನದಲ್ಲಿ. ಆಮೇಲೆ ಕ್ಯಾಮು ಪ್ಯಾರಿಸ್‌ಗೆ ಹೋದ; ಬುದ್ಧಿಜೀವಿಗಳೊಂದಿಗೆ ಸೇರಿದ. ಅನೇಕ ಅತ್ಯುತ್ತಮ ಅಧ್ಯಾಪಕರು, ...ಮಾರ್ಗದರ್ಶಕರು, ಗೆಳೆಯರು ಅವನ ಜೀವನದಲ್ಲಿ ಬಂದುಹೋದರು. ಎರಡನೆಯ ಜಾಗತಿಕ ಯುದ್ಧ ಯುರೋಪಿನ ...ಕ ಸಾಹಿತಿಗಳನ್ನು ರೂಪಿಸಿದಂತೆ-ಅವರ ವ್ಯಕ್ತಿತ್ವವನ್ನು ಗಟ್ಟಿಗೊಳಿಸಿದಂತೆ ಕ್ಯಾಮು ಬದುಕನ್ನೂ ರೂಪಿಸಿ ಹುರಿಗಟ್ಟಿಸಿತು. ... ಕುತೂಹಲಕರ ವಿಷಯವೆಂದರೆ 1957ರಲ್ಲಿ -ಅಂದರೆ ಜರ್ಮೇನ್ ಕಲಿಸಿದ 34 ವರ್ಷಗಳ ತರುವಾಯ-ಕ್ಯಾಮುಗೆ ...ಬೆಲ್ ಬಹುಮಾನ ದೊರೆಯಿತು. ನೊಬೆಲ್ ಬಹುಮಾನವನ್ನು ಅಂಗೀಕರಿಸಲು ಮಾಡಿದ ಭಾಷಣವನ್ನು ಕ್ಯಾಮು ... ಬಾಲ್ಯದ ಗುರು ಜರ್ಮೇನ್‌ಗೆ ಅರ್ಪಿಸಿದ.

... ಹಾಗೆಯೇ ಇಪ್ಪತ್ತನೆಯ ಶತಮಾನದ ಇನ್ನೊಬ್ಬ ಪ್ರತಿಭಾವಂತ ಸ್ಟೀಫನ್ ಹಾಕಿಂಗ್ ಎಂಬ ಭೌತಶಾಸ್ತ್ರಜ್ಞ ಇವತ್ತಿಗೂ ... ಹೈಸ್ಕೂಲ್‌ನ ಮೇಷ್ಟ್ರು ಫಿನ್‌ಲೇಯನ್ನು ನೆನೆಯುತ್ತಾನೆ. ಹಾಕಿಂಗ್‌ಗೆ ಆಗ ಹದಿಮೂರು ವರ್ಷ. ಅವನ ಪ್ರತಿಭೆ ...ರುತ್ತಿದ್ದ ಕಾಲ. ಫಿನ್‌ಲೇ ಎಂಥ ಅದ್ಭುತ ಅಧ್ಯಾಪಕ ಅಂದರೆ, ತಾನು ಓದಿದ ಕತೆ, ಪದ್ಯ ಮತ್ತು ಕೇಳಿದ ರೇಡಿಯೋ ...ರ್ಯಕ್ರಮಗಳಲ್ಲಿ ಮುಖ್ಯವಾದವನ್ನು ತನ್ನ ವಿದ್ಯಾರ್ಥಿಗಳಿಗಾಗಿ ತರುತ್ತಿದ್ದ; ಆತ ರೆಕಾರ್ಡ್ ಮಾಡಿಕೊಂಡು ಬಂದಿದ್ದ ...ಡಿಯೋ ಚರ್ಚೆಗಳು ಅಣುಅಸ್ತ್ರಗಳ ಮಾರಕತೆಯಿಂದ ಹಿಡಿದು ಮಿತಸಂತಾನದ ಅಗತ್ಯದವರೆಗೆ ಇರುತ್ತಿದ್ದವು. ಅದನ್ನು ...ಹುಡುಗರೊಂದಿಗೆ ಸರಳವಾಗಿ ಚರ್ಚಿಸುತ್ತಿದ್ದ ಫಿನ್‌ಲೇ. ಅವರ ಜ್ಞಾನದ ಹಸಿವನ್ನು ಹೆಚ್ಚಿಸಿ ಅನೇಕ ವಿಷಯಗಳ ಬಗ್ಗೆ ...ರ್ತಿ ಮೂಡಿಸಿದ. ಈತ ಪಾಠ ಹೇಳಿದ 38 ವರ್ಷದ ಬಳಿಕ ಕೂಡ ಅವನ ಶಿಷ್ಯರು ಅವನ ಪಾಠದ ಶೈಲಿ ಮತ್ತು ...ಯತೆಯನ್ನು ನೆನೆಯುತ್ತಾರೆ.

... ಬಡ ಅಧ್ಯಾಪಕ, ಬಡ ವಿದ್ಯಾರ್ಥಿ ಎಂಬುದೇ ಇಲ್ಲ; ಬಡತನ ಇರುವುದು ಜೀವಂತವಲ್ಲದ ಮನಸ್ಸುಗಳಲ್ಲಿ ...ಮಂತಿಕೆಯೂ ಅಷ್ಟೇ. ಕ್ಯಾಮು ತನ್ನ ಐದನೆ ವಯಸ್ಸಿನಿಂದಲೇ (ತನ್ನ ಅಧ್ಯಾಪಕರಿಂದಾಗಿ) ಆಂತರಿಕ ಸಿರಿವಂತಿಕೆ ...ಸಿಕೊಳ್ಳತೊಡಗಿದ.


ಕಾಡಿನ ಹಾದಿ



ಇಬ್ಬರೂ ಕಾಡಿನ ದಾರಿಯಲ್ಲಿ ನಡೆಯುತ್ತಿದ್ದರು-ಆಗತಾನೆ ಮಾರ್ಚ್ ಪ್ರತ್ಯಕ್ಷವಾಗಿತ್ತು, ಹಿಮಾಲಯದ ತಪ್ಪಲಿನ ನಿಬಿಡ, ದುರ್ಗಮ ಅರಣ್ಯ; ಆ ಕಾಡಿನ ಮಧ್ಯೆ ಇರುವ ಹತ್ತು ಮೈಲಿ ರಸ್ತೆ, ಎಲ್ಲೆಲ್ಲೂ ಹೂವು, ಚಿಗುರು; ಬೆಳಗಿನ ಬಿಸಿಲಲ್ಲಿ ಒಂದೊಂದು ಜಾಗದಿಂದ ಒಂದೊಂದು ರೀತಿಯ ಹಸಿರು, ಕುಂಕುಮ, ಸುವರ್ಣ, ಕೆಂಪು. ಆ ದಾರಿಯಲ್ಲಿಯ ಹೂವು, ಹಣ್ಣುಗಳನ್ನು, ಎಲ್ಲ ವಾಸನೆಯನ್ನು ಬಲ್ಲವ ಒಬ್ಬ, ಆತ ಜಿಮ್ ಕಾರ್ಬೆಟ್. ಚಿಕ್ಕಂದಿನಿಂದ ಅರಣ್ಯದಲ್ಲಿ ಓಡಾಡಿದ ಕಾರ್ಬೆಟ್‌ಗೆ ಪ್ರತಿಯೊಂದು ಮರವೂ ಗಿಡಬಳ್ಳಿಯೂ ಗೊತ್ತು, ಯಾವ ಮರದ ಹೂವು ಯಾವ ಗಂಧ ಸೂಸುತ್ತದೆ, ಆ ಗಂಧಕ್ಕಾಗಿ ಯಾವ ಚಿಟ್ಟೆ, ದುಂಬಿ ಬಂದಿವೆ ಎಂಬುದರಿಂದ ಹಿಡಿದು ಯಾವ ಹಕ್ಕಿ ಈ ವಸಂತದಲ್ಲಿ ಯಾವ ಧ್ವನಿಯಲ್ಲಿ ಕೂಗುತ್ತಿದೆ ಎಂಬುದನ್ನೂ ಬಲ್ಲ, ಹಕ್ಕಿಯೊಂದು ಹುಲಿಯನ್ನು ಕಂಡಾಗ ಹೆದರಿ ಮಾಡುವ ಸದ್ದು, ಗೆಳೆಯನನ್ನು ಪ್ರೇಮಕ್ಕೆ ಆಹ್ವಾನಿಸುವಾಗ ಹಾಕುವ ಕೂಗು, ತನ್ನ ಮರಿಯೊಂದಿಗೆ ಮಾತಾಡುವಾಗಿನ ಅದರ ಗುಟುರು-ಎಲ್ಲವನ್ನೂ ಬಲ್ಲ ಕಾರ್ಬೆಟ್ ಸುತ್ತ ನೋಡುತ್ತ ಸ್ಪಂದಿಸುತ್ತಾ ಪುಲಕಗೊಂಡು ನಡೆದ. ಅವನ ಗೆಳೆಯ ಕಾಡಿನ ಆ ರಸ್ತೆಯಲ್ಲಿ ನೆಲ ನೋಡುತ್ತಿದ್ದ, ಕಾಡುಮೃಗಗಳಿಂದ ಭಯಗೊಂಡಂತಿದ್ದ. ಆದರೆ ತನ್ನದೇ ಆದ ಆನಂದದ ಲೋಕದಲ್ಲಿದ್ದ ಕಾರ್ಬೆಟ್ ಕಾಡಿನ ರಸ್ತೆ ಮುಗಿದೊಡನೆ ಗೆಳೆಯನನ್ನು ಕುತೂಹಲದಿಂದ ಕೇಳಿದ, "ಹ್ಯಾಗಿತ್ತು ಕಾಡಿನ ನಡುವಿನ ನಡಿಗೆ?" ಗೆಳೆಯ ಹೇಳಿದ, "ಪರವಾಗಿಲ್ಲ, ರಸ್ತೆ ಅಷ್ಟು ಚೆನ್ನಾಗಿಲ್ಲ, ಅಷ್ಟೆ" ಅಂದ. ಕಾರ್ಬೆಟ್ ನಿರಾಶೆಯಿಂದ ಸುಮ್ಮನಾದ.

ಮನುಷ್ಯರು ಎಷ್ಟು ವಿಚಿತ್ರ-ಎಂದು ಕಾರ್ಬೆಟ್‌ಗೆ ಅನ್ನಿಸಿತು. ತನಗೆ ಪ್ರಕೃತಿಯ ಮಡಿಲು ಅಷ್ಟು ಖುಷಿ ಕೊಟ್ಟಿದೆ; ಗೆಳೆಯನನ್ನು ಮುಟ್ಟಿಯೂ ಇಲ್ಲ! ಮನುಷ್ಯನ ಮೂಲಭೂತ ದುರಂತ ಆತನ ಗೆಳೆಯನ ಅಸೂಕ್ಷ್ಮತೆಯಲ್ಲಿತ್ತು.

-ನವೆಂಬರ್ 3, 1993



ಸಂವಾದ ವ್ಯವಸ್ಥೆ ನಿಯಮಗಳು

ಪದವೀಧರರೊಡನೆ ಸಂವಾದ!


ವಿಧಾನ ಪರಿಷತ್ತಿನ ಚುನಾವಣೆ ಸಮಯದಲ್ಲಿ ಇದರ ಭರಾಟೆ!

ಮುಖ್ಯಮಂತ್ರಿಗಳಿಂದಲೂ 'ಸಂವಾದ', ಮಂತ್ರಿ ಮಹೋದಯರುಗಳಿಂದಲೂ 'ಸಂವಾದ'; ಉಡಿ-ಪಡಿ ಮುಖಂಡರಿಂದಲೂ 'ಸಂವಾದ'; ಕೊನೆಗೆ ಯಾರೂ ಗತಿ ಇಲ್ಲ ಎಂದರೆ ಅಭ್ಯರ್ಥಿಯಿಂದಲೇ 'ಸಂವಾದ'!

ಈ ಸಂವಾದ ಕಾರ್ಯಕ್ರಮಗಳಲ್ಲಿ ಕೆಲವು ನೀತಿ ನಿಯಮಗಳನ್ನು ಅನುಸರಿಸುತ್ತಿರುವುದನ್ನು ಗಮನಿಸಿದ್ದೇನೆ.

ನಿಯಮ ಒಂದು: ಪುರುಷ ಸಿಂಹಗಳಿಗೆ ಮಾತ್ರ ಪ್ರವೇಶ. ಸ್ತ್ರೀಯರ ಪ್ರವೇಶ ನಿಷಿದ್ಧ!

ಅಣಕ



ಎಚ್.ಎಲ್. ಕೇಶವಮೂರ್ತಿ

ಮಹಿಳಾ ಪದವೀಧರರು ಇಲ್ಲವೆ ಎಂಧರೆ ಇದ್ದಾರೆ. ಅವರೆಲ್ಲ ಪುರುಷರ ಅಡಿಯಾಳುಗಳು ಎಂಬ ನಂಬಿಕೆಯೋ, ಸನಾತನ ನಂಬಿಕೆಯಂತೆ ಹೆಂಗಸಿನ ಬುದ್ಧಿ ಮೊಣಕಾಲ ಕೆಳಗೆ ಎಂಬ ವಿಶ್ವಾಸವೋ, ಪುರುಷರೇ ಅವರ ಪರವಾಗಿ ಸಂವಾದಿಸುವ ಶಕ್ತಿ ಹೊಂದಿದ್ದಾರೆ ಎಂಬ ತಿಳಿವಳಿಕೆಯೋ, ಅಥವಾ ಹತ್ತಿತೂಗುವಲ್ಲಿ ನೊಣಕ್ಕೇನು ಕೆಲಸ ಎಂಬ ಮನೋಭಾವವೋ ಎಂತಹದ್ದೋ ಒಂದು ಇರಬೇಕು. ಒಟ್ಟಿನಲ್ಲಿ ಸ್ತ್ರೀಯರಿಗೆ ಪ್ರವೇಶವಿಲ್ಲ ಎಂಬುದು ಖಚಿತ.

ನಿಯಮ ಎರಡು: ಸಂವಾದ ಕಾಲ ಬಹಳ ಮುಖ್ಯ. ಕಾರ್ಯಕ್ರಮ ಸಂಯೋಜಕರು ಸೂರ್ಯದ್ವೇಷಿಗಳು. ಸೂರ್ಯ ಇದ್ದರೆ ಕಾರ್ಯಕ್ರಮ ಇಲ್ಲ. ಸೂರ್ಯಾಸ್ತಮಾನದ ನಂತರವೇ ಪ್ರಶಸ್ತ ಮುಹೂರ್ತ.

ನಿಯಮ ಮೂರು: ಸಂವಾದ ಏಕಮುಖಿ. ಪ್ರಶ್ನೆಗಳಿಗೆ ಅವಕಾಶವಿಲ್ಲ, ಪ್ರಶ್ನಿಸುವವರನ್ನು ವಿರೋಧ ಪಕ್ಷಗಳ ಗೂಢಚಾರರೆಂದೂ, ಪಿತೂರಿಕಾರರೆಂದೂ ಪರಿಗಣಿಸಲಾಗುವುದು. ಭಾಷಣಕಾರರು ಹೇಳಿದ್ದೇ ವೇದ ವಾಕ್ಯ.

ನಿಯಮ ನಾಲ್ಕು: ವಿಷಯ ಸ್ಪಷ್ಟ. ನಾನು/ಇವರು ಅತ್ಯಂತ ಸಮರ್ಥ ಅಭ್ಯರ್ಥಿ. ಇವರಿಗೇ ನಿಮ್ಮ ಮತ ಮೀಸಲಾಗಿರಲಿ.

ನಿಯಮ ಐದು: ಇಲ್ಲಿಗೆ ಮುಕ್ತಾಯ ಆಗುವುದಿಲ್ಲ. ಇಷ್ಟೇ ಆದರೆ ಒಂದು ನೊಣವೂ ಸುಳಿಯುವುದಿಲ್ಲ. ಮುಂದಿನದ್ದೇ ಬಹಳ ಆಕರ್ಷಕ ಐಟಂ. ಬಂದಿರುವ ಅತಿಥಿ ಮಹಾಶಯರುಗಳಿಗೆಲ್ಲ ಹೆಂಡಖಂಡಗಳ ಸಮಾರಾಧನೆ. ಇದು ತೃಪ್ತಿಕರವಾಗಿ ನಡೆದರೆ ಅಪೂರ್ವ ಯಶಸ್ಸು ದೊರಕೀತು ಎಂದೇ ಅರ್ಥ.

ಸಂವಾದ ಕಾರ್ಯಕ್ರಮಗಳನ್ನು ಸಂಯೋಜಿಸುತ್ತಿರುವ ದಿಗ್ಗಜಗಳಿಂದ ಇದನ್ನು ಅರಿತಿದ್ದೆ. ಆದರೆ ಇತ್ತೀಚೆಗೆ ನನಗೆ ಒಂದು ಅನುಭವ ಆಯಿತು. ಅದರ ಸಂಕ್ಷಿಪ್ತ ವಿವರಣೆ ಹೀಗಿದೆ.

ಶ್ರೀರಂಗಪಟ್ಟಣಕ್ಕೆ ಅಭ್ಯರ್ಥಿಯ ಪರ ಮತ ಯಾಚಿಸಲು ಹೋಗಿದ್ದೆವು. ಹಲವು ಶಾಲೆಗಳನ್ನು ಭೇಟಿ ಮಾಡಿದ್ದೆವು. ಶಾಲೆಗಳಲ್ಲಿ ಇತ್ತೀಚೆಗೆ ಒಂದು ಒಳ್ಳೆಯ ಪದ್ಧತಿ ಇದೆ. ಕಪ್ಪು ಹಲಗೆಯ ಮೇಲೆ ಸಂಕ್ಷಿಪ್ತವಾಗಿ ಸುದ್ದಿ ಬರೆಯುತ್ತಾರೆ. ಒಂದು ಶಾಲೆಯಲ್ಲಿ ಪಟ್ಟಣದ ಸುದ್ದಿ ಎಂಬ ಶೀರ್ಷಿಕೆಯಲ್ಲಿ 'ಪದವೀಧರರಿಗೆ ಹೆಂಡ ಖಂಡದ ಸಮಾರಾಧನೆ-ಶಿಕ್ಷಕರೇ ಅಪಾರ' ಎಂದು ಬರೆದಿತ್ತು!

ಅರೆ ಇದರಲ್ಲೇನು ತಪ್ಪು ಕಂಡಿರಿ? ಇತರರು ಹೆಂಡ ಕುಡಿದು ಖಂಡ ಕಡಿದು ಮಜಾ ಉಡಾಯಿಸಬಹುದು ಮೇಷ್ಟ್ರುಗಳು ಅದನ್ನೇ ಮಾಡಿದರೆ ಅಪರಾಧಾನ ಅಂತ ವಾಚಕ ಮಹಾಶಯರು ಅಸಮಾಧಾನ ತೋರಬಹುದು. ಇದನ್ನು ಮಾಡಲು ಶಿಕ್ಷಕ ವರ್ಗ ಸರ್ವತಂತ್ರ ಸ್ವತಂತ್ರರು. ಛೇ ಅದಲ್ಲ, ಇದು ಏನಯ್ಯ ಸಮಾಚಾರ ಅಂತ ಅಂದಿನ ದಿನಪತ್ರಿಕೆಯನ್ನು ತೆಗೆದು ವಿವರಕ್ಕಾಗಿ ಹುಡುಕಾಡಿದೆ. ಅಲ್ಲಿ ಏನಿತ್ತಪ್ಪ ಅಂದರೆ....

ಕೆಲವು ಪದವೀಧರ ಮಹಾಶಯರು 'ಸಂವಾದ ಕಾರ್ಯಕ್ರಮ'ದಲ್ಲಿ ಭಾಗವಹಿಸಿದ್ದರಂತೆ. ದೇಹ ಸಭಾಂಗಣದಲ್ಲಿದ್ದರೂ ಅವರ ಆತ್ಮ ಮಾತ್ರ ಮದ್ಯದ ಬಾಟಲಿಗಳ ಸುತ್ತ ಪ್ರದಕ್ಷಿಣೆ ಹಾಕುತ್ತಿತ್ತೇನೋ. ಭಾಷಣ ಮುಗೀತು ಅಂತಿದ್ದಂಗೆ, ಶಾಲೆ ಬಿಟ್ಟಾಗ ಮಕ್ಕಳು ಹಾರ್ತವಲ್ಲ ಹಂಗೇನೇ ಇವರೂ ಬಾಟಲಿಗಳ ಕಡೆಗೆ ಹಾರಿದರಂತೆ. ಬರಬಿದ್ದೋರಂಗೆ ಗಬಗಬನೆ ಹುಯ್ಕಂಡವರೂ ಇದ್ದರಂತೆ.



ಆ ಪರಮಾತ್ಮನ ಹಾವಳಿ ತಾಳಲಾರದೆ ಒಂದಷ್ಟು ಜನ ಒಳಗೆ ಹೋಗಿದ್ದವನ್ನು ಹೊರಕ್ಕೆ ನೂಕಿದರಂತೆ. ಮುಂದಾಲೋಚನೆಯುಳ್ಳವರು ಬಾಟಲಿಗಳನ್ನು ಮೆಲ್ಲಗೆ ಹೊರಕ್ಕೆ ಸಾಗಿಸಿದ್ದೂ ಉಂಟಂತೆ... ಅಂತೆಕಂತೆ ಅಂತಾವ ಏನೇನೋ ಬರ್ದಿದ್ರು.

ಅಂದಹಾಗೆ ಇಂತಹ 'ಅದ್ಭುತ ಸಂವಾದ' ವ್ಯವಸ್ಥೆಯನ್ನು ಏರ್ಪಡಿಸಿದ್ದವರು ಯಾರು ಅಂತೀರಾ... ತತ್ವ ಸಿದ್ಧಾಂತಗಳನ್ನ ತುದಿ ನಾಲಗೆಯಲ್ಲೇ ಇಟ್ಟುಕೊಂಡಿರೋ ಪಕ್ಷದವರು.... ತಕ್ಕಡಿಯ ಒಂದು ತಟ್ಟೆಯಲ್ಲಿ ಮದ್ಯವನ್ನಿಟ್ಟು 'ತತ್ವ'ವೆಂದೂ, ಇನ್ನೊಂದು ತಟ್ಟೆಯಲ್ಲಿ ಬೇಯಿಸಿದ ಮಾಂಸವನ್ನಿಟ್ಟು 'ಸಿದ್ಧಾಂತ' ಎಂದೂ ಹೆಸರಿಸಿ ಹಂಚಿರಬಹುದೋ ಏನು ಕತೆಯೋ.... ಅದಲ್ಲ ವಿಷಯ. ಇದನ್ನ ಓದಿದವರು ಛೀ ಥೂ ಅಂತ ಉಗಿಯುವಂತೆ ಆಯಿತಲ್ಲಾ... ಹೀಗಾದಂತಾಗಲು-

ನಿಯಮ ಆರು: ಸಂವಾದ ವ್ಯವಸ್ಥೆಯ ವಿಷಯ ಬಹಿರಂಗಗೊಳಿಸಿದಂತೆ ಸುದ್ದಿ ಮಾಧ್ಯಮದವರನ್ನ ಪಳಗಿಸಿಕೊಂಡಿರಬೇಕು!

ಇದನ್ನ ಪಾಲಿಸುವುದು ಕಡ್ಡಾಯ!

ತಲೆ ಸರಿ ಇಲ್ಲ ಸಾ!

'ಎಲ್ಲ ಕುಲಕೆಟ್ಟೋಗದೆ ಸಾ' ಎನ್ನುತ್ತಾ ಕ್ಯಾತ ಒಳ ಬಂದ.

'ಏನು ಕೆಟ್ಟೋಗಿದ್ದತು' ಅಂದೆ.

'ಅದೇ ಯವಸ್ತೆ ಸಾ. ಜಾತಿ, ಹೆಂಡ, ಕಂಡ ಅಂತಾವ ಓಟ ಮಾರ್‍ಕತಾ ಕುಂತವ್ರಲ್ಲಾ ಸಾ, ಏನೇಳನ' ಅಂತ ಬೇಸರದ ದನಿಯಲ್ಲಿ ಹೇಳಿದ.

ಅವನ ಜಾಯಮಾನ ಗೊತ್ತಿತ್ತು.

'ನಿನ್ನೋಟು ಯಾರ್‍ಗೆ?' ಅಂದೆ.

'ಅಯ್ಯೋ ಬುಡಿ ಸಾ. ಕುಲಸ್ತ ಅಂತ ಯಾತ್ಲಾಯ್ತು... ಅವ್ನಗ್ಗಿಯ' ಅಂದ!

'ಆಯ್ತಪ್ಪ ಮೊದಲನೆ ಪ್ರಾಶಸ್ತ್ಯ ಮತಾವ ಅವನಿಗೇ ಕೊಡು. ಎರಡನೆಯದು ಯಾರಿಗೆ?'

'ದಿನಾ ಪಾರ್ಟಿ ಮಾಡ್ತಾ ಅವ್ನೆ ಸಾ. ಅವನೆಂಗೆ ಬುಡೋದು ನೀವೇ ಹೇಳಿ.'

'ಅದೂ ಹೋಗ್ಲಪ್ಪ, ಮೂರನೆದು ಯಾರಿಗೆ?'

'ದುಡ್ಡು ಕೊಟ್ಟೊನ್ಗೆ ಮೋಸ ಮಾಡಿದ್ರೆ ಸಿವಾ ಮೆಚ್ತಾನಾ?'

'ಸರಿ ಅವನ ಋಣ ತೀರಿಸಿ ಸಿವನ ಮೆಚ್ಚಿಸಿಕೊ. ನಾಲ್ಕನೆ ಪ್ರಾಶಸ್ತ್ಯ ಮತ ಯಾರಿಗೆ ಕೊಡ್ತಿ? ಅದನ್ನಾದ್ರೂ ಉತ್ತಮ ಅಭ್ಯರ್ಥಿಗೆ ಕೊಡು.'

'ನೋಡಾನ ಸಾ' ಅಂದ.

ವ್ಯವಸ್ಥೆ ಹಾಳಾಗಿದೆ ಅಂತಾರೆ. ಹಾಳಾಗಿರುವುದು ಜನರೊ? ವ್ಯವಸ್ಥೆಯೊ? ಗುಂಡು ಪಾರ್ಟಿಗೆ ಹೋಗ್ತಾರೆ ನಿಜ. ಹಣ ಪಡೀತಾರೆ ಅದೂ ನಿಜ. ಜಾತಿ ಮುಂದೆ ತರ್ತಾರೆ ಅನ್ನೋದೂ ಸತ್ಯಾನೆ. ಆದರೆ ಎಷ್ಟು ಜನ ಇಂತಹವರು? ಇದರಿಂದ ಹೊರಗಿರುವ ಎಲ್ಲರೂ ಮನಸ್ಸು ಮಾಡಿದರೆ ಉತ್ತಮ ಅಭ್ಯರ್ಥಿ ಆಯ್ಕೆ ಅಸಾಧ್ಯಾನಾ? ಇದನ್ನೆಲ್ಲ ಅವನಿಗೆ ವಿವರಿಸಿದೆ. ಎಲ್ಲ ಕೇಳಿದ ನಂತರ ತೀರ್ಪು ನೀಡಿದ- 'ನಿಮ್ಗೆಲ್ಲೋ ತಲೆ ಸರಿ ಇಲ್ಲ ಸಾ!'

ಬಿಜೆಪಿ ಅಂದರೆ 'ಭಾರಿ ಜಂಗ್ಲಿ ಚೋರ್ ಪಾರ್ಟಿ'

ಕೌರವಾರದ ಬೇಲೆಕೇರಿಯಲ್ಲಿ ಆರು ಲಕ್ಷ ಟನ್ ಅದಿರು ಕಳ್ಳತನ ('ಲಂಕೇಶ್' 30.6.10). ಇದೊಂದು ಗಿನ್ನೆಸ್ ದಾಖಲೆ. ಮೌಲ್ಯದ ದೃಷ್ಟಿಯಿಂದ ಇದು ಕೇವಲ ರೂ. 300 ಕೋಟಿ ಇರಬಹುದು. ಆದರೆ quantity ಯ ದೃಷ್ಟಿಯಿಂದ ಇದು ಜಗತ್ತಿನ ಇತಿಹಾಸದಲ್ಲೇ ಅತಿ ದೊಡ್ಡ ಕಳ್ಳತನ. 6 ಲಕ್ಷ ಟನ್ ಅದಿರು ಕಳ್ಳತನ ಮಾಡಲು ಟಿಪ್ಪರ್‌ಗಳು ಕನಿಷ್ಠ 30,000 ಟ್ರಿಪ್ ಹೊಡೆದಿರಬಹುದು. ಇದು ಯಡ್ಡಿ ಸರ್ಕಾರಕ್ಕೆ ಇನ್ನೊಂದು ಕಿರೀಟ. ಕಾರಣ ಇಂತಹ ಬ್ರಹ್ಮಾಂಡ ಕಳ್ಳತನ ಸರ್ಕಾರದ ನೇರ ಸಹಾಯವಿಲ್ಲದೇ ಸಾಧ್ಯವೇ ಇಲ್ಲ, ಉತ್ತರ ಭಾರತದಲ್ಲಿ ಬಿಜೆಪಿಗೆ "ಬಡಾ ಜಾಂಗೀ-ಚೋರ್ ಪಾರ್ಟಿ" ಎನ್ನುತ್ತಾರೆ. (ಜಾಂಗಿ=ಕಾಚಾ). ಆದರೆ ಕರ್ನಾಟಕದಲ್ಲಿ ಅರಣ್ಯದಿಂದ ಭಾರಿ ಅದಿರು ಕದ್ದ ಬಿಜೆಪಿ "ಭಾರಿ ಜಂಗ್ಲಿ ಚೋರ್ ಪಾರ್ಟಿ" ಆಗಿದೆ.

ಇಂತಹ ಭಾರಿ-ಭಾರೀ ಕಳ್ಳತನಕ್ಕೆ ಕರ್ನಾಟಕ ಸರ್ಕಾರವೇ ನೆರವಾಗುತ್ತದೆ ಎಂಬ ಕಾರಣಕ್ಕಾಗಿಯೇ ಇರಬೇಕು ಇತ್ತೀಚಿನ ಜಾಗತಿಕ ಹೂಡಿಕೆದಾರರ (ಜಿಮ್) ಸಮಾವೇಶದಲ್ಲಿ ಭಾರಿ ಖದೀಮ ಉದ್ಯಮಿಗಳೆಲ್ಲಾ ಕರ್ನಾಟಕದಲ್ಲಿ ಭಾರಿ ಹೂಡಿಕೆಯ ಯೋಜನೆಗಳನ್ನು ಮುಂದಿಟ್ಟಿದ್ದು, ಜಗದೊಂಗರಿಗೆ ಜಾಂಗೀ ದೊಂಗರ ಶ್ರೀರಕ್ಷೆ.

ಹೊಗಳಿಕೆ ತೆಗಳಿಕೆ

ರಸಿಕತನದ ಪೌರಾಣಿಕ ಕಥೆ ಹೆಣೆಯುವುದರಲ್ಲಿ ನಂಬರ್ ಒನ್ ಆದ ಭಾರತದಲ್ಲಿ ವ್ಯಭಿಚಾರದ ಪ್ರಕರಣಗಳು ಪತ್ರಿಕೆಗಳ ರೀಮ್‌ಗಟ್ಟಲೆ ಕಾಗದ ತಿಂದರೆ, ಟಿವಿಗಳು ತಿಂಗಳುಗಟ್ಟಲೆ ಚೂಯಿಂಗ್‌ಗಮ್ ಜಗಿಯುತ್ತವೆ. ಆದರೆ ಪ್ರಪಂಚದ ಅತಿದೊಡ್ಡ ಕಳ್ಳತನವಾದ ಬೇಲೆಕೇರಿ ಅದಿರು ಕಳ್ಳತನದ ಬಗ್ಗೆ ದೊಡ್ಡ ಪತ್ರಿಕೆಗಳೂ ಒಂದು ಸಣ್ಣ ಸುದ್ದಿ ಪ್ರಕಟಿಸಿ ಕೈ ತೊಳೆದುಕೊಂಡರೆ, ಚೂಯಿಂಗ್ ಗಮ್-ಟಿವಿಗಳಲ್ಲಿ ಇದರ ಪ್ರಸ್ತಾಪವೇ ಇಲ್ಲ, ರಾಜಕಾರಣಿಗಳು ದೇಶವನ್ನು ಹುರಿದು ಮುಕ್ಕುತ್ತಿರುವ ಬಗ್ಗೆ ನಮ್ಮ ಮಾಧ್ಯಮಗಳೇಕೆ ಇಷ್ಟೊಂದು ಸಿನಿಕರಾಗಿವೆ? ಕೇವಲ ಒಬ್ಬ ಯಕಶ್ಚಿತ್ ಬಸ್ ಏಜೆಂಟ್ ಆಗಿದ್ದ ಈಗಿನ ಬಂದರು ಮಂತ್ರಿ ಕೃಷ್ಣ ಪಾಲೇಮಾರ್ ಭೂಮಿಯ ಹೇರಾಫೇರಿ ದಂಧೆಯಿಂದಲೇ ಮೇಲೆ ಬಂದವನು. ಬೇಲೆಕೇರಿ ಅದಿರು ಕಳ್ಳತನ ಪ್ರಕರಣದಲ್ಲಿ ಇವನ ಪಾತ್ರ ಇರದೇ ಇರಲು ಸಾಧ್ಯವೇ ಇಲ್ಲ,

-ಪ್ರವೀಣ ಎಸ್. ಶೆಟ್ಟಿ, ಮಂಗಳೂರು

ಕಷ್ಟ ಪರಿಸ್ಥಿತಿಯಲ್ಲಿರುವ ಕಲಾವಿದರಿಗೆ 1000 ರೂ. ಮಾಸಾಶನ ನೀಡುವುದಾಗಿ ಕನ್ನಡ ಸಂಸ್ಕೃತಿ ಇಲಾಖೆ ಘೋಷಿಸಿತ್ತು, ಆಗ ತೆವಳಿಕೊಂಡು ಬಂದು ಅರ್ಜಿ ಸಲ್ಲಿಸಿದ ಸಾಹಿತಿ-ಕಲಾವಿದರಿಗೆ ಈಗ ನಿರಾಸೆಯಾಗಿದೆ. ಇದರಿಂದಾಗಿ ಸಾಹಿತಿಗಳ, ಕಲಾವಿದರ ಕಷ್ಟವೆಂಬ ಮಾದ ಗಾಯ ಕೆರೆದುಕೊಂಡಂತಾಗಿದೆಯಷ್ಟೆ.

ಈ ಮಾಸಾಶನಕ್ಕಾಗಿ ರಾಜ್ಯಾದ್ಯಂತ ಸಾಹಿತಿ, ಕಲಾವಿದರು ಸಾವಿರಾರು ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸಿ ಅದಕ್ಕಾಗಿ ಕಾದು ಕುಳಿತಿದ್ದರೆ, ಸರಕಾರ ಮಾಸಾಶನ ಬಿಡುಗಡೆ ಮಾಡಿದ್ದು ಕೇವಲ 400 ಜನ ಸಾಹಿತಿ-ಕಲಾವಿದರಿಗೆ ಮಾತ್ರ! ಅದರಲ್ಲೂ ಕೊಪ್ಪಳಕ್ಕೆ ದಕ್ಕಿದ್ದು 4 ಮಾತ್ರ! 6 ಕೋಟಿ ಜನರಿರುವ ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ 4-5 ಕಲಾವಿದರ ಸಂಘಟನೆಗಳಿವೆ. ಅದರಲ್ಲಿ ಕನಿಷ್ಠವೆಂದರೂ 300 ಜನ ಸದಸ್ಯರಿರುತ್ತಾರೆ. ಇದೆಲ್ಲದರ ಅಂದಾಜು ಲೆಕ್ಕ ಹಾಕಿದರೆ ಸುಮಾರು 9000 ಜನ ಆಗುತ್ತಾರೆ. ಅವರಿಗೆ ತಲಾ 1000 ರೂ.ಗಳ ಮಾಸಾಶನ ನೀಡಿದರೆ ಅದು 90,00,000 ರೂ.ಗಳು ಮಾತ್ರ ಆಗುತ್ತದೆ. ಆಗ ಈ ಮಾಸಾಶನ ಯೋಜನೆ ಫಲಾನುಭವಿಗಳಿಗೆ ತಲುಪಿದಂತಾಗುತ್ತದೆ.

ಅದು ಬಿಟ್ಟು ಕೇವಲ 400 ಜನಕ್ಕೆ 1000 ರೂ. ಮಾಸಾಶನವನ್ನು ನೀಡಿದರೆ ಅದರಿಂದ ಏನೂ ಆಗುವುದಿಲ್ಲ, ಬದಲಾಗಿ ಸರಕಾರ ತನ್ನ 'ಸಾಧನೆ'ಯ ಪಟ್ಟಿಯಲ್ಲಿ ಇದನ್ನೂ ಸೇರಿಸಿಕೊಂಡಂತಾಗುತ್ತದೆಯಷ್ಟೇ.

ಇನ್ನು ಹೆಚ್ಚಾಗಿ ಅನಕ್ಷರಸ್ಥರೇ ಆಗಿರುವ ಕಲಾವಿದರಿಗೆ ಸರಸ್ವತಿ ಒಲಿದರೇ ವಿನಃ ಅಕ್ಷರ ಒಲಿಯಲೇ ಇಲ್ಲ! ಇಂತಹವರೆಲ್ಲ ದಾಖಲೆಗಳನ್ನು ಸಂಗ್ರಹಿಸಿಡುವುದೆಲ್ಲಿ? ಸರಕಾರ ತಕ್ಷಣ ಕಷ್ಟದಲ್ಲಿರುವ ಅರ್ಹ ಸಾಹಿತಿ-ಕಲಾವಿದ ರಿಗಾಗಿ ಹೆಚ್ಚಿನ ಅನುದಾನ ಬಿಡುಗಡೆ ಮಾಡಲಿ.

- ವಿಜಯ ಅಮೃತರಾಜ್, ವಕೀಲರು, ಕೊಪ್ಪಳ

---

14 ದೇಶಕಾಲ.....

ಮೊದಲ ಮುದ್ರಣದ 'ದೇಶಕಾಲ'ದೊಳಗೆ ಸಂಪಾದಕರಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಕೆಲವು ಹೆಸರುಗಳು ಬಿಟ್ಟುಹೋಗಿವೆ. ವಿಜಯ ಕರ್ನಾಟಕ, ಕನ್ನಡ ಪ್ರಭ ಪತ್ರಿಕೆಗಳಲ್ಲಿ ಬರೆಯುವ ಪ್ರತಿಯೊಬ್ಬ 'ಬಲವಾದ' ಅಂಕಣಕಾರರ ಹೆಸರುಗಳು ಮತ್ತು ಅವರ ಬರಹಗಳು ಮುಂದಿನ ಸಂಚಿಕೆಯಲ್ಲಿ ಸೇರ್ಪಡೆಯಾಗಬೇಕಾಗಿದೆ. ಇವರ ಜೊತೆಗೆ ಕನ್ನಡದ ಖ್ಯಾತ ಕೆಸೆಟ್ ಕವಿಗಳನ್ನು, ಆಸ್ಥಾನ ಕವಿಗಳನ್ನು ಹಾಗೂ ಕಮ್ಯುನಿಸ್ಟ್ ಉಡಿದಾರದ ನೆರವಿನಿಂದ ಕಮ್ಯುನಲ್ ಚಿಡ್ಡಿಯನ್ನು ಉದುರಿಬೀಳದಂತೆ ಬಿಗಿಯಾಗಿ ಕಟ್ಟಿಕೊಂಡಿರುವ ಫಿಡೆಲ್ ಕ್ಯಾಸ್ಟ್ರೋ ಸೋದರ ಸಂಬಂಧಿಗಳನ್ನು ದಯಮಾಡಿ ಸೇರ್ಪಡೆ ಮಾಡಿಕೊಳ್ಳತಕ್ಕದ್ದು. ಹಾಗೆಯೇ ವಿಶೇಷ ಸಂಚಿಕೆಯಲ್ಲಿ ಹೋಟೆಲ್ ಉದ್ಯಮಿಯೂ ಆಧುನಿಕ ತತ್ವಬ್ರಹ್ಮರೂ ಆದ ಷಡಕ್ಷರಿ, ದೈವಜ್ಞ ಸೋಮಯಾಜಿ, ಶತಾವಧಾನಿ ಗಣೇಶ್, 'ಡುಂಡುಂ' ಖ್ಯಾತಿಯ ದುಂಡಿರಾಜ್, 'ಮಡಿಪೂಜೆ'ಯ ಹಿರೇಮಗಳೂರು ಕಣ್ಣನ್, ಬನ್ನಂಜೆ ಅಂಡ್ ಫ್ಯಾಮಿಲಿ ಇಂತಹ ಅನೇಕ 'ನಾಮಖ್ಯಾತ'ರ ಹೆಸರುಗಳು ಪ್ರಮಾದವಶಾತ್ ಬಿಟ್ಟುಹೋಗಿವೆ.


ಇಂತಹ ಇನ್ನೂ ಅನೇಕ ಗಣ್ಯಮಾನ್ಯರ ಹೆಸರು, ವಿಳಾಸ, ಫೋಟೋ-ಫ್ರೇಮ್, ಮೇಲು-ಡೀಲುಗಳ ಡೀಟೇಲುಗಳನ್ನೆಲ್ಲ ಸೇರಿಸಿ ಪ್ರಕಟಿಸಿದರೆ ಸಾಹಿತ್ಯಾಸಕ್ತರಿಗೆ ಸಾಕಷ್ಟು ಉಪಯೋಗವಾಗುತ್ತದೆ; ಸಂಚಿಕೆಯ ಆಳ, ಅಗಲ, ತೂಕವೂ ಹೆಚ್ಚುತ್ತದೆ ಹಾಗೂ 'ಸಾಹಿತಿ-ಮಾಹಿತಿ' ಖ್ಯಾತಿಯ ಚಂಪಾ ಅವರ ಶ್ರಮವೂ ಒಂದಿಷ್ಟು ಕಡಿಮೆಯಾಗುತ್ತದೆ!

ಸಂಪಾದಕರಿಗೊಂದು ಸವಿಮಾತು

ತಾವು ಮೊದಲು ತಮ್ಮ ಪತ್ರಿಕೆಯನ್ನು ಹೊರತರಲು ಆಲೋಚಿಸಿದಾಗ ಅದಕ್ಕೆ ಶೀರ್ಷಿಕೆಯನ್ನು ತೆಗೆದುಕೊಂಡಿದ್ದು ಕುವೆಂಪು ಅವರ ಪದ್ಯವೊಂದರಿಂದ. ಅವರ 'ಕಾಲ-ದೇಶ' ಎನ್ನುವ ಪದವನ್ನು ತಾವು ಉಲ್ಟಾ ಹೊಡೆದು ಹಾಕಿಕೊಂಡಿದ್ದಾಗಿ ತಾವೇ ಹೇಳಿಕೊಂಡಿದ್ದೀರಿ. ಅವರಿಂದ ಶೀರ್ಷಿಕೆ ಪಡೆದ ಋಣದ ಭಾರ ಇಳಿಸಿಕೊಳ್ಳಲೋ ಎಂಬಂತೆ ಕುವೆಂಪು ಅವರ ಕೈ ಬರಹವನ್ನು ತಮ್ಮ 'ಪೂರ್ವಸೂರಿ'ಗಳಾದ ಸೇಡಿಯಾಪು ಕೃಷ್ಣ ಭಟ್ಟ, ವಿ. ಜಿ. ಭಟ್ಟ, ಭಟ್ಟ ಮತ್ತು ಭಟ್ಟ ಇಂತಹವರ 'ಫುಲ್‌ಪೇಜ್' ಕೈಬರಹಗಳ ನಡುವೆ ಇಡಲು ಜಾಗವಿಲ್ಲದೆ ಇನ್ನೆಲ್ಲೋ ಮೂಲೆಯಲ್ಲಿ ಎರಡೇ ಸಾಲು 'ಸ್ಕ್ಯಾನ್' ಮಾಡಿ ಇಟ್ಟಿರುವುದು ಈ ನಾಡಿನ ಯಾವ ಶೂದ್ರ ಲೇಖಕನಿಗೂ, ಕುವೆಂಪು ಪ್ರಿಯನಿಗೂ ದುಃಖ ತಂದಿಲ್ಲವೆಂಬ ಸಂತೋಷ ಸಮಾಚಾರವನ್ನು ತಮಗೆ ತಿಳಿಸಲು ಹರ್ಷಿಸುತ್ತೇವೆ. 'ಶ್ಯಾನುಭಾಗತನ'ದ ಮುಂದೆ 'ಗೌಡಿಕೆ'ಯ ಬುದುಬುದಿಕೆಯೆಲ್ಲ ನಡೆಯುವುದಿಲ್ಲವೆಂಬ ಸತ್ಯ ತಮಗೆ ಗೊತ್ತೇ ಇದೆ. ಹಾಗಾಗಿ ಮುಂದಿನ ಮುದ್ರಣದಲ್ಲಿ ಕುವೆಂಪು ಅವರ ಕೈಬರಹವನ್ನು ಬಿಟ್ಟರೂ ನಡೆಯುತ್ತೆ; ಹೇಗೂ ಆ ಜಾಗದಲ್ಲಿ ಇಡಲು ಇನ್ಯಾರದಾದರೂ ಭಟ್ಟರ ಕೈ ತಮಗೆ ಸಿಕ್ಕೇ ಸಿಗುತ್ತೆ!

ಇದಿ; ಮಸ್ತ್ ಮಜಾ ನೋಡಿ!

'ಉತ್ತಮ' ಶಶಾಂಕರ 'ಕನಿಷ್ಠ' ಕಾಮೆಂಟುಗಳು



ಗಾಂಧಿನಗರದಲ್ಲಿ ಈಗ ಎಲ್ಲಿ ನೋಡಿದರಲ್ಲಿ ...ಶಕರ ಬಗ್ಗೆಯೇ ಚರ್ಚೆ ನಡೆಯುತ್ತಿದೆ. ಅಂದರೆ, ... ಎ ಚೇಂಜ್, ನಿರ್ದೇಶಕರು ಮತ್ತೊಮ್ಮೆ ...ಲೈಟಿಗೆ ಬಂದಿದ್ದಾರೆ. ಆದರೆ ಯಾವುದೇ ನಿರ್ದೇಶಕ ...ನ್ ಸಾಧನೆ ಮಾಡಿ ಲೈಮ್‌ಲೈಟಿಗೆ ಬಂದಿಲ್ಲ ...ದೇ ವಿಪರ್ಯಾಸದ ಸಂಗತಿ.


...ಶಾಂಕ್: ಮಾತನಾಡುವ ಗೊಂಬೆ

ಶಶಾಂಕ್ ಎಂಬ ಯುವ ನಿರ್ದೇಶಕ ಮಾತನಾಡುವ ...ಬೆ ತರಹ ಮಾತನಾಡುತ್ತಾ, ತನ್ನನ್ನು ತಾನೇ ...ಳಿಕೊಳ್ಳುತ್ತಾ ಗಾಂಧಿನಗರದ ಇತರರ ಕೆಂಗಣ್ಣಿಗೆ ...ರಿಯಾಗಿದ್ದಾರೆ. ನಿಜ, ಶಶಾಂಕ್ ನಿರ್ದೇಶನದ 'ಕೃಷ್ಣನ್ ...ಸ್ಟೋರಿ' ಚೆನ್ನಾಗಿ ಮೂಡಿಬಂದಿದೆ. ಅದಕ್ಕೆ ಅವರಿಗೆ ...ಟ್ಸ್ ಹೇಳಲೇಬೇಕು. ಆದರೆ ಆ ಚಿತ್ರದ ...ರಾತಿನಲ್ಲಿ "ಉತ್ತಮ ನಿರ್ದೇಶಕರಿಂದ ಮಾತ್ರ ...ಮ ಚಿತ್ರ ಮಾಡಲು ಸಾಧ್ಯ" ಎಂದು ಶಶಾಂಕ್ ...ಕೊಂಡಿರುವ ಮಾತು ಈಗ ನಿರ್ಮಾಪಕರ ಆಕ್ರೋಶಕ್ಕೆ ...ವಾಗಿದೆ. ನಿರ್ಮಾಪಕ ಹಣ ಹಾಕದಿದ್ದಲ್ಲಿ ಒಬ್ಬ ...ಶಕ ಒಳ್ಳೆಯ ಚಿತ್ರ ಮಾಡಲು ಹೇಗೆ ತಾನೇ ...' ಎಂದು ನಿರ್ಮಾಪಕರು ಶಶಾಂಕ್ ಬಗ್ಗೆ ಸಿಟ್ಟು ...ಟಿಸಿದ್ದಾರೆ. ಅಷ್ಟೇ ಅಲ್ಲ; ಆ ಮಾತುಗಳನ್ನು ಟಿವಿ ...ರಾತಿನಿಂದ ತೆಗೆಯಬೇಕೆಂದು ಒತ್ತಾಯ ಕೂಡಾ ...ದ್ದಾರೆ.

...ದರೆ ಇದು ಸಿಂಪಲ್ ವಿಷಯವಲ್ಲವೇ? ...ವಾಗಿ ಗಾಂಧಿನಗರದ ನಿರ್ಮಾಪಕರುಗಳು ಶಶಾಂಕ್ ... ಸಿಟ್ಟುಮಾಡಿಕೊಳ್ಳುವ ಅಗತ್ಯವೇ ಇಲ್ಲ. ಅದೊಂದು ...ನ್ ಸ್ಟೇಟ್‌ಮೆಂಟ್. ಅದೇ ಸಮಯದಲ್ಲಿ ಉತ್ತಮ ...ಶಕರಿಂದ ಮಾತ್ರ ಉತ್ತಮ ಚಿತ್ರ ಸಾಧ್ಯ ಎಂಬ ... ಹೊಸ ಆವಿಷ್ಕಾರವೇನಲ್ಲ. ಆದ್ದರಿಂದ ಅಂತಹ ...ಗಳನ್ನು ಶಶಾಂಕ್ ಹೇಳುವ ಅಗತ್ಯವೂ ಇರಲಿಲ್ಲ. ...ದ ಒಂದು ಚಿತ್ರಕ್ಕೆ ಕೋಟ್ಯಾಂತರ ಬಂಡವಾಳ ...ವ ನಿರ್ಮಾಪಕರಿಗೆ ಈ ಸಾಲಿನಿಂದ ಕಸಿವಿಸಿ ...ದೆ ಎಂಬುದಂತೂ ನಿಜ. ಇಂತಹ ಸಿಲ್ಲಿ ವಿಷಯಕ್ಕೆ ...ಡುವ ಬದಲು ನಮ್ಮ ನಿರ್ಮಾಪಕ-ನಿರ್ದೇಶಕರು ...ಏನಾದರೂ ಮಾಡಬಹುದಿತ್ತು.

ಕುಮಾರಸ್ವಾಮಿ ಬಾಂಬ್

... ಮಧ್ಯೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಮೊನ್ನೆ ಸಿನಿಮಾ ಸಮಾರಂಭವೊಂದರಲ್ಲಿ ನಿರ್ದೇಶಕರ ಮೇಲೆ ಗೂಬೆ ಕೂರಿಸಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ತಮ್ಮ ಚಿತ್ರವನ್ನು ಮಾಡುವ ಶಕ್ತಿಯಿರುವ ನಿರ್ದೇಶಕರೇ ಇಲ್ಲ, ಈ ಕಾರಣದಿಂದಲೇ ಕಳೆದ ಐದಾರು ವರ್ಷಗಳಿಂದ ತಾವು ನಿರ್ಮಿಸಬೇಕಿದ್ದ 'ಹೆಜ್ಜೆಗಳು' ಚಿತ್ರ ಆರಂಭವಾಗಲೇ ಇಲ್ಲ ಎಂದು ಅವರು ಹೇಳಿದ್ದಾರೆ. ಈ 'ಹೆಜ್ಜೆಗಳು' ಖ್ಯಾತ ಕಾದಂಬರಿಕಾರ ವ್ಯಾಸರಾಯ ಬಲ್ಲಾಳರ ಕೃತಿ. ಅದನ್ನು ಕನ್ನಡ ಮತ್ತು ಹಿಂದಿ ಭಾಷೆಯಲ್ಲಿ ಮಾಡಬೇಕೆಂದು ಐದಾರು ವರ್ಷಗಳ ಹಿಂದೆಯೇ ಕುಮಾರಸ್ವಾಮಿ ಹೊರಟಿದ್ದರು. ಆ ಬಗ್ಗೆ ಅನೌನ್ಸ್‌ಮೆಂಟ್ ಕೂಡಾ ಆಗಿತ್ತು. ಆದರೆ ಚಿತ್ರ ಮಾತ್ರ ಇಂದಿಗೂ



ಸೆಟ್ಟೇರಿಲ್ಲ!

ಅತ್ತ ಶಶಾಂಕ್ ಹೇಳಿರುವ ಮಾತುಗಳನ್ನು ನಿರ್ಮಾಪಕರು ಗಂಭೀರವಾಗಿ ಪರಿಗಣಿಸಿದ್ದರೂ, ಇತ್ತ ನಿರ್ಮಾಪಕ ಕುಮಾರಸ್ವಾಮಿ ಹೇಳಿರುವ ಮಾತುಗಳನ್ನು ಯಾವುದೇ ನಿರ್ದೇಶಕ ವಿರೋಧಿಸಿಲ್ಲ! ಅಲ್ಲಿಗೆ ನಿರ್ದೇಶಕರಿಗಿಂತ ನಿರ್ಮಾಪಕರದ್ದೇ ಒಂದು ಕೈ ಮೇಲು ಎಂಬಂತಾಯಿತೇ? ಕನಿಷ್ಠ ಹೊಸತಾಗಿ ಆಯ್ಕೆಗೊಂಡಿರುವ ನಿರ್ದೇಶಕರ ಸಂಘದ ಪದಾಧಿಕಾರಿಗಳಾದರೂ "ಕುಮಾರಸ್ವಾಮಿಯವರು ಕನ್ನಡದ ನಿರ್ದೇಶಕರನ್ನು ಅವಮಾನಿಸಿದ್ದಾರೆ" ಎಂದು ಆಕ್ಷೇಪ ವ್ಯಕ್ತಪಡಿಸಬಹುದಿತ್ತು. ಆದರೆ ಕುಮಾರಸ್ವಾಮಿಯವರ ಹೇಳಿಕೆಯನ್ನು ಪ್ರತಿಭಟಿಸುವ ಶಕ್ತಿಯಿಲ್ಲದ ನಿರ್ದೇಶಕರ ಸಂಘ ಮೌನ ವಹಿಸಿದೆ.

ಆದರೆ ಕುಮಾರಸ್ವಾಮಿಯವರ 'ಹೆಜ್ಜೆಗಳು' ಚಿತ್ರವನ್ನು ಮಾಡಲು ಹೊರಟು ಅದರ ಚಿತ್ರಕಥೆಯನ್ನೂ ವರ್ಷಗಟ್ಟಲೆ ಬರೆದ ನಿರ್ದೇಶಕ ನಾಗಾಭರಣರಾದರೂ ಕನಿಷ್ಠ ದನಿ ಎತ್ತಬಹುದಿತ್ತು ಎಂಬ ಆಸೆಯೂ ಹುಸಿಯಾಗಿದೆ. ಯಾಕೋ ಭರಣ ಕೂಡಾ ಕುಮಾರಸ್ವಾಮಿಯವರ ತಂಟೆ ಬೇಡ ಎಂದು ಸುಮ್ಮನೆ ಕುಳಿತುಕೊಂಡಿದ್ದಾರೆ.

ಶಶಾಂಕ್ ನಿರ್ದೇಶಕರನ್ನು ಅವಮಾನಿಸಿದರೆ?

'ಕೃಷ್ಣನ್ ಲವ್ ಸ್ಟೋರಿ' ಚಿತ್ರಕ್ಕೆ ಸಂಬಂಧಪಟ್ಟಂತೆ ಶಶಾಂಕ್ ಮಾತನಾಡುತ್ತಾ "ರಾಧಿಕಾ ಪಂಡಿತ್ ಈ ಚಿತ್ರದಲ್ಲಿ ತನ್ನ ಜೀವನ ಶ್ರೇಷ್ಠ ಅಭಿನಯ ನೀಡಿದ್ದಾಳೆ. ಒಂದು ವೇಳೆ ಇದಕ್ಕಿಂತ ಉತ್ತಮ ಪಾತ್ರವನ್ನು ಆಕೆ ನಿರ್ವಹಿಸಬೇಕಾದರೆ ಮತ್ತೆ ನನ್ನ ಬಳಿಯೇ ಬರಬೇಕಾಗುತ್ತದೆ" ಎಂದು ಹೇಳಿದ್ದು ಇನ್ನೊಂದು ವಿವಾದಕ್ಕೆ ಕಾರಣವಾಗಿದೆ. ಶಶಾಂಕ್ ಮಾತನ್ನು ಕೆಲವರು ಅಹಂಕಾರವೆಂದು ಬಣ್ಣಿಸುತ್ತಿದ್ದರೆ, ಕೆಲವರು ಅದನ್ನು ಆತ್ಮವಿಶ್ವಾಸದ ಪ್ರತೀಕವೆಂದು ಕರೆಯುತ್ತಿದ್ದಾರೆ. ಇವೆರಡರಲ್ಲಿ ಯಾವುದು ಸರಿ? ಯಾವುದು ತಪ್ಪು? ಒಂದಂತೂ ಸತ್ಯ ಶಶಾಂಕ್ ಅತಿಯಾದ ಮಾತಿನ ಭರಾಟೆಯಲ್ಲಿ ಬೇರೆ ನಿರ್ದೇಶಕರನ್ನು ಅವಮಾನಿಸಿದಂತಾಗಿದೆ. "ರಾಧಿಕಾ ಪಂಡಿತ್ ಇದಕ್ಕಿಂತ ಉತ್ತಮ ಪ್ರದರ್ಶನ ನೀಡಬೇಕಾದರೆ ಮತ್ತೆ ನನ್ನ ಬಳಿಗೇ ಬರಬೇಕು" ಎಂದು ಶಶಾಂಕ್ ಹೇಳಿರುವುದು ತಮ್ಮನ್ನೆಲ್ಲ ಅವಮಾನಿಸಿದಂತೆ ಎಂದು ಉಳಿದ ನಿರ್ದೇಶಕರುಗಳು ತೀರ್ಮಾನಿಸಿದ್ದಾರೆ. ಏನೇ ಆಗಲಿ, ಇಲ್ಲಿಯ ತನಕ ಮೂರು ಚಿತ್ರಗಳನ್ನು ಮಾತ್ರ ಮಾಡಿರುವ ಶಶಾಂಕ್ ಇಷ್ಟೊಂದು ಮಾತನಾಡುತ್ತಿರುವುದು ಅವರಿಗೇ ಶೋಭೆ ತರುವಂತಹದ್ದಲ್ಲ. ಇಷ್ಟಕ್ಕೂ ಶಶಾಂಕ್ ನಿರ್ದೇಶನದ ಚಿತ್ರಗಳು ಬಾಕ್ಸಾಫೀಸ್‌ನಲ್ಲಿ ಹಣದಕೊಳ್ಳೆಯನ್ನು ಹೊಡೆದಿಲ್ಲ.

ರಾಧಿಕಾಗೆ ಕನ್ನಡ ಬರೊಲ್ಲವೇ?

ಶಶಾಂಕ್ ಇನ್ನೊಂದು ಯಡವಟ್ಟನ್ನು ಮಾಡಿಕೊಂಡಿದ್ದಾರೆ. ಅದನ್ನು ಈಗ ಶಶಾಂಕ್ ವಿರೋಧೀ ನಿರ್ದೇಶಕರುಗಳು ಎಲ್ಲೆಡೆ ಹೇಳಿಕೊಂಡು ತಿರುಗಾಡುತ್ತಿದ್ದಾರೆ. ಕನ್ನಡದ ಹುಡುಗಿ ರಾಧಿಕಾ ಪಂಡಿತ್ 'ಕೃಷ್ಣನ್ ಲವ್ ಸ್ಟೋರಿ'ಯಲ್ಲಿ ಚೆನ್ನಾಗಿ ನಟಿಸಿದ್ದಾಳೆ ನಿಜ. ಆದರೆ ಆ ಪಾತ್ರಕ್ಕೆ ಅವಳಿಂದಲೇ ಕಂಠದಾನ ಮಾಡಿಸದೇ ಆಕೆ ಪ್ರಶಸ್ತಿಯಿಂದ ವಂಚಿತಳಾಗುವಂತೆ ಶಶಾಂಕ್ ಮಾಡಿದ್ದಾರೆ ಎಂಬ ಆರೋಪಕ್ಕೆ ಈಗ ಆತ ಗುರಿಯಾಗಿದ್ದಾರೆ. ಒಬ್ಬ 'ಉತ್ತಮ' ನಿರ್ದೇಶಕ 'ಉತ್ತಮ' ಚಿತ್ರ ಮಾಡುವ ಸಂದರ್ಭದಲ್ಲಿ ಉತ್ತಮ ನಟಿಯೊಬ್ಬಳಿಗೆ ಕಂಠದಾನ ಮಾಡಲು ಅವಕಾಶ ಯಾಕೆ ನೀಡಲಿಲ್ಲ? ಎಂಬುದು ಕೂಡಾ ಚರ್ಚೆಯ ವಿಷಯವಾಗಿದೆ.

ಚೇಂಬರ್ ಹೊಸ ರೂಲ್ಸ್; ಹೊಸ ನಿರ್ದೇಶಕರಿಗೆ ನೋ ಎಂಟ್ರಿ!

ಇವೆಲ್ಲ ಗಲಾಟೆಗಳ ನಡುವೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಹೊಸ ನಿರ್ಮಾಪಕ ಮತ್ತು ನಿರ್ದೇಶಕರನ್ನು ಸಂದರ್ಶನ ಮಾಡುವ ಹೊಸ ಸಂಪ್ರದಾಯ ಆರಂಭಿಸಿದೆ. ನಿರ್ಮಾಪಕ ಮತ್ತು ನಿರ್ದೇಶಕರನ್ನು ಚೇಂಬರ್‌ಗೆ ಕರೆಸಿ, ನಿಮಗೆ ಚಿತ್ರರಂಗದ ಬಗ್ಗೆ ಎಷ್ಟು ಜ್ಞಾನವಿದೆ? ಎಷ್ಟು ಅನುಭವವಿದೆ? ನಿಗದಿತ ಬಜೆಟ್‌ನಲ್ಲಿ ಚಿತ್ರ ಮುಗಿಸಲು ಸಾಧ್ಯವೇ? ಹಾಕಿದ ಹಣವನ್ನು ಹೇಗೆ ವಾಪಸು ಪಡೆಯುತ್ತೀರಿ? ಎಂದೆಲ್ಲಾ ಪ್ರಶ್ನೆಗಳ ಸುರಿಮಳೆಯನ್ನೇ ಕೇಳುತ್ತಾರಂತೆ. ಸರಿಯಾದ ಉತ್ತರ ನೀಡಿದ ನಿರ್ದೇಶಕನಿಗೆ ಮಾತ್ರ ಚಿತ್ರ ಮಾಡಲು ಅವಕಾಶ ಸಿಗುತ್ತದೆಯಂತೆ! ಈಗಾಗಲೇ ಸುಮಾರು ಹದಿನೈದು ನಿರ್ದೇಶಕರುಗಳು ಈ ಪರೀಕ್ಷೆಯಲ್ಲಿ ಫೇಲಾಗಿದ್ದರಿಂದ ಅವರ ಚಿತ್ರ ಸೆಟ್ಟೇರುತ್ತಿಲ್ಲ. ಇದನ್ನು ನೋಡಿ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರು "ಇದು ನಿರ್ದೇಶಕನ ಅಭಿವ್ಯಕ್ತ ಸ್ವಾತಂತ್ರ್ಯಕ್ಕೆ ಆದ ಧಕ್ಕೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದರೆ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ "ಇದು ಖಂಡಿತವಾಗಿಯೂ ಉದ್ಯಮದ ಹಿತದೃಷ್ಟಿಯಿಂದ, ನಿರ್ಮಾಪಕನ ಉಳಿವಿನ ದೃಷ್ಟಿಯಿಂದ ಒಳ್ಳೆಯ ಹೆಜ್ಜೆ" ಎಂದು ಇದನ್ನು ಸಂಪೂರ್ಣವಾಗಿ ಬೆಂಬಲಿಸಿದ್ದಾರೆ. ಇಲ್ಲೂ ನಿರ್ಮಾಪಕ ಮತ್ತು ನಿರ್ದೇಶಕರ ನಡುವೆ ಮನಸ್ತಾಪವಾಗುತ್ತಿರುವುದು ದುರದೃಷ್ಟಕರವೇ ಸರಿ.




ಅಘೋರಿ ಜೋಗಯ್ಯ!

ಪ್ರಚಾರಪ್ರಿಯ ಪ್ರೇಮ್ ಮತ್ತೆ ಪಬ್ಲಿಸಿಟಿಗಾಗಿ ತನ್ನ ಗಿಮಿಕ್ ಶೋ ಆರಂಭಿಸಿದ್ದಾರೆ. ಮೂರು ತಿಂಗಳಿಗೆ ಮುಂಚೆ, ಮುಹೂರ್ತಕ್ಕೆ ಮುನ್ನವೇ ದೊಡ್ಡ ಸಮಾರಂಭವನ್ನು ಮಾಡಿ 'ಜೋಗಯ್ಯ'ನಿಗೆ ಚಾಲನೆ ನೀಡಿದ್ದ ಪ್ರೇಮ್ ಈಗ ಮುಹೂರ್ತವನ್ನೂ ಸಿಕ್ಕಾಪಟ್ಟೆ ಅದ್ದೂರಿಯಾಗಿ ಮಾಡಲು ಸಿದ್ಧತೆ ನಡೆಸಿದ್ದಾರೆ.

ಜುಲೈ 12ರಂದು ನಡೆಯಲಿರುವ ಈ ಸಮಾರಂಭ ಕಂಠೀರವ ಸ್ಟೇಡಿಯಂನಲ್ಲಿ ನೆರವೇರಲಿದೆಯಂತೆ. ಇದಕ್ಕಾಗಿ ಬಾಲಿವುಡ್‌ನ ಅಮೀರ್ ಖಾನ್, ಕಾಲಿವುಡ್‌ನ ಇಳಯ ದಳಪತಿ ವಿಜೈ... ಹೀಗೆ ದಕ್ಷಿಣ ಭಾರತದ ಪಾಪ್ಯುಲರ್ ಸ್ಟಾರ್‌ಗಳೆಲ್ಲ ಬರಲಿದ್ದಾರಂತೆ.

ವಿಚಾರ ಇದಲ್ಲ,

ಪ್ರೇಮ್ ಆರಂಭಕ್ಕೂ ಮುನ್ನವೇ ಇಷ್ಟೆಲ್ಲಾ ಪ್ರಚಾರ ಪಡೆಯುತ್ತಿರುವ 'ಜೋಗಯ್ಯ'ನ ಮೇಲೆ ಅಘೋರಿಯ ನೆರಳು ಕಾಣುತ್ತಿದೆ. ತಮಿಳಿನ ಖ್ಯಾತ ಯುವ ನಿರ್ದೇಶಕ ಬಾಲಾ 'ನಾನ್ ಕಡವುಳ್' ಎಂಬ ಚಿತ್ರವನ್ನು ನಿರ್ದೇಶಿಸಿದ್ದರು. ಈ ಚಿತ್ರದ ನಾಯಕನಟ ಆರ್ಯ ಅಘೋರಿಯ ಪಾತ್ರದಲ್ಲಿ



ಅದ್ವಿತೀಯವಾಗಿ ನಟಿಸಿದ್ದ. ತಲೆಕೆಳಗು ಮಾಡಿ ಕಾಲುಗಳನ್ನು ಮೇಲಕ್ಕೆ ಮಡಚಿ ಧ್ಯಾನ ಮಾಡುವ ಕ್ಲಿಷ್ಟಕರ ದೃಶ್ಯಗಳಲ್ಲಿ ನಟಿಸಲು ತನ್ನೆಲ್ಲಾ ಶ್ರಮವನ್ನೂ ಈತ ಧಾರೆಯೆರೆದಿದ್ದ. ಕುಂಭಮೇಳದಲ್ಲಿ ಸ್ನಾನ ಮಾಡುವ ದೃಶ್ಯದಲ್ಲಂತೂ ಆರ್ಯ ಮೈಮೇಲೆ ಒಂದಿಂಚೂ ಬಟ್ಟೆಯಿಲ್ಲದೆ ನಗ್ನವಾಗೇ ನಟಿಸಿದ್ದ! ನೈಜವಾಗಿ ಮೂಡಿಬಂದಿದ್ದ 'ನಾನ್ ಕಡವುಳ್' ಚಿತ್ರ ಅಘೋರಿಯೊಬ್ಬನ ವಿಕ್ಷಿಪ್ತ ಲೋಕವನ್ನು ತೆರೆದಿಟ್ಟಿತ್ತು.

ಈಗ ಅಂಥದ್ದೇ ಎಳೆಯನ್ನು ಇಟ್ಟುಕೊಂಡು 'ಜೋಗಯ್ಯ'ನನ್ನು ತೆರೆಗೆ ತರಲು ಪ್ರೇಮ್ ನಿರ್ಧರಿಸಿದ್ದಾರೆ. 'ಜೋಗಿ'ಯಲ್ಲಿ ಶಿವರಾಜ್‌ಕುಮಾರ್ ಹಳ್ಳಿ ಹೈದನಾಗಿ, ಟೀ ಮಾರುವವನಾಗಿ ಕಾಣಿಸಿಕೊಂಡು ಕಡೆಗೆ ರೌಡಿಯಾಗಿ ವಿಜೃಂಭಿಸುತ್ತಾರೆ. ಈಗ ಅದರ ಮುಂದುವರೆದ ಭಾಗ 'ಜೋಗಯ್ಯ'ದಲ್ಲಿ ಅದೇ ಶಿವಣ್ಣ ರೌಡಿಸಂ ಬಿಟ್ಟು ಕಾಶಿಯಲ್ಲಿ ಅಘೋರಿಯಾಗಿರುತ್ತಾರಂತೆ. ಆ ಅಘೋರಿ ಮತ್ತೆ ರೌಡಿಸಂಗೆ ಎಂಟ್ರಿ ನೀಡಿ, ಭೂಗತ ಲೋಕದಲ್ಲಿ ಹೇಗೆ ರಕ್ತ ಹರಿಸುತ್ತಾನೆ ಎಂಬುದೇ 'ಜೋಗಯ್ಯ'ನ ಸ್ಟೋರಿ!

ವಿ. ನಾಗೇಂದ್ರ ಪ್ರಸಾದ್ ಹೊಸದಾಗಿ ನಿರ್ದೇಶಿಸುತ್ತಿರುವ 'ವಿನಾಯಕ ಗೆಳೆಯರ ಬಳಗ' ಚಿತ್ರದಲ್ಲಿ ಕೂಡಾ ಅಘೋರಿಗಳ ಪ್ರಸ್ತಾಪವಿದೆ. ಈಗ ಪ್ರೇಮ್ ಕೂಡಾ ಅಘೋರಿಗಳ ಬೆನ್ನುಹತ್ತಿದ್ದಾರೆ. ಹೀಗೆ ಅಘೋರಿಗಳ ಮೇಲೆ ಕಣ್ಣಿಟ್ಟಿರುವ ಇವರ ಸಿನಿಮಾಗಳು ಅಘೋರಿಗಳಂತೆ ವಿಲಕ್ಷಣವಾಗದಿದ್ದರೆ ಅದೇ ಪುಣ್ಯ.



ಅರ್ಚನಾ ಗುಪ್ತ
"ಕಾರ್ತಿಕ್"

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/-



ರಾಧಿಕಾ ಲೈಫ್ ಸ್ಟೋರಿ!



ನೋಡಲು ಆಕರ್ಷಕವಾಗಿದ್ದ ಮಾತ್ರಕ್ಕೇ ಹೀರೋಯಿನ್ ಆಗಬಹುದು; ಥಳುಕು, ಬಳುಕಿನ ದೇಹಸಿರಿಯಿಂದ ಚಿತ್ರರಂಗದಲ್ಲಿ ಏನನ್ನು ಬೇಕಾದರೂ ಸಾಧಿಸಬಹುದು ಎಂಬ ತಪ್ಪು ಕಲ್ಪನೆ ಇತ್ತೀಚಿನ ನಾಯಕ ನಟಿಯರಲ್ಲಿದೆ. ಆದರೆ ರಾಧಿಕಾ ಪಂಡಿತ್ ಎಂಬ ಕನ್ನಡದ ಹುಡುಗಿ ಅಂಥ ಭ್ರಮೆಗಳಿಂದ ಸಾಕಷ್ಟು ದೂರವಿದ್ದಂತೆ ಕಾಣುತ್ತಿದೆ.

ಯಾಕೆಂದರೆ, ರಾಧಿಕಾ ಪಂಡಿತ್ ಈವರೆಗೆ ನಟಿಸಿದ ಎಲ್ಲ ಚಿತ್ರಗಳಲ್ಲೂ ನೋಡುಗರಿಂದ ಸೈ ಎನಿಸಿಕೊಂಡಿದ್ದಾಳೆ. 'ಕೃಷ್ಣನ್ ಲವ್ ಸ್ಟೋರಿ' ಚಿತ್ರವನ್ನು ನೋಡಿಬಂದ ಪ್ರತಿಯೊಬ್ಬರೂ ರಾಧಿಕಾ ಪಂಡಿತ್‌ಳ ಅಭಿಮಾನಿಗಳಂತಾಗಿದ್ದಾರೆ.

ಭಾಷೆಗೆ ಕಿಂಚಿತ್ತೂ ಅವಮಾನವಾಗದಂತೆ ಕನ್ನಡ ಮಾತನಾಡುವ ರಾಧಿಕಾ ಪಂಡಿತ್‌ಳ ತಾಯ್ನುಡಿ ಕೊಂಕಣಿ. ಉತ್ತರ ಕನ್ನಡದ ಶಿರಾಲಿ ಮೂಲದ ರಾಧಿಕಾ ಓದಿರುವುದು ಎಂಬಿಎ ಆದರೂ ನೆಲೆ ಕಂಡುಕೊಂಡಿರುವುದು ಚಿತ್ರರಂಗದಲ್ಲಿ. ಅಶೋಕ್ ಕಶ್ಯಪ್ ಮತ್ತು ರೇಖಾರಾಣಿ ಜೋಡಿ ನಿರ್ಮಿಸಿ, ನಿರ್ದೇಶಿಸಿದ್ದ 'ನಂದಗೋಕುಲ' ಎಂಬ ಕಿರುತೆರೆ ಧಾರಾವಾಹಿಯ ಮೂಲಕ ನಟನಾ ವೃತ್ತಿಗಿಳಿದ ರಾಧಿಕಾ ಒಂದಷ್ಟು ಟೆಲಿಫಿಲಂಗಳಲ್ಲೂ ನಟಿಸಿದ್ದಾಳೆ.

ರಾಧಿಕಾಳಿಗೆ ಮೊದಲ ಬಾರಿಗೆ ನಾಯಕಿಯಾಗಿ ಅವಕಾಶ ಸಿಕ್ಕಿದ್ದು ದೀಪಕ್ ನಾಯಕನಾಗಿ ನಟಿಸಿದ್ದ '18th ಕ್ರಾಸ್'ನಲ್ಲಿ! ಯುವ ನಿರ್ದೇಶಕ ಶಂಕರ್ ನಿರ್ದೇಶಿಸಿದ್ದ ಈ ಚಿತ್ರದ ಬಗ್ಗೆ ಸಾಕಷ್ಟು ನಿರೀಕ್ಷೆಗಳಿದ್ದವಾದರೂ ಆ ಚಿತ್ರದ ನಿರ್ಮಾಪಕನ ಅಕಾಲಿಕ ಸಾವಿನಿಂದ '18ನೇ ಕ್ರಾಸ್' ಇನ್ನೂ ತೆರೆಕಂಡಿಲ್ಲ.

ತಾನು ನಟಿಸಿದ ಮೊದಲ ಚಿತ್ರ ಬಿಡುಗಡೆಯಾಗದಿದ್ದರಿಂದ ಚಿತ್ರರಂಗಕ್ಕೆ ಗುಡ್‌ಬೈ ಹೇಳಿ ಕಿರುತೆರೆಯಲ್ಲೇ ನೆಲೆಗೊಳ್ಳುವ ಆಲೋಚನೆಯಲ್ಲಿದ್ದ ರಾಧಿಕಾ ಪಂಡಿತ್‌ಗೆ ಸಿನಿಮಾರಂಗದಲ್ಲಿ ಹೊಸ ಭರವಸೆ ಮೂಡಿಸಿದ್ದು 'ಮೊಗ್ಗಿನ ಮನಸು'! 'ಮುಂಗಾರು ಮಳೆ' ನಿರ್ಮಾಪಕ ಈ. ಕೃಷ್ಣಪ್ಪ ನಿರ್ಮಾಣದಲ್ಲಿ ಉತ್ಸಾಹಿ ನಿರ್ದೇಶಕ ಶಶಾಂಕ್ ನಿರ್ದೇಶನದಲ್ಲಿ ಬಂದ 'ಮೊಗ್ಗಿನ ಮನಸು' ಚಿತ್ರ ರಾಧಿಕಾಳ ಪ್ರತಿಭೆಯ ಅನಾವರಣಕ್ಕೆ ಅನುವು ಮಾಡಿತಲ್ಲದೆ, ಅಪಾರ ಅವಕಾಶಗಳನ್ನೂ ತಂದುಕೊಟ್ಟಿತು.

ಯುವತಿಯರ ಸಮಸ್ಯೆಗಳೇ ಕಥಾವಸ್ತುವಾಗಿದ್ದ 'ಮೊಗ್ಗಿನ ಮನಸು' ಚಿತ್ರದಲ್ಲಿ ರಾಧಿಕಾಳ ಅಭಿನಯವನ್ನು ಪ್ರೇಕ್ಷಕರು ಮತ್ತು ವಿಮರ್ಶಕರು ಮೆಚ್ಚಿ ಕೊಂಡಾಡಿದರು. ನಂತರ ತೆರೆಗೆ ಬಂದ ನಾಗತಿಹಳ್ಳಿಯವರ 'ಒಲವೇ ಜೀವನ ಲೆಕ್ಕಾಚಾರ' ಕಮರ್ಷಿಯಲ್ಲಾಗಿ ಪಾತಾಳ ಸೇರಿದರೂ ಮತ್ತೆ ಎಲ್ಲರೂ ರಾಧಿಕಾಳನ್ನು ಗುರುತಿಸುವಂತಾಯಿತು. 'ಲವ್ ಗುರು' ಚಿತ್ರದ ಯಶಸ್ಸಿಗೂ ರಾಧಿಕಾಳೇ ಮುಖ್ಯ ಕಾರಣವಾದಳು. 'ಮೊಗ್ಗಿನ ಮನಸು' ಚಿತ್ರದ ಅತ್ಯುತ್ತಮ ನಟನೆಗೆ ಈಕೆಗೆ ಫಿಲಂಫೇರ್ ಪ್ರಶಸ್ತಿ ಕೂಡಾ ಲಭಿಸಿತು.

ಹೀಗೆ ತಾನು ನಟಿಸಿದ ಪ್ರತೀ ಚಿತ್ರದಲ್ಲೂ ಹೆಸರು ಮಾಡುತ್ತಾ ಬಂದಿರುವ ರಾಧಿಕಾ ಈಗ 'ಕೃಷ್ಣನ್ ಲವ್ ಸ್ಟೋರಿ' ಮೂಲಕ ಮತ್ತಷ್ಟು ಚಾಲ್ತಿಗೆ ಬಂದಿದ್ದಾಳೆ. ತನ್ನ ಮೋಹಕ ಅಭಿನಯದಿಂದಲೇ ಇಷ್ಟು ಹೆಸರು ಮಾಡುತ್ತಿರುವ ರಾಧಿಕಾ ಪಂಡಿತ್ ಬೇರೆ ನಾಯಕಿಯರಂತೆ ಚುಂಬಿಸಿ, ಚಮ್ಮಾಯಿಸಿ, ಬೇಡದ ದಾರಿಗೆ ಹೋಗದೇ ಇದ್ದಲ್ಲಿ ಕನ್ನಡ ಚಿತ್ರರಂಗದ ಅಗ್ರಸ್ಥಾನ ಪಡೆಯುವ ಎಲ್ಲ ಸಾಧ್ಯತೆಗಳೂ ಇವೆ...

ಏಳು ಗಂಡಂದಿರ ಪ್ರಿಯಾಂಕ

ಪ್ರಿಯಾಂಕ ಚೋಪ್ರಾಗೀಗ ಏಳು ಗಂಡಂದಿರು!!

ಪಾಪ, ಇನ್ನೂ ಅಫೇರ್‌ಗಳಲ್ಲೇ ಕಾಲ ಕಳೀತಾ ಇರೋ ಹುಡುಗಿ ಮೇಲ್ಯಾಕೆ ಆರೋಪ ಮಾಡ್ತೀರಿ ಅಂತೀರೇನೋ?

ವಿಷಯ ಇಷ್ಟೇ: ಬರಲಿರುವ ವಿಶಾಲ್ ಭಾರದ್ವಾಜ್ ನಿರ್ದೇಶನದ 'ಸಾತ್ ಖೂನ್ ಮಾಫ್' ಚಿತ್ರದಲ್ಲಿ ಪ್ರಿಯಾಂಕಾಗೆ ಏಳು ಗಂಡಂದಿರು. ಈ ಏಳು ಗಂಡಂದಿರಲ್ಲಿ ಮೊದಲನೆಯ ಪಾತ್ರವನ್ನು ನಾಸೀರುದ್ದೀನ್ ಷಾ ಮಾಡಿದ್ದರೆ, ಏಳನೇ ಗಂಡನ ಪಾತ್ರವನ್ನು ನಾಸೀರುದ್ದೀನನ ಕಿರಿಯ ಪುತ್ರ ವಿವಾನ್ ಷಾ ಮಾಡಿದ್ದಾನೆ!!

ಅಂದಂತೆ ಇದು ರಸ್ಕಿನ್‌ಬಾಂಡ್‌ನ 'ಸುಸನ್ನಾಸ್ ಸೆವೆನ್ ಹಸ್ಬೆಂಡ್ಸ್' ಕೃತಿ ಆಧರಿಸಿದ ಚಿತ್ರ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44